ಸಂಪುಟ: 13 Volume | ಸಂಚಿಕೆ: 346 Issue | ಪುಟಗಳು 08 Pages | ಮಂಗಳವಾರ 10 ಮಾರ್ಚ್ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | mallammanudi@gmail.com | www.mallammanudi.in | 9448604450, 7204184576

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಡಾ.ಎಂ.ಮಹ್ಮದ್ ಬಾಷ ಗೂಳ್ಯಂ

**ಬೆಳಗು**

ಕಲಿಕೆ ವಿಷಯ ಬರೀ ತಿಳುವಳಿಕೆಯ ಮಟ್ಟದಲ್ಲಿ ಉಳಿಯದೆ ಹೆಚ್ಚು ಅರ್ಥಪೂರ್ಣ ಮಾಡಬಲ್ಲ ಮನುಷ್ಯನೊಬ್ಬ ಬೇಕು. ಆತನೇ ಕೋಚ್ ಅಥವಾ ಗುರು.

–ಪಿ. ಲಂಕೇಶ್

ವಿದ್ಯಾರ್ಥಿ ಸಾವು: ಎಬಿವಿಪಿ ಪ್ರತಿಭಟನೆ 6

ಮಹಿಳೆ ಸಬಲತೆಯಿಂದ ಸಮಾಜ ಸಬಲ 7

ಉಪಮುಖ್ಯಮಂತ್ರಿ ಆಗ್ತಾರಾ ಪ್ರಿಯಾಂಕ್? 8

## ಮಲ್ಲಮ್ಮ ನುಡಿ

### ಯುಗಾದಿ ವಿಶೇಷಾಂಕ- 2026

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.


ಈ ಮೇಲ್: mallammanudi@gmail.com

## ಯುದ್ಧದಲ್ಲಿ ಸಿಲುಕಿದ ಭಾರತ ಪ್ರಜೆಗಳ ರಕ್ಷಣೆ

• ಮಲ್ಲಮ್ಮ ನುಡಿ ವಾರ್ತೆ ದೆಹಲಿ

ಇರಾನ್–ಇಸ್ರೇಲ್, ಅಮೆರಿಕ ನಡುವಣ ಯುದ್ಧದಲ್ಲಿ ಸಿಲುಕಿದವರನ್ನು ಸುರಕ್ಷಿತವಾಗಿ ಕರೆತರುವ ಎಲ್ಲಾ ಪ್ರಯತ್ನ ಮಾಡಲಾಗುತ್ತಿದೆ ಎಂದು ವಿದೇಶಾಂಗ ಸಚಿವ ಎಸ್ ಜೈಶಂಕರ್ ತಿಳಿಸಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಬಿಕ್ಕಟ್ಟಿನ ಕುರಿತು ರಾಜ್ಯಸಭೆಯಲ್ಲಿ ಹೇಳಿಕೆ ನೀಡಿದ್ದಾರೆ. ಪಶ್ಚಿಮ ಏಷ್ಯಾದ ಬೆಳವಣಿಗೆಗಳು ಎಲ್ಲರಿಗೂ ಗಂಭೀರ ಆತಂಕದ ವಿಷಯವಾಗಿದೆ. ಸಮಸ್ಯೆಗಳನ್ನು ಪರಿಹರಿಸಲು ಸಂವಾದ ಮತ್ತು ಚರ್ಚೆಯೇ ಸರಿಯಾದ ಮಾರ್ಗ ಎಂದು ತಿಳಿಸಿದ್ದಾರೆ.

ಫೆ.20ರಂದು ಭಾರತ ಸರ್ಕಾರ ಪ್ರಕಟಿಸಿದ ಹೇಳಿಕೆಯಲ್ಲಿ ಕೂಡ ಘರ್ಷಣೆಯಲ್ಲಿ ಸಂಬಂಧಪಟ್ಟವರೆಲ್ಲರೂ ಸಹನಶೀಲತೆ ತೋರಿಸಿ ಉದ್ವಿಗ್ನತೆ ಕಡಿಮೆ ಮಾಡಲು



ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಲಾಗಿತ್ತು. ಪ್ರಧಾನಿ ಪರಿಸ್ಥಿತಿಯನ್ನು ಸಮೀಪದಿಂದ ಗಮನಿಸುತ್ತಿದ್ದಾರೆ ಎಂದು ವಿವರಿಸಿದ್ದಾರೆ.

ಇರಾನ್ ಹಡಗಿನ ಬಗ್ಗೆ ಪ್ರತಿಕ್ರಿಯಿಸಿ, ಈ ಮಾನವೀಯ ಸಹಾಯಕ್ಕಾಗಿ ಇರಾನ್ ವಿದೇಶಾಂಗ ಸಚಿವರು ತಮ್ಮ ದೇಶದ ಪರವಾಗಿ ಧನ್ಯವಾದ ತಿಳಿಸಿದ್ದಾರೆ ಎಂದಿದ್ದಾರೆ.

## 12 ವರ್ಷ ಹಳೆಯ ಚಿತ್ರ ಸ್ಮರಿಸಿದ ಸೂರ್ಯ

• ಮಲ್ಲಮ್ಮ ನುಡಿ ವಾರ್ತೆ ಅಹಮದಾಬಾದ್

ಅಹಮದಾಬಾದ್‌ಲ್ಲಿ ತಮ್ಮ ತಂಡವನ್ನು ಟಿ20 ವಿಶ್ವಕಪ್ ಪ್ರಶಸ್ತಿಗೆ ಮುನ್ನಡೆಸಿದ ನಂತರ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ತಮ್ಮ ಹಿಂದಿನ ಚಿತ್ರವೊಂದನ್ನು ಹಂಚಿಕೊಂಡಿದ್ದಾರೆ. ಭಾರತ ತಂಡವು ಫೈನಲ್‌ನಲ್ಲಿ ನ್ಯೂಜಿಲೆಂಡ್ ಅನ್ನು 96 ರನ್‌ಗಳಿಂದ ಸೋಲಿಸಿ ಮೂರನೇ ಬಾರಿಗೆ ಟಿ20 ವಿಶ್ವಕಪ್ ಪ್ರಶಸ್ತಿಯನ್ನು ಗೆದ್ದಿದೆ. ಪ್ರಶಸ್ತಿಯನ್ನು ಉಳಿಸಿಕೊಂಡ ಮೊದಲ ತಂಡವಾಗಿದೆ. ಈ ಗೆಲುವಿನ ನಂತರ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಸೂರ್ಯ, 12 ವರ್ಷ ಹಳೆಯ ತಮ್ಮ ಚಿತ್ರವನ್ನು ರೀಪೋಸ್ಟ್ ಮಾಡಿ, ತಮ್ಮ ಪ್ರಯಾಣದಲ್ಲಿ ಎದುರಿಸಿದ ಹೋರಾಟಗಳನ್ನು ಎತ್ತಿ ಹಿಡಿದಿದ್ದಾರೆ.



ಸ್ನೇಹಿತನ ಪೆಟ್ರೋಲ್ ಪಂಪ್ ಉದ್ಘಾಟನೆ... ಅವನ ಈ ಸಾಧನೆಗೆ ನನಗೆ ತುಂಬಾ ಸಂತೋಷವಾಗಿದೆ ಎಂದು ಬರೆದಿರುವ ಜನವರಿ 17, 2014ರಲ್ಲಿ ಹಂಚಿಕೊಂಡಿರುವ ಪೋಸ್ಟ್ ಅನ್ನು ಸೂರ್ಯಕುಮಾರ್ ಯಾದವ್ ಮತ್ತೆ ಹಂಚಿಕೊಂಡಿದ್ದಾರೆ.

# ವಾರ್ ಷೇರುಮಾರ್ಕೆಟ್ ಶಾಕ್

## ಇರಾನ್ ಇಸ್ರೇಲ್, ಅಮೆರಿಕ ನಡುವಿನ ಭೀಕರ ಯುದ್ಧ | ಹೂಡಿಕೆದಾರರ 30 ಲಕ್ಷ ಕೋಟಿ ನಷ್ಟ | ಅಪಾರ ಸಾವು

• ಮಲ್ಲಮ್ಮ ನುಡಿ ವಾರ್ತೆ ಮುಂಬೈ

ಇರಾನ್ ಹಾಗೂ ಇಸ್ರೇಲ್, ಅಮೆರಿಕ ನಡುವಿನ ಯುದ್ಧ ತಾರಕ್ಕೇರಿದೆ. ಅಪಾರ ಸಾವು–ನೋವು ಸಂಭವಿಸಿದೆ. ಇದರಿಂದ ಜಾಗತಿಕ ಷೇರುಮಾರುಕಟ್ಟೆ ಶಾಕ್ ಆಗಿದೆ. ಯುದ್ಧ ಆರಂಭವಾದದಿನದಿಂದ ಇದುವರೆಗೂ ಹೂಡಿಕೆದಾರರ 30 ಲಕ್ಷ ಕೋಟಿ ನಷ್ಟವಾಗಿರುವುದಾಗಿ ಮೂಲಗಳು ಖಚಿತ ಪಡಿಸಿವೆ.

**ಹೂಡಿಕೆದಾರರು ವಿಲವಿಲ:** ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಇರಾನ್, ಅಮೆರಿಕ ನಡುವಿನ ಹಗೆತನವು ಭಾರತೀಯ ಷೇರುಗಳಲ್ಲಿ ತೀವ್ರ ಮಾರಾಟಕ್ಕೆ ಕಾರಣವಾಗಿದೆ. ಫೆಬ್ರವರಿಯಲ್ಲಿ ಅಮೆರಿಕ, ಇಸ್ರೇಲ್, ಇರಾನ್ ನಡುವಿನ ಸಂಘರ್ಷ ಪ್ರಾರಂಭವಾದಾಗಿನಿಂದ 31 ಲಕ್ಷ ಕೋಟಿ ರೂ. ಹೂಡಿಕೆದಾರರ ಸಂಪತ್ತನ್ನು ಅಳಿಸಿಹಾಕಿದೆ.

**ಭಾರತೀಯ ಷೇರಿಗೆ ಹೊಡೆತ:** ವಿಶ್ವದ ಮೂರನೇ ಅತಿದೊಡ್ಡ ಕಚ್ಚಾ ತೈಲ ಆಮದುದಾರ ರಾಷ್ಟ್ರ ಭಾರತದ ಮೇಲೂ ಯುದ್ಧ ಗಂಭೀರ ಪರಿಣಾಮ ಬೀರಿದೆ. 463 ಲಕ್ಷ ಕೋಟಿ ಇದ್ದ ಮಾರುಕಟ್ಟೆ ಬಂಡವಾಳ, ಮಾ. 6 ವೇಳೆಗೆ 444 ಲಕ್ಷ ಕೋಟಿಗೆ ಇಳಿಕೆ ಅಂದರೆ 19 ಲಕ್ಷ ಕೋಟಿ ಕುಸಿದಿತ್ತು. ಬಳಿಕ ಮಾ. 9ರ ವೇಳೆಗೆ ಈ ಪ್ರಮಾಣ ಮತ್ತೆ 12 ಲಕ್ಷ ಕೋಟಿ ಕುಸಿದು 432 ಲಕ್ಷ ಕೋಟಿಗಳಿಗೆ ತಲುಪಿದೆ.




### ಭಾರಿ ಪ್ರಮಾಣದದಲ್ಲಿ ಕುಸಿತ

ಮಾರುಕಟ್ಟೆ ಬಂಡವಾಳೀಕರಣದಲ್ಲಿ ಸೋಮವಾರವೇ, 12.78 ಟ್ರಿಲಿಯನ್ ರೂ. ನಷ್ಟವಾಗಿದೆ. ಬಿಎಸ್‌ಇ ಸೆನ್ಸೆಕ್ಸ್ ಶೇ.2.47 ಅಂದರೆ 1,946.82 ಅಂಕ ಕುಸಿದು 76,972.08 ಮಟ್ಟದಲ್ಲಿ ವಹಿವಾಟು ನಡೆಸುತ್ತಿದೆ. ಇದು ಹಿಂದಿನ ವಹಿವಾಟಿನ 78,918.90 ಅಂಕಗಳಿಂದ 2,299.65 ಅಂಕಗಳು ಅಥವಾ 2.91 ಶೇಕಡ ಕಡಿಮೆಯಾಗಿರುವುದು ಆತಂಕಕ್ಕೆ ಕಾರಣ.

### ಹಾರ್ಮುಜ್ ಜಲಸಂಧಿ ಭಯ

ಮಾರುಕಟ್ಟೆಯ ಪ್ರಕ್ಷುಬ್ಧತೆಯು ಕಚ್ಚಾ ತೈಲ ಬೆಲೆಗಳಲ್ಲಿ ನಾಟಕೀಯ ಏರಿಕೆಯೊಂದಿಗೆ ಹೊಂದಿಕೆಯಾಗುತ್ತದೆ. ಬ್ರೆಂಟ್ ಕಚ್ಚಾ ತೈಲವು ಒಂದು ವಾರದಲ್ಲಿ 25% ಕ್ಕಿಂತ ಹೆಚ್ಚು ಏರಿಕೆಯಾಗಿ, ಬ್ಯಾರೆಲ್‌ಗೆ $114 ಅನ್ನು ಸಂಕ್ಷಿಪ್ತವಾಗಿ ದಾಟಿದೆ. ಯುದ್ಧವು ಜಾಗತಿಕ ತೈಲ ವ್ಯಾಪಾರದ ಪ್ರಮುಖ ಅಪಧಮನಿಯಾದ ಹಾರ್ಮುಜ್ ಜಲಸಂಧಿಯ ಮೂಲಕ ಸಾಗಣೆಗೆ ಅಡ್ಡಿಯಾಗುವ ಭಯವನ್ನು ಉಂಟುಮಾಡಿದೆ.

### ಭಾರತದ ಪ್ರಜೆ ಗಂಭೀರ

ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿ ದಾಳಿ ಮುಂದುವರೆಸಿದ್ದು, ಕ್ಷಿಪಣಿಯ ಚೂರುಗಳು ಕುತ್ತಿಗೆಗೆ ತಗುಲಿ ಇಸ್ರೇಲ್‌ನಲ್ಲಿರುವ ಭಾರತೀಯ ಪ್ರಜೆಯೊಬ್ಬರು ಗಂಭೀರವಾಗಿ ಗಾಯಗೊಂಡಿ–ದ್ದಾರೆ. ಭಾನುವಾರ ಗಾಯಗೊಂಡಿದ್ದ ವ್ಯಕ್ತಿಗೆ ಟೆಲ್ ಅವಿವ್ ಇಚಿಲೋವ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, ಈಗ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಇರಾನ್‌ಗೆ ವಾರ್ನಿಂಗ್..!

ಅರಬ್ ರಾಷ್ಟ್ರಗಳ ಮೇಲೆ ದಾಳಿ ಮುಂದುವರೆಸಿದ್ರೆ ದೊಡ್ಡ ಪ್ರಮಾಣದ ನಷ್ಟ ಅನುಭವಿಸಬೇಕಾಗುತ್ತದೆ ಎಂದು ಸೌದಿ ಅರೇಬಿಯಾ ಸೋಮವಾರ ಇರಾನ್‌ಗೆ ಬಿಗ್ ವಾರ್ನಿಂಗ್ ನೀಡಿದೆ. ಬೃಹತ್ ಶೈಬಾ ತೈಲ ಕೇಂದ್ರದ ಮೇಲೆ ಮತ್ತೆ ಡ್ರೋನ್ ದಾಳಿ ನಡೆದ ನಂತರ ಸೌದಿ ಅರೇಬಿಯಾ ಈ ಹೇಳಿಕೆ ನೀಡಿದೆ. ಗಲ್ಫ್ ರಾಷ್ಟ್ರಗಳ ಮೇಲೆ ಇರಾನ್ ತನ್ನ ದಾಳಿಯನ್ನು ನಿಲ್ಲಿಸಿದೆ ಎಂಬ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಅವರ ಹೇಳಿಕೆಯನ್ನು ಸೌದಿ ಅರೇಬಿಯಾ ತಳ್ಳಿಹಾಕಿದೆ.

### ಅಮೆರಿಕ–ಇಸ್ರೇಲ್ ಭಿನ್ನ..?

ವಾರಾಂತ್ಯದಲ್ಲಿ ಇರಾನಿನ ತೈಲ ಸಂಗ್ರಹಣಾ ಕೇಂದ್ರಗಳ ಮೇಲೆ ಇಸ್ರೇಲಿ ದಾಳಿಯಿಂದ ಧಗಧಗನೆ ಹೊತ್ತಿ ಉರಿದಿದ್ದು, ನಾಲ್ವರು ಮೃತಪಟ್ಟಿದ್ದಾರೆ. ಇದು ಮಿತ್ರ ರಾಷ್ಟ್ರ ಅಮೆರಿಕದೊಂದಿಗೆ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿದೆ. ಟೆಲ್ ಅವಿವ್ ಮೇಲಿನ ದಾಳಿ ಬಗ್ಗೆ ಅಮೆರಿಕ ಎಚ್ಚರಿಕೆ ನೀಡಿದೆ ಎಂದು ಎಂದು ಸುದ್ದಿವಾಹಿನಿ ವರದಿ ಮಾಡಿದೆ. ಈ ಕುರಿತು ಶ್ವೇತಭವನ –ಇಸ್ರೇಲ್ ರಕ್ಷಣಾ ಪಡೆ ಇದುವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

## ಶಾಸಕ ಶಿವಗಂಗಾ ಪಿಎ ಆತ್ಮಹತ್ಯೆ

**ಬೆಂಗಳೂರು:** ಚನ್ನಗಿರಿ ಕಾಂಗ್ರೆಸ್ ಶಾಸಕ ಬಸವರಾಜ್ ಶಿವಗಂಗಾ ಅವರ ಪಿಎ ಆತ್ಮಹತ್ಯೆಗೆ ಮಾಡಿಕೊಂಡಿದ್ದಾರೆ. ಇಲ್ಲಿನ ಉಪ್ಪಾರಪೇಟೆ ಬಳಿಯ ಲಾಡ್ಜ್‌ನಲ್ಲಿ ಈ ಘಟನೆ ನಡೆದಿದೆ. ಮೃತರನ್ನು ದಾವಣಗೆರೆ ಮೂಲದ ಶಿವಕುಮಾರ್ ಎಂದು ಗುರುತಿಸಲಾಗಿದೆ. ಮೃತ ಶಿವಕುಮಾರ್ ಮೈ ತುಂಬಾ ಸಾಲ ಮಾಡಿಕೊಂಡಿದ್ದರು. ಕೆಲ ದಿನಗಳ ಹಿಂದೆಯಷ್ಟೇ ಕೆಲಸದಿಂದ ತೆಗೆಯಲಾಗಿತ್ತು. ಘಟನೆ ನಡೆದ ದಿನ ಹೆಂಡತಿಗೆ ವಿಡಿಯೊ ಕಾಲ್ ಮಾಡಿ, ನನಗೆ ಜೀವನ ಸಾಕಾಗಿದೆ, ಸಾಯುತ್ತೀನಿ ಎಂದು ಹೇಳಿ ಫೆ.17ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

## ಆರೆಸ್ಸೆಸ್ ನಿಷೇಧ ಕೇವಲ ಭ್ರಮೆ

**ಭಟ್ಕಳ:** ಆರ್‌ಎಸ್ಸೆಸ್ ನಿಷೇಧಿಸುತ್ತೇವೆ ಎನ್ನುವುದು ಕೇವಲ ಭ್ರಮೆ ಎಂದು ಮಾಜಿ ಸಂಸದ ಅನಂತ್ ಕುಮಾರ್ ಹೆಗಡೆ ಸ್ಪಷ್ಟಪಡಿಸಿದ್ದಾರೆ.



ನಿನ್ನೆ ಭಟ್ಕಳದ ಸಾರ್ವಜನಿಕ ವೇದಿಕೆಯಲ್ಲಿ ನಡೆದ 'ಹಿಂದೂ ಸಂಗಮ' ಸಮಾವೇಶದಲ್ಲಿ ಭಾಗವಹಿಸಿ ತಮ್ಮ ಹಿಂದುತ್ವ ಶೈಲಿಯಲ್ಲಿಯೇ ಮಾತನಾಡಿ, ಶೇ. 90ರಷ್ಟು ಋಷಿಗಳು ಬ್ರಾಹ್ಮಣರಲ್ಲ. ವಾಲ್ಮೀಕಿ, ವಿಶ್ವಾಮಿತ್ರ ಬ್ರಾಹ್ಮಣರಲ್ಲ. ಈ ದೇಶದಲ್ಲಿ ಜಾತಿಗೆ ಎಂದಿಗೂ ಬೆಲೆಯಿರಲಿಲ್ಲ, ಯೋಗ್ಯತೆಗೆ ಮಾತ್ರ ಬೆಲೆಯಿತ್ತು. ಇಂದು ಜಾತಿಗೆ ಬೆಲೆ ಕೊಟ್ಟಿದ್ದು ನಮ್ಮಂತಹ ಬುದ್ಧಿವಂತರು. ಇತಿಹಾಸ ಓದಿದರೆ ಸತ್ಯ ತಿಳಿಯುತ್ತದೆ ಎಂದಿದ್ದಾರೆ.

## 240 ಸಂಸದರ ವಿರುದ್ಧ ಸಂಚು: ದೂರು

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಹಿಂದಿನ ಬಜೆಟ್ ಅಧಿವೇಶನದಲ್ಲಿ ತಟಸ್ಥತೆಯನ್ನು ತ್ಯಜಿಸಿ ವಿರೋಧ ಪಕ್ಷದ ಧ್ವನಿಯನ್ನು ಹತ್ತಿಕ್ಕಿದ್ದಾರೆ ಎಂದು ಕಾಂಗ್ರೆಸ್ ಸಂಸದ ಮಾಣಿಕಮ್ ಟ್ಯಾಗೋರ್ ಆರೋಪಿಸಿದ್ದಾರೆ. ಅಲ್ಲದೆ "ಪ್ರತಿಪಕ್ಷದ 240 ಸಂಸದರನ್ನು" ಅಮಾನತುಗೊಳಿಸುವ ಸಂಚು ಇದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ಹಂತವು ಇಂದು ಆರಂಭವಾಗಿದ್ದು, ಕಾಂಗ್ರೆಸ್ ಸಂಸದರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ನಿರ್ಧರಿಸಿದ್ದಾರೆ.

ಸ್ಪೀಕರ್ ತಟಸ್ಥವಾಗಿ ವರ್ತಿಸಬೇಕು. ಆದರೆ ಅದು ನಡೆಯುತ್ತಿಲ್ಲ. ಸ್ಪೀಕರ್ ವಿರೋಧ ಪಕ್ಷದ ಸದಸ್ಯರನ್ನು ಮಾತನಾಡಲು ಬಿಡುವುದಿಲ್ಲ. ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿಗೆ ಮಾತನಾಡಲು ಅವಕಾಶ ನೀಡಬೇಕು ಎಂದಿದ್ದಾರೆ.

ಅವರು(ಆಡಳಿತ ಪಕ್ಷ) ವಿರೋಧ ಪಕ್ಷದ ಎಲ್ಲಾ 240 ಸಂಸದರನ್ನು ಅಮಾನತುಗೊಳಿಸಲು ಯೋಜಿಸಿದ್ದಾರೆ. ಇದರ ವಿರುದ್ಧ ನಾವು ಅವಿಶ್ವಾಸ ನಿರ್ಣಯ ತಂದಿದ್ದೇವೆ ಎಂದರು.

## ಕನಕಗಿರಿ ಜಾತ್ರೆ ಮಹೋತ್ಸವ




• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಕನಕಗಿರಿ ಜಾತ್ರೆ ಮಹೋತ್ಸವದ, ಕಣ್ಣು ಇದ್ರೆ ಕನಕಗಿರಿ ನೋಡು ಕಾಲ್ ಇದ್ದರೆ ಹಂಪಿ ನೋಡು ಎಂಬ ಐತಿಹಾಸಿಕ ನಾನುಡಿಯಂತೆ ಸರ್ವ ಸಭಕ್ತರಿಗೂ ಕನಕಾಚಲಪತಿ ( ಲಕ್ಷ್ಮಿ ನರಸಿಂಹ ) ಸರ್ವಭಕ್ತರು ಕರ್ನಾಟಕ, ಆಂಧ್ರ, ತೆಲಂಗಣ, ಮತ್ತು ಕೇರಳ. ಕನಕಾಚಲಪತಿ ದೇವರ ಕೃಪೆ ಪಾತ್ರರಾಗಬೇಕೆಂದು ಸರ್ವಭಕ್ತರಿಗೂ ಸ್ವಾಗತ.

**ಸ್ವಾಗತ ಕೋರುವವರ:** ಹಿರೇಖ್ಯಾಡ ಗ್ರಾಮ ಪಂಚಾಯಿತಿ, ಆಡಳಿತ ಅಧಿಕಾರಿಗಳಾದ, ವಿರುಪಾಕ್ಷಯ್ಯ ಸರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ಮಲ್ಲಿಕಾರ್ಜುನ್, ಕಾರ್ಯದರ್ಶಿಗಳಾದ ಗಂಗಪ್ಪ, ಡಾಟಾ ಆಪರೇಟ್ ಹೊಳೆಯಪ್ಪ, ಬಿಲ್ ಕಲೆಕ್ಟರ್ ರವಿ ಕಾಂತ್ ಗೌಡ, ಹೊನ್ನೂರ್ ಬಾಷಾ ಮತ್ತು ಗ್ರಾಮ ಪಂಚಾಯತಿ ಸಿಬ್ಬಂದಿಗಳು.

## ಮಾವು ಬೆಳೆ ರೈತರ ಮುಖದಲ್ಲಿ ಕಳೆ..!

• ಮಲ್ಲಮ್ಮ ನುಡಿ ವಾರ್ತೆ ಡಿ.ಕೆ. ಪ್ರಹ್ಲಾದ, ಬಸವಕಲ್ಯಾಣ

ತಾಲೂಕಿನ ಗಾಮೀಣ ಭಾಗದಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಮಾವಿನ ಮರಗಳ ಹೂವು ಜನರ ಗಮನ ಸೆಳೆಯುತ್ತಿದೆ. ರೈತರಲ್ಲಿ ಲಾಭದ ನೀರಿಕ್ಷೆ ಚಿಗುರೊಡದಿದೆ. ಈ ವರ್ಷವೂ ವಾತಾವರಣ ಉತ್ತಮವಾಗಿದ್ದು, ಮರದಲ್ಲಿ ಹೂವು ರೈತರಿಗೆ ಲಾಭ ತಂದು ಕೊಡುವ ನಿರೀಕ್ಷೆ ಇದೆ. ಸುರಿದ ಮಳೆ, ಚಳಿಗಾಳಿಯಿಂದಾಗಿ ಮಾವಿನ ಮರಗಳಿಗೆ ಹೂವು ಬಿಡುವುದು ಅಧಿಕ. ಈ ಬಾರಿಯ ಬೆಳೆ ಉತ್ತಮವಾಗಿದ್ದು ಲಾಭದಾಯಕ ರೀಕ್ಷೆಯಲ್ಲಿದ್ದೇವೆ ಎನ್ನುತ್ತಿದ್ದಾರೆ ಬೀದರ್ ಜಿಲ್ಲೆ ಹಾಗೂ ಬಸವಕಲ್ಯಾಣ, ಹುಮ್ನಾಬಾದ್ ರೈತರು.



### ಕಣ್ಮನ ಸೆಳೆಯುವ ಹೂವು..!

ಕೆಲವು ಮಾವಿನ ಮರಗಳಿಗೆ ಹೂವು ಭಾರಿ ಪ್ರಮಾಣದಲ್ಲಿ ಕಾತಿವೆ. ಹಲವು ಮರಗಳಲ್ಲಿ ಬೆರಳೆಣಿಕೆಯಷ್ಟು ಹೂವು ಕಾಣುತ್ತಿದೆ. ಈಗಾಗಲೇ ಸ್ವಲ್ಪ ಮಟ್ಟಿಗೆ ಬಿಸಿಲು ತಾಪಮಾನ ಹೆಚ್ಚಾಗುತ್ತಿದೆ. ಇದರಿಂದ ಹೂವು ಮರದಲ್ಲಿ ಜಾಸ್ತಿಯಿಗುವ ನಿರೀಕ್ಷೆ ಇದೆ. ಬಸವಕಲ್ಯಾಣ ಹಾಗೂ ಗ್ರಾಮಿಣ ಪ್ರದೇಶದ ಹೂಲ ಗದ್ದೆಗಳಲ್ಲಿ ಮಾವಿನ ಮರಕ್ಕೆ ಹೂವು ನೋಡುವುದೇ ಒಂದು ಸೊಗಸು..!

ನಾವು ಸೇರಿ ಅನೇಕ ರೈತರು ಇದೇ ಫಸಲನ್ನು ನಂಬಿ ಬದುಕು ಸಾಗಿಸುತ್ತಿದ್ದೇವೆ. ಹಲವಾರು ಕುಟುಂಬಗಳು ವರ್ಷಕ್ಕೊಮ್ಮೆ ಸರಿಯಾಗಿ ಮಾವಿನ ಫಸಲು ಬಂದರೆ ಕೈ ತುಂಬಾ ಕಾಸು ಬರುತ್ತದೆ. ಇಲ್ಲಾಂದ್ರೆ ತುಂಬಾ ಕಷ್ಟ.

–ಮಡಿವಾಳಪ್ಪಾ ಪಾಟೀಲ, ಪ್ರಭು ಪಾಟೀಲ, ಶಿವರಾಜ ಸ್ವಾಮಿ, ರೈತರು

ಕೆಲವು ಸಚಿವರು ಕಳೆದ ಕೆಲವು ಅಧಿವೇಶನಗಳಿಂದ ಸದನಕ್ಕೆ ಬಂದಿಲ್ಲ. ಅಂಥ ಸಚಿವರು ಸದನಕ್ಕೆ ಬರುವಂತೆ ಮಾಡುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ: ಅರವಿಂದ ಬೆಲ್ಲದ, ವಿಧಾನಸಭೆಯ ವಿಪಕ್ಷ ಉಪ ನಾಯಕ

# ವಚನಗಳಲ್ಲಿ ಬದುಕಿನ ಮೌಲ್ಯ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ವಿಶ್ವಗುರು ಬಸವಣ್ಣನವರ ವಚನಗಳಲ್ಲಿ ಬದುಕಿನ ಮೌಲ್ಯಗಳು ಅಡಗಿವೆ ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು.

> "ಕಲ್ಯಾಣ ಮಹೋತ್ಸವಗಳು ಕೇವಲ ಆಡಂಬರಕ್ಕೆ ಸೀಮಿತ ಆಗುತ್ತಿರುವ ಈ ಹೊತ್ತಿನಲ್ಲಿ ಬಾವುಗೆ ಪರಿವಾರದ ಕಲ್ಯಾಣ ಮಹೋತ್ಸವದಲ್ಲಿ ಬಸವ ವಚನಾರ್ಥ ಗ್ರಂಥ ಬಿಡುಗಡೆಗೊಂಡಿರುವುದು ಅರ್ಥಪೂರ್ಣ ಎನಸಿದೆ.
>
> **ಡಿ.ಕೆ.ಸಿದ್ರಾಮ ಅಧ್ಯಕ್ಷರು ಡಾ.ಚನ್ನಬಸವ ಪಟ್ಟದ್ದೇವರು ಬ್ಯಾಂಕ್ ಭಾಲ್ಕಿ**

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಬಾವುಗೆ ಪರಿವಾರದಿಂದ ಕಲ್ಯಾಣ ಮಹೋತ್ಸವ ನಿಮಿತ್ತ ಭಾನುವಾರ ನಡೆದ ಬಸವ ವಚನಾರ್ಥ ಗ್ರಂಥ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮನುಷ್ಯನ ಎಲ್ಲ ಸಮಸ್ಯೆ, ನೋವು ನಲಿವುಗಳಿಗೆ ಬಸವಣ್ಣನವರ ವಚನಗಳಲ್ಲಿ ಪರಿಹಾರ ಅಡಗಿವೆ. ಬಸವಣ್ಣನವರ ಆಶಯದಂತೆ ನಡೆದರೆ ಪ್ರತಿಯೊಬ್ಬರ ಬದುಕು ಸುಂದರವಾಗಿ ರೂಪಗೊಳ್ಳಲಿದೆ ಎಂದು ತಿಳಿಸಿದರು.

ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ನೇತೃತ್ವ ವಹಿಸಿದ್ದರು. ಅನುಭವ ಮಂಟಪದ ಸಂಚಾಲಕ ಶಿವಾನಂದ ಸ್ವಾಮೀಜಿ, ರಾಜಯೋಗಿನಿ ಬ್ರಹ್ಮಕುಮಾರಿ ರಾಧಾ ಬಹನಜೀ ಸಮ್ಮುಖ ವಹಿಸಿದ್ದರು.

ಡಾ.ಚನ್ನಬಸವ ಪಟ್ಟದ್ದೇವರ ಬ್ಯಾಂಕ್ ನ ಅಧ್ಯಕ್ಷ ಡಿ.ಕೆ.ಸಿದ್ರಾಮ ಅವರು ಬಸವ ವಚನಾರ್ಥ ಗ್ರಂಥ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ, ಹಿರಿಯ ನ್ಯಾಯವಾದಿ ರಾಜಶೇಖರ ಅಷ್ಟೂರೆ, ಈರಮ್ಮ ಗುರುಪಾದಪ್ಪ ಫಾಳೆ, ಶರಣಪ್ಪ ಬಿರಾದಾರ್, ಮಲ್ಲಮ್ಮ ನಾಗನಕೇರೆ, ನೂತನ ವಧು ವರರಾದ ಭಕ್ತಿಶ್ರೀ ಮಹೇಶಕುಮಾರ, ಶಿವಲೀಲಾ ಶಿವಕುಮಾರ ಪಾಟೀಲ್ ನವಲಸಪುರ, ದೀಕ್ಷಾ ಗಣಪತಿ ಬಾವುಗೆ ಸೇರಿದಂತೆ ಹಲವರು ಇದ್ದರು.

ರಾಜು ಜುಬರೆ ವಚನ ಗಾಯನ ನಡೆಸಿ ಕೊಟ್ಟರು. ಗಣಪತಿ ಬಾವುಗೆ ಸ್ವಾಗತಿಸಿದರು. ನವಲಿಂಗ ಪಾಟೀಲ್, ದೀಪಕ ಠಮಕೆ ನಿರೂಪಿಸಿದರು.

# ಸಮಾಜದ ಅಭಿವೃದ್ಧಿಗೆ ಮಹಿಳೆಯರು ಮಹತ್ವದ ಕೊಡುಗೆ ನೀಡುತ್ತಿದ್ದಾರೆ: ಈಶ್ವರ ಖಂಡ್ರೆ



• ಮಲ್ಲಮ್ಮ ನುಡಿ ವಾರ್ತೆ ಬೀದರ್

ಮಹಿಳೆಯರು ಇಂದು ಶಿಕ್ಷಣ, ಉದ್ಯೋಗ, ರಾಜಕೀಯ ಹಾಗೂ ಕ್ರೀಡಾ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮ ಸಾಮರ್ಥ್ಯವನ್ನು ತೋರಿಸಿ ಸಮಾಜದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಹೇಳಿದರು.

ಅವರು ರವಿವಾರ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಆಯೋಜಿಸಿದ 2025‑26ನೇ ಸಾಲಿನ ಬೀದರ ಜಿಲ್ಲಾ ಮಟ್ಟದ ಮಹಿಳಾ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು.

ಕ್ರೀಡೆಗಳು ಮಹಿಳೆಯರ ಆರೋಗ್ಯ, ಆತ್ಮವಿಶ್ವಾಸ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇಂತಹ ಕ್ರೀಡಾಕೂಟಗಳು ಗ್ರಾಮೀಣ ಹಾಗೂ ನಗರ ಭಾಗಗಳ ಮಹಿಳೆಯರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆಯಾಗುತ್ತವೆ. ಜಿಲ್ಲೆಯ ಮಹಿಳಾ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಬೇಕು ಎಂದು ಸಚಿವರು ಹಾರೈಸಿದರು.

ಈ ಸಂದರ್ಭದಲ್ಲಿ ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಮ ಖಾನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ಯುವಜನ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಪ್ರಕಾಶ, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಸೇರಿದಂತೆ ಅನೇಕ ಮಹಿಳಾ ಕ್ರೀಡಾಪಟುಗಳು ಉಪಸ್ಥಿತರಿದ್ದರು.

# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



## ಕಟ್ಟ ಕಡೆಯ ಜನಾಂಗದವರಿಗೂ ಸರ್ಕಾರಿ ಸೌಲಭ್ಯ ದೊರಕಲಿ

ರಾಜ್ಯ ಮತ್ತು ದೇಶದ ಅಭಿವೃದ್ಧಿ ಎನ್ನುವುದು ಕೇವಲ ನಗರಗಳು ಅಥವಾ ಶ್ರೀಮಂತ ವರ್ಗದವರ ಬೆಳವಣಿಗೆಯಲ್ಲ; ಸಮಾಜದ ಕಟ್ಟಕಡೆಯ ಜನಾಂಗದವರಿಗೂ ಸಮಾನ ಅವಕಾಶಗಳು ಮತ್ತು ಸೌಲಭ್ಯಗಳು ತಲುಪಿದಾಗ ಮಾತ್ರ ನಿಜವಾದ ಅಭಿವೃದ್ಧಿ ಸಾಧ್ಯವಾಗುತ್ತದೆ. ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ವಾಸಿಸುವ ಹಲವಾರು ಜನಾಂಗಗಳು ಇಂದಿಗೂ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವುದು ವಿಷಾದಕರ ಸಂಗತಿ.

ಸರ್ಕಾರವು ಜಾರಿಗೆ ತಂದಿರುವ ಅನೇಕ ಯೋಜನೆಗಳು ಕಾಗದದಲ್ಲೇ ಉಳಿಯದೇ, ನಿಜವಾಗಿಯೂ ಕಟ್ಟಕಡೆಯ ಜನರಿಗೆ ತಲುಪುವಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಶಿಕ್ಷಣ, ಆರೋಗ್ಯ, ವಸತಿ, ಕುಡಿಯುವ ನೀರು, ಉದ್ಯೋಗ ಮತ್ತು ಸಾಮಾಜಿಕ ಭದ್ರತೆ ಸೇರಿದಂತೆ ಅಗತ್ಯ ಸೌಲಭ್ಯಗಳು ಸಮಾನವಾಗಿ ದೊರಕುವಂತೆ ನೋಡಿಕೊಳ್ಳುವುದು ಸರ್ಕಾರದ ಪ್ರಮುಖ ಕರ್ತವ್ಯವಾಗಿದೆ.

ಹಿಂದುಳಿದ ವರ್ಗಗಳು ಮತ್ತು ಕಟ್ಟಕಡೆಯ ಜನಾಂಗದವರು ಸರಕಾರಿ ಯೋಜನೆಗಳ ಬಗ್ಗೆ ಸರಿಯಾದ ಮಾಹಿತಿ ಪಡೆಯದೇ ಇರುವುದೂ ಒಂದು ದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ ಅಧಿಕಾರಿಗಳು ಗ್ರಾಮ ಮಟ್ಟಕ್ಕೆ ಭೇಟಿ ನೀಡಿ ಜನರಿಗೆ ಯೋಜನೆಗಳ ಕುರಿತು ತಿಳಿಸಿ, ಅವರಿಗೆ ಲಾಭ ದೊರಕುವಂತೆ ಕ್ರಮ ಕೈಗೊಳ್ಳಬೇಕು.

ಸಮಾಜದ ಕಟ್ಟಕಡೆಯ ವ್ಯಕ್ತಿಯ ಬದುಕು ಸುಧಾರಿಸಿದಾಗ ಮಾತ್ರ ದೇಶದ ಅಭಿವೃದ್ಧಿ ಸಮಗ್ರವಾಗುತ್ತದೆ. ಆದ್ದರಿಂದ ಸರ್ಕಾರ ಹಾಗೂ ಅಧಿಕಾರಿಗಳು ಜನಪರ ದೃಷ್ಟಿಯಿಂದ ಕೆಲಸ ಮಾಡಿ, ಕಟ್ಟಕಡೆಯ ಜನಾಂಗದವರಿಗೂ ಎಲ್ಲಾ ಸರ್ಕಾರಿ ಸೌಲಭ್ಯಗಳು ತಲುಪುವಂತೆ ಮಾಡುವುದು ಅತ್ಯಂತ ಅಗತ್ಯವಾಗಿದೆ.

# ಪುರಾಣ: ಸಮಾಜದಲ್ಲಿ ಸಂಸ್ಕೃತಿ ಸಂಸ್ಕಾರ ಬೆಳಸಲು ಸಹಕಾರಿ

• ಮಲ್ಲಮ್ಮ ನುಡಿ ವಾರ್ತೆ ಕುರುಗೋಡು

ವೇಗದಿಂದ ಸಾಗುತ್ತಿರುವ ಆಧುನಿಕ ಯುಗದಲ್ಲಿ ನಡೆಯುವ ಪುರಾಣ ಪ್ರವಚನ ಧಾರ್ಮಿಕ ಕಾರ್ಯಕ್ರಮಗಳು ಪ್ರಸ್ತುತ ಸಮಾಜದಲ್ಲಿ ಸಂಸ್ಕೃತಿ ಸಂಸ್ಕಾರ ಬೆಳಸಲು ಸಹಕಾರಿ ಎಂದು ಕೊಟ್ಟೂರು ಶಾಖಾ ಮಠದ ಶ್ರೀ ನಿರಂಜನ ಪ್ರಭು ಸ್ವಾಮೀಜಿ ಹೇಳಿದರು.

ಇಲ್ಲಿಗೆ ಸಮೀಪದ ಗೆಣೀಕೆಹಾಳು ಗ್ರಾಮದ ಶ್ರೀ ಶಾಂತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬುಧವಾರ ನಡೆದ ಕಲ್ಬುರ್ಗಿ ಶರಣಬಸವೇಶ್ವರ ಸ್ವಾಮಿಯ ಪುರಾಣ ಮಂಗಲ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಪವಾಡ ಪುರುಷ ಕಲ್ಬುರ್ಗಿ ಶರಣಬಸವೇಶ್ವರ ಪುರಾಣ ಪ್ರವಚನ ಶ್ರವಣದಿಂದ ಭಗವಂತನ ಸಾಕ್ಷಾತ್ಕಾರ ಗ್ರಾಮದ ಪ್ರತಿಯೊಬ್ಬರಿಗೂ ಲಭಿಸಲಿ ಎಂದು ಆಶೀರ್ವಾಚನ ನೀಡಿದರು. ನಂತರ ಅರೇಳೆಹಳ್ಳಿ ಪರಮಪೂಜ್ಯ, ಗವಿಸಿದ್ದಯ್ಯ ತಾತನವರು ಮಾತನಾಡಿ ಗೆಣೀಕೆಹಾಳು ಗ್ರಾಮದಲ್ಲಿ ಪ್ರತಿ ವರ್ಷ ನಡೆಯುವ ಧಾರ್ಮಿಕ ಕಾರ್ಯಕ್ರಮಗಳು ಧರ್ಮದ ಬೇರುಗಳನ್ನು ಸಮಾಜಕ್ಕೆ ಪಸರಿಸುವ ಕಾರ್ಯ ಮಾಡುತ್ತಿರುವುದು ಸಂತಸದ ಸಂಗತಿಯಾಗಿದೆ, ನಿಮಗೆ ಭಗವಂತನ ಆಶೀರ್ವಾದ ದೊರೆಯಲಿ ಎಂದು, ಶ್ರೀ ಗಳು ಮಾತನಾಡಿದರು. ಪ್ರಥಮವಾಗಿ ಶ್ರೀ ಶರಣಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಡೊಳ್ಳು ಕುಣಿತ ಸಮಳ ನಂದಿಕೋಲು ಸಮೇತ ಕಳಶ ಹೊತ್ತ ಸುಮಂಗಲಿಯರು ಸಮ್ಮುಖದಲ್ಲಿ ಶಾಂತೇಶ್ವರ ದೇವಾಲಯದಲ್ಲಿ ಸಮಾರೋಪಗೊಂಡಿತು ತದನಂತರ ವಿವಿಧ ಮಠಾಧೀಶರು ಆಶೀರ್ವಾಚನ ನೀಡಿದರು ಉಡಿ ತುಂಬುವ ಕಾರ್ಯಕ್ರಮ ನಡೆಯಿತು.

# ಅಂತರ್ಜಾತಿ ವಿವಾಹ: ವ್ಯಕ್ತಿಗೆ ಗಂಭೀರ ಗಾಯ, ಬಳಗೇರಿಯಲ್ಲಿ ಬಿಗುವಿನ ವಾತಾವರಣ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಪೊಲೀಸ್ ಠಾಣಾ ವ್ಯಾಪ್ತಿಯ ಬಳಗೇರಿ ಗ್ರಾಮದಲ್ಲಿ ಅಂತರ್ಜಾತಿ ವಿವಾಹದ ಹಿನ್ನೆಲೆ ಗಲಾಟೆ ಸಂಭವಿಸಿ ವ್ಯಕ್ತಿಯೊಬ್ಬರಿಗೆ ಗಂಭೀರ ಗಾಯವಾದ ಘಟನೆ ನಡೆದಿದೆ ಎಂದು ತಿಳಿದುಬಂದಿದೆ.

ಲಿಂಗಾಯತ ಸಮುದಾಯಕ್ಕೆ ಸೇರಿದ ಯುವಕ ಹಾಗೂ ಬಾರ–ಕೇರ(ಗಂಗಾಮತ) ಸಮುದಾಯಕ್ಕೆ ಸೇರಿದ ಯುವತಿ ಪರಸ್ಪರ ಪ್ರೀತಿಸಿ ಮೂರ್ನಾಲ್ಕು ದಿನಗಳ ಹಿಂದೆ ಮದುವೆಯಾಗಿದ್ದಾರೆ ಎಂದು ಹೇಳಲಾಗಿದೆ. ಪ್ರೀತಿಸಿದ ಯುವಕ ಮತ್ತು ಯುವತಿ ಇಬ್ಬರೂ ಬಳಗೇರಿ ಗ್ರಾಮದವರಾಗಿದ್ದು, ಇಬ್ಬರೂ ವಯಸ್ಸಿನ ಮೇಜರ್ ಆಗಿದ್ದಾರೆ ಎಂದು ತಿಳಿದು ಬಂದಿದೆ.

ಯುವತಿಯ ಸಂಬಂಧಿಕರು ಗದಗ್ ಜಿಲ್ಲೆಯ ರೋಣ ತಾಲೂಕಿನ ಶಾಂತಿಗಿರಿ ಇಟಗಿ ಗ್ರಾಮದವರಾಗಿದ್ದು, ಮದುವೆಯ ವಿಷಯ ತಿಳಿದ ನಂತರ ಬಳಗೇರಿ ಗ್ರಾಮಕ್ಕೆ ಬಂದು ಗಲಾಟೆ ನಡೆಸಿದ್ದಾರೆ ಎಂದು ಹೇಳಲಾಗಿದೆ. ಬಳಗೇರಿ ಗ್ರಾಮದ ಗ್ಯಾರೇಜ್ ಸಮೀಪ ನಡೆದ ಜಗಳದಲ್ಲಿ ಬಸಪ್ಪ ತಳವಾರ್ (69) ಎಂಬುವವರಿಗೆ ಗಂಭೀರ ಗಾಯಗಳಾಗಿದ್ದು, ಅವರನ್ನು ಕುಕನೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿದುಬಂದಿದೆ. ಘಟನೆಯ ನಂತರ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣಗೊಂಡಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದಾರೆ. ಪ್ರಕರಣಕ್ಕೆ ಸಂಬಂಧ ಕುಕನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸುವ ಸಂಭವ ನಡೆಯುತ್ತಿದೆ ಎಂದು ತಿಳಿದುಬಂದಿದೆ.

# ರಾಷ್ಟ್ರೀಯ ಸಮ್ಮೇಳನ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು "Exploring Nature's Pharmacy: Potentials of Medicinal and Aromatic Plants for Health, Livelihoods, Bio-economy and Conservation" ವಿಷಯ ಮೇಲೆ 2026ನೇ ಮಾರ್ಚ.24 ರಿಂದ 26 ರವರೆಗೆ ಮೂರು ದಿನಗಳ ರಾಷ್ಟ್ರೀಯ ಸಮ್ಮೇಳವನ್ನು ಅಕಾಡೆಮಿಯ ಕಛೇರಿಯಲ್ಲಿ ಆಯೋಜಿಸಲಾಗುತ್ತಿದೆ ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಮ್ಮೇಳನದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸಗಳನ್ನು ನೀಡಲಿದ್ದಾರೆ. ಈ ಸಮ್ಮೇಳನದಲ್ಲಿ ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಯುವ ವಿಜ್ಞಾನಿಗಳು, ಯುವ ಉದ್ಯಮಿದಾರರು ಭಾಗವಹಿಸಬಹುದಾಗಿದೆ. ಅಲ್ಲದೇ ಯುವ ವಿಜ್ಞಾನಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಸಂಶೋಧನಾ ಪ್ರಬಂಧವನ್ನು ಸಹ ಮಂಡಿಸಲು ಅವಕಾಶ ಕಲ್ಪಿಸಲಾಗಿದ್ದು, ಆಯ್ಕೆಯಾದ ಸಂಶೋಧನಾ ಪ್ರಬಂಧಕ್ಕೆ ನಗದು ಬಹುಮಾನವನ್ನು ನೀಡಲಾಗುತ್ತದೆ.

ಆಸಕ್ತರು 2026ನೇ ಮಾರ್ಚ.20 ರೊಳಗಾಗಿ ರಜಿಸ್ಟ್ರೇಷನ್ ಲಿಂಕ್ https://forms.gle/xnlek2pwuBTXmNyz7 ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ಅಧಿಕಾರಗಳ ಮೊಬೈಲ್ ಸಂಖ್ಯೆ: 9620767819 ಮತ್ತು 9743084194 ಗೆ ಸಂಪರ್ಕಿಸಬಹುದಾಗಿದೆ ಅಥವಾ ಅಕಾಡೆಮಿಯ ವೆಸೈಟ್ https://kstacademy.in ವೀಕ್ಷಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.



ಬಸವಕಲ್ಯಾಣ :– ತಾಲೂಕಿನ ಸುಕ್ಷೇತ್ರ ಹಾರಕೂಡ ಶ್ರೀಮಠದ ದಾಸೋಹ ಮನೆಯಲ್ಲಿ ಹಾರಕೂಡ ಶ್ರೀಗಳ ತಾಯಿಯವರಾದ ಲಿಂಗೈಕ್ಯ ಸುಭದ್ರಾಬಾಯಿ ಲಿಂ. ಕರಬಸಯ್ಯ ಸ್ವಾಮಿ ಹಿರೇಮಠ ಹಾರಕೂಡ ಅವರ 41ನೇ ಪುಣ್ಯಸ್ಮರಣೋತ್ಸವ ನಿಮಿತ್ಯ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಸುಭದ್ರಾಬಾಯಿ ತಾಯಿಯವರ ಭಾವಚಿತ್ರಕ್ಕೆ ಗೌರವ ಸಮರ್ಪಿಸಿದರು. ಈ ಸಂದರ್ಭದಲ್ಲಿ

ಜಿಲ್ಲಾ ಪಂಚಾಯಿತಿ ನಿವೃತ್ತ ಉಪ ಕಾರ್ಯದರ್ಶಿಗಳಾದ ಬಿ. ಕೆ. ಹಿರೇಮಠ, ಮಲ್ಲಿನಾಥ ಹಿರೇಮಠ ಹಾರಕೂಡ, ಶ್ರೀಮತಿ ಗೋಪಿಕಾ ದೇವಿ ದೇಶಮುಖ, ಹೇಮಲತಾ ಎಂ. ಹಿರೇಮಠ ಕಮಲಾಬಾಯಿ ಕಂಬಳಿಮಠ, ಗಂಗಮ್ಮ ಹಂಜಗೆ, ನೀಲಮ್ಮ ಚಿಟ್ಟೆ ಮುಂತಾದವರು ಉಪಸ್ಥಿತರಿದ್ದರು.

# ಪತ್ರಕರ್ತರು ನೊಂದವರ ಆಶಾಕಿರಣ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪತ್ರಕರ್ತರು ಸಮಾಜದಲ್ಲಿರುವ ನೊಂದವರ, ಅಶಕ್ತರ ಬಾಳಿನ ಜ್ಯೋತಿಯಾಗಿ ಕಾರ್ಯನಿರ್ವಹಿಸಬೇಕೆಂದು ಕರ್ನಾಟಕ ಕಾರ್ಯನಿರತ ಪತ್ರಕರ್ತ ಸಂಘ ನಿಕಟಪೂರ್ವ ಅಧ್ಯಕ್ಷರಾದ ಡಿ ಕೆ ಗಣಪತಿ ತಿಳಿಸಿದರು. ತಾಲೂಕಿನ ಪತ್ರಕರ್ತರಾದ ನರೇಂದ್ರ ಸೋಮಶೆಟ್ಟಿ ಯವರ ಹುಟ್ಟು ಹಬ್ಬದ ಪ್ರಯುಕ್ತ ಮಾತನಾಡಿ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಪ್ರವೃತ್ತಿಯನ್ನು ಮೈಗೂಡಿಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಶರದ ದರ್ಗಾಳೆ, ಅಣ್ಣಾರಾವ ದೇಶಮುಖ , ಜೈರಾಜ ಕೊಳ್ಳಾ, ಸುಭಾಷ ಮಾಶೆಟ್ಟೆ, ದತ್ತಾತ್ರಿ ಜ್ಯೋತಿ, ಅಭಿಷೇಕ ದೇಶಮುಖ ಹಾಜರಿದ್ದರು.

# ಶಕ್ತಿನಗರ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಶಕ್ತಿನಗರ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ವ್ಯಾಪ್ತಿಗೆ ಬರುವ ಎಸ್–1 ನಿವೇದಿತ ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಮಾರ್ಚ್ 11ರ ಬೆಳಿಗ್ಗೆ 10ಗಂಟೆಯಿಂದ ಸಂಜೆ 6ಗಂಟೆವರೆಗೆ ಸೂಗರೇಶ್ವರ ನಗರ, ಯಾದವ್ ನಗರ, ರೆಡ್ಡಿ ನಗರ, ಶಾಂತಿನಗರ, ಎಮ್.ಪಿ.ಸಿ.ಎಲ್., ಮೇನ್ ಗೇಟ್ ಏರಿಯಾ ಹಾಗೂ ವಿಶಾಲ್ ಕ್ರಾಸ್ ಪ್ರದೇಶದಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಶಕ್ತಿನಗರ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೀರಲಿಂಗೇಶ್ವರ ದೇವಸ್ಥಾನ ಟ್ರಸ್ಟ್ ಕಾರ್ಯ ಸಮಾಜಮುಖಿ: ಖಾಶೆಂಪುರ್

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಬೀದರ್ ನಗರದ ಕುಂಬಾರವಾಡದಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಸೇವಾ ಸಮಿತಿ ಟ್ರಸ್ಟ್ ನವರ ಕಾರ್ಯ ಸಮಾಜಮುಖಿಯಾಗಿದೆ. ಟ್ರಸ್ಟ್ ಉತ್ತಮವಾದ ಕೆಲಸ ಮಾಡುತ್ತಿದೆ ಎಂದು ಮಾಜಿ ಸಚಿವರು, ಜೆಡಿಎಸ್ ಪಕ್ಷದ ಹಿರಿಯ ನಾಯಕರಾಗಿರುವ ಬಂಡೆಪ್ಪ ಖಾಶೆಂಪುರ್ ರವರು ಹೇಳಿದರು.



ಬೀದರ್ ನಗರದ ಕುಂಬಾರವಾಡದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಭಾನುವಾರ ನಡೆದ ಶ್ರೀ ಬೀರಲಿಂಗೇಶ್ವರ, ಶ್ರೀ ಮಾಳಿಂಗರಾಯ, ಶ್ರೀ ಮಹಾತ್ಮ ಬೊಮ್ಮಗೊಂಡೇಶ್ವರ ದೇವರ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಹಾಗೂ ಸಭಾಭವನ, ಈರಕರ ಭವನ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಬೀದರ್ ನಗರದಲ್ಲಿನ ಬೀರಲಿಂಗೇಶ್ವರ ದೇವಸ್ಥಾನಕ್ಕೆ ತನ್ನದೇಯಾದ ಇತಿಹಾಸವಿದೆ. ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಸೇವಾ ಸಮಿತಿಯ ಸದಸ್ಯರ ಪ್ರಯತ್ನದಿಂದ ದೇವಸ್ಥಾನವು ಚನ್ನಾಗಿ ಆಗಿದೆ. ಅಷ್ಟೇ ಅಲ್ಲದೇ ಸಮಾಜದ ಜನರು ತನು, ಮನ, ಧನದಿಂದ ಸಹಾಯ, ಸಹಕಾರ ನೀಡಿದ್ದಾರೆ. ಎಲ್ಲರ ಸಹಕಾರದಿಂದ ದೇವಸ್ಥಾನ ಅಭಿವೃದ್ಧಿ ಆಗ್ತಿದೆ.

ದೇವಸ್ಥಾನದ ಒಳಗಡೆ ಬೀರಲಿಂಗೇಶ್ವರ, ಮಾಳಿಂಗರಾಯ, ಬೊಮ್ಮಗೊಂಡೇಶ್ವರ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ದೇವ್ಥಸಾನಕ್ಕೆ ಗಾಂಧಿ ಗಂಜ್ ನವರ ಸಹಕಾರವು ಇದೆ. ಇಟ್ಗಂಪಳ್ಳಿರವರ ಗುಂಪು ಸೇರಿದಂತೆ ಎಲ್ಲರೂ ಸೇರಿ ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸಿಕೊಂಡು ಸಾಗುತ್ತಿದ್ದಾರೆ ಎಂದು ಬಂಡೆಪ್ಪ ಖಾಶೆಂಪುರ್ ರವರು ಸಂತಸ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ವಿಧಾನ ಪರಿಷತ್ ಮಾಜಿ ಸಭಾಪತಿಗಳಾದ ರಘುನಾಥರಾವ್ ಮಲ್ಕಾಪೂರೆರವರು, ಬೀದರ್ ನಗರದಲ್ಲಿ ಬೀರಲಿಂಗೇಶ್ವರ, ಮಾಳಿಂಗರಾಯರ ದೇವಸ್ಥಾನ ಇರಲಿಲ್ಲ. ಈಗ ದೇವಸ್ಥಾನ ನಿರ್ಮಾಣವಾಗಿದೆ. ಪ್ರತಿ ದಿನ ದೇವಸ್ಥಾನದಲ್ಲಿ ಪೂಜೆ, ಪುರಸ್ಕಾರ ನಡೆಯುವಂತೆ ನೋಡಿಕೊಂಡು ಸಾಗಬೇಕು ಎಂದರು.

ಸಮಾಜದ ಜನರು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಮಹಿಳೆಯರು ಮುಂದೆ ಬರಬೇಕು. ಹೆಣ್ಣು ಮಕ್ಕಳು ಓದಿನ ಕಡೆಗೆ ಕಡೆಗೆ ಹೆಚ್ಚಿನ ಗಮನಹರಿಸಬೇಕು. ಹಳ್ಳಿಗಳಲ್ಲಿ ಮಹಿಳೆಯರೇ ಸಂಸಾರದ ಜವಾಬ್ದಾರಿ ಹೊತ್ತುಕೊಂಡು ಸಾಗುತ್ತಿದ್ದಾರೆ. ಅಂತಹ ಮಹಿಳೆಯರಿಗೆ ಶಿಕ್ಷಣ ಸಿಕ್ಕರೆ ಇನ್ನೂ ಅನುಕೂಲ ಆಗಲಿದೆ ಎಂದು ರಘುನಾಥರಾವ್ ಮಲ್ಕಾಪೂರೆರವರು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀಗಳು ವಹಿಸಿದ್ದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಮಾಜಿ ಸಭಾಪತಿಗಳಾದ ರಘುನಾಥರಾವ್ ಮಲ್ಕಾಪೂರೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಬೀದರ್ ಜಿಲ್ಲಾಧ್ಯಕ್ಷರಾದ ಅಮೃತರಾವ್ ಚಿಮ್ಕೋಡೆ, ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಸೇವಾ ಸಮಿತಿಯ ಕಾರ್ಯಾಧ್ಯಕ್ಷರಾದ ಪಿ.ಎಸ್ ಇಟ್ಗಂಪಳ್ಳಿರವರು ಸೇರಿದಂತೆ ಅನೇಕರಿದ್ದರು.

# ಲಿಂಗ ತಾರತಮ್ಯ ಮುಕ್ತ ಸಮಾಜ ನಮ್ಮ ಗುರಿ

• ಮಲ್ಲಮ್ಮ ನುಡಿ ವಾರ್ತೆ ಕುಕನೂರು

ಇಂದು ವಿಶ್ವ ಮಹಿಳಾ ದಿನಾಚರಣೆ. ಈ ದಿನವನ್ನು ನಾವು ಕೇವಲ ಹಬ್ಬದಂತೆ ಆಚರಿಸುವುದಲ್ಲ, ಸಮಾಜದಲ್ಲಿ ಹೆಣ್ಣು ಮತ್ತು ಗಂಡಿನ ನಡುವೆ ಇರುವ 'ಲಿಂಗ ತಾರತಮ್ಯ' ಎಂಬ ಗೋಡೆಯನ್ನು ಕೆಡವಲು ಸಂಕಲ್ಪ ಮಾಡುವ ದಿನವಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬೆಟ್ಟದೇಶ್ ಮಾಳೆಕೊಪ್ಪ ಅಭಿಪ್ರಾಯ ಪಟ್ಟರು.

ಇಂದು (ಮಾರ್ಚ್ 8, ರವಿವಾರ) ಬಳಗೇರಿ ಗ್ರಾಮದಲ್ಲಿ ಬಳಗೇರಿ ಗ್ರಾಮ ಪಂಚಾಯಿತಿ ಮತ್ತು ವಿಸ್ತಾರ "ಕನಸು ಕಿಶೋರಿ ಸಂಘಟನೆ"ಯ ಸಹಯೋಗದಲ್ಲಿ 'ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ'ವನ್ನು ಹಮ್ಮಿಕೊಳ್ಳಲಾಗಿತ್ತು.

# ಖ್ವಾಜಾ ಬಂದಾ ನವಾಜ್ ದರ್ಗಾದಲ್ಲಿ ಉರ್ಸ್ ಶರೀಫ್ ಭಕ್ತಿಭಾವದಿಂದ ಆಚರಣೆ





ದರ್ಗಾ ಹಜ್ರತ್ ಖ್ವಾಜಾ ಬಂದಾ ನವಾಜ್ (ರಹ್) ಅವರ ಸಜ್ಜಾದಾ ನಶೀನ್ ಹಜ್ರತ್ ಡಾ. ಹಾಫಿಜ್ ಸಯ್ಯದ್ ಮುಹಮ್ಮದ್ ಅಲಿ ಅಲ್-ಹುಸೈನಿ ಸಾಹೇಬ್ ಅವರು ಗುಂಬದ್ ಮುಬಾರಕ್‌ಗೆ ತೆರಳಿ, ಅಲ್ಲಿ ಸಂಪ್ರದಾಯಾನುಸಾರ ಸಮರ್ಪಣೆಗಳು, ಖಿದ್ಮತ್ ಫಾತೇಹಾ ಖ್ವಾನಿ ವಿಧಿವಿಧಾನ ನೆರವೇರಿಸಿದರು.

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಶೈಖ್-ಉಲ್-ಇಸ್ಲಾಂ ಹಜ್ರತ್ ಖ್ವಾಜಾ ಪೀರ್ ನಸೀರುದ್ದೀನ್ ಮಹ್ಮೂದ್ ಚಿರಾಗ್ ದೆಹ್ಲವಿ (ರಹ್) ಹಾಗೂ ಪೀರ್-ಓ-ಮುರಶಿದ್ ಹಜ್ರತ್ ಮಖ್ದೂಮ್ ಸಯ್ಯದ್ ಮೊಹಮ್ಮದ್ ಹುಸೈನಿ ಖ್ವಾಜಾ ಗೆಸು ದರಾಜ್ ಬಂದಾ ನವಾಜ್ (ರಹ್) ಅವರ ಉರ್ಸ್ ಶರೀಫ್ ನಗರದಲ್ಲಿ ರವಿವಾರ ಅತ್ಯಂತ ಭಕ್ತಿಭಾವ ಹಾಗೂ ಗಂಭೀರತೆಯೊಂದಿಗೆ ಆಚರಿಸಲಾಯಿತು.

ಅಸರ್ ನಮಾಜಿನ ನಂತರ, ದರ್ಗಾ ಹಜ್ರತ್ ಖ್ವಾಜಾ ಬಂದಾ ನವಾಜ್ (ರಹ್) ಅವರ ಸಜ್ಜಾದಾ ನಶೀನ್ ಹಜ್ರತ್ ಡಾ. ಹಾಫಿಜ್ ಸಯ್ಯದ್ ಮು ಹಮ್ಮದ್ ಅಲಿ ಅಲ್-ಹುಸೈನಿ ಸಾಹೇಬ್ ಅವರು ಸದರ್ ಸೋಫಾ ಹವೆಲಿಯಲ್ಲಿ ಪರಂಪರೆಯ ಲಿಬಾಸ್-ಎ-ಖ್ವಾಜಗಿ ಧರಿಸಿದರು. ಫುಕರಾಗಳ ಸಮೂಹದೊಂದಿಗೆ ಅವರು ಪವಿತ್ರ ಗ್ಯಾರಹ್ ಸೀಢಿ (ಹನ್ನೊಂದು ಮೆಟ್ಟಿಲುಗಳು) ಮೂಲಕ ಗುಂಬದ್ ಮುಬಾರಕ್‌ಗೆ ತೆರಳಿ, ಸಂಪ್ರದಾಯದಂತೆ ಖಿದ್ಮತ್, ಫಾತೇಹಾ ಖ್ವಾನಿ ಮತ್ತು ಇತರ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿದರು.

ನಂತರ ಸದರ್ ಸೋಫಾ ಹವೆಲಿ ದೇವಡಿಯಲ್ಲಿ ಅವರ ಹೆಸರಿನಲ್ಲಿ ಫಾತೇಹಾ ಕಾರ್ಯಕ್ರಮ ನಡೆಯಿತು. ಬಳಿಕ ಮೆಹ್ಫಿಲ್-ಎ-ಸಮಾದಲ್ಲಿ ಖ್ಯಾತ ಕವ್ವಾಲರು ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು. ಕಾರ್ಯಕ್ರಮವು ಸಮೂಹ ಪ್ರಾರ್ಥನೆ ಮತ್ತು ಫಾತೇಹಾ ಖ್ವಾನಿಯೊಂದಿಗೆ ಸಮಾಪ್ತಿಯಾಯಿತು.

ಈ ಸಂದರ್ಭದಲ್ಲಿ ಸಜ್ಜಾದಾ ನಶೀನ್ ಅವರು ಸದರ್ ಸೋಫಾ ದೇವಡಿಯಲ್ಲಿ ಭವ್ಯ ಇಫ್ತಾರ್ ಹಾಗೂ ಭೋಜನವನ್ನು ಆಯೋಜಿಸಿದರು. ಧಾರ್ಮಿಕ ಪಂಡಿತರು, ಗಣ್ಯರು ಹಾಗೂ ಸಮುದಾಯದ ಸದಸ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಸಯ್ಯದ್ ಮೊಹಮ್ಮದ್ ಸಯ್ಯದ್ ಹುಸೈನಿ, ಡಾ. ಸಯ್ಯದ್ ಮುಸ್ತಫಾ ಹುಸೈನಿ ಹಾಗೂ ಬಂದಾನವಾಜ ಮನೆತನದ ಸದಸ್ಯರು ಉಪಸ್ಥಿತರಿದ್ದರು.

ಕೆಬಿಎನ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಮಿರ್ ವಿಲಾಯತ್ ಅಲಿ, ಡಾ. ಮೊಹಮ್ಮದ್ ಅಬ್ದುಲ್ ಬಸೀರ್, ಮೌಲಾನಾ ಸಯ್ಯದ್ ಅಬ್ದುಲ್ ರಶೀದ, ಮಜಹರ ಅಲಂ ಖಾನ ಹಾಗೂ ಅನೇಕ ಹಿಂದೂ ಜನರು ಇಫ್ತಾಯರ್ ಕೂಟದಲ್ಲಿ ಹಾಜರಿದ್ದರು. ಉರ್ಸ್ ಸಮಾರಂಭಗಳು ಭಕ್ತಿಭಾವ, ಗೌರವ ಮತ್ತು ಸೌಹಾರ್ದತೆಯ ವಾತಾವರಣದಲ್ಲಿ ಯಶಸ್ವಿಯಾಗಿ ನೆರವೇರಿದವು.

### ಮಾನವ ಹಕ್ಕುಗಳ ಸಂಸ್ಥೆಯ ಉದ್ಘಾಟನೆ ಪದಗ್ರಹಣ

# 120 ಹೊಸ ಸದಸ್ಯರಿಗೆ ಅಧಿಕೃತ ನೇಮಕಾತಿ ಆದೇಶ



• **ಮಲ್ಲಮ್ಮ ನುಡಿ ವಾರ್ತೆ ಹಳಿಯಾಳ**

ರಾಷ್ಟ್ರೀಯ ಅಪರಾಧ ತಡೆ ಮತ್ತು ಮಾನವ ಹಕ್ಕುಗಳ ಭಾರತ ಪರಿಷತ್ ಸಂಸ್ಥೆಯ ವತಿಯಿಂದ ಫೆಬ್ರವರಿ 23/02/ 2026 ರಂದು ಬೆಳಗ್ಗೆ 11:00 ಗಂಟೆಗೆ ಹಳಿಯಾಳ ಪಟ್ಟಣದ ಪುರಭವನದಲ್ಲಿ ಮಾನವ ಹಕ್ಕುಗಳ ಸಂಸ್ಥೆಯ ಉದ್ಘಾಟನೆ ಹಾಗೂ ಪದಗ್ರಹಣ ಸಮಾರಂಭವನ್ನು ಯಶಸ್ವಿಯಾಗಿ ನಡೆಸಲಾಯಿತು.

ಸಂಸ್ಥೆಯ ರಾಷ್ಟ್ರೀಯ ಉಪಾಧ್ಯಕ್ಷ ಹಾಗೂ ರಾಜ್ಯ ಸಭಾಧ್ಯಕ್ಷ ಮಣಿಕಂದನ್ ಅವರ ಅಧ್ಯಕ್ಷತೆಯಲ್ಲಿ, ಬೆಳಗಾವಿ ವಿಭಾಗದ ಮಹಿಳಾ ಅಧ್ಯಕ್ಷ ರೇಣುಕಾ ಬಂಧಂ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ಸಂಸ್ಥೆಯ ಪದಾಧಿಕಾರಿಗಳು, ಸದಸ್ಯರು, ಗಣ್ಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಾಕ್ಷಿಯಾದರು.

ಕಾರ್ಯಕ್ರಮದ ಮುಖ್ಯ ಆಕರ್ಷಣೆಯಾಗಿ ಸಂಸ್ಥೆಗೆ ಸುಮಾರು 120 ಜನ ಹೊಸ ಸದಸ್ಯರಿಗೆ ಅಧಿಕೃತ ನೇಮಕಾತಿ ಆದೇಶಗಳನ್ನು ವಿತರಿಸಲಾಗಿದ್ದು, ಅವರು ಅಧಿಕೃತವಾಗಿ ಸಂಸ್ಥೆಗೆ ಸೇರ್ಪಡೆಗೊಂಡರು. ವಿವಿಧ ವೃತ್ತಿ ಹಾಗೂ ಸಾಮಾಜಿಕ ಹಿನ್ನೆಲೆಯ ಸದಸ್ಯರು ಸಂಸ್ಥೆಯ ಆಶಯಗಳನ್ನು ತಮ್ಮ ಜೀವನದ ಭಾಗವನ್ನಾಗಿ ಮಾಡಿಕೊಂಡು ಸೇವೆ ಸಲ್ಲಿಸಲು ಮುಂದಾಗಿರುವುದು ಸಂಸ್ಥೆಯ ಬಲವರ್ಧನೆಗೆ ಹೊಸ ಶಕ್ತಿ ನೀಡಿದಂತಾಗಿದೆ.

ಹೊಸ ಸದಸ್ಯರು ಸಂಸ್ಥೆಯ ನಿಯಮಾವಳಿ, ಮೌಲ್ಯಗಳು ಹಾಗೂ ಗುರಿಗಳಿಗೆ ಬದ್ಧರಾಗಿ, ಮಾನವ ಹಕ್ಕುಗಳ ಸಂರಕ್ಷಣೆ, ಸಾಮಾಜಿಕ ನ್ಯಾಯ ಸ್ಥಾಪನೆ, ಅಪರಾಧ ತಡೆ ಹಾಗೂ ಸಾರ್ವಜನಿಕರಲ್ಲಿ ಕಾನೂನು ಅರಿವು ಮೂಡಿಸುವ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಜವಾಬ್ದಾರಿಯನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಸಂಸ್ಥಾಪಕ ರಾಷ್ಟ್ರೀಯ ಸಭಾಧ್ಯಕ್ಷ ಹಾಗೂ ರಾಜ್ಯಾಧ್ಯಕ್ಷ ಡಾ॥ ಜಾನ್ ಜೆ. ಸಮುವೇಲ್ ಕಿಮ್, ರಾಷ್ಟ್ರೀಯ ಉಪ ಸಭಾಧ್ಯಕ್ಷ ವೀ ವೇಲು, ರಾಷ್ಟ್ರೀಯ ಅಧ್ಯಕ್ಷ ಆರ್. ವೇಣು ಮೈಲಾರಿ, ರಾಷ್ಟ್ರೀಯ ಗೌರವಾಧ್ಯಕ್ಷ ಗೋಪಾಲ ರೆಡ್ಡಿ, ರಾಷ್ಟ್ರೀಯ ಖಜಾಂಚಿ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಉಸ್ತುವಾರಿ ಅನುಷಾ ಏಂಜಲ್ ಯು, ಕರ್ನಾಟಕ ರಾಜ್ಯ ಗೌರವಾಧ್ಯಕ್ಷ ಪೂಜಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಬಿ. ಚಾಂದ್ರಶೇಖರಾಚಾರಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ನೂತನ ಅಧ್ಯಕ್ಷ ಸುಧಾಕರ್ ನಾಯ್ಕ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಎಲ್ಲಾ ಪದಾಧಿಕಾರಿಗಳು ಹಾಗೂ ಸದಸ್ಯರಿಗೆ ಸಂಸ್ಥೆ ಕೃತಜ್ಞತೆ ಸಲ್ಲಿಸಿದ್ದು, ಈ ದಿನವನ್ನು ಸಂಸ್ಥೆಯ ಇತಿಹಾಸದಲ್ಲಿ ಸ್ಮರಣೀಯ ಹಾಗೂ ಹೆಮ್ಮೆಯ ದಿನವೆಂದು ಪರಿಗಣಿಸಲಾಗಿದೆ.

ಮುಖ್ಯ ಅತಿಥಿಗಳಾಗಿ, ಫಿರೋಜ್ ಷಾ ಸೋಮನಕಟ್ಟಿ ಹಳಿಯಾಳ ತಹಶೀಲ್ದಾರ ಶಿವಾನಂದ್ ಮಾದರಕಂಡಿ ಆಜಖಕ ದಾಂಡೇಲಿ ಗಾಯತ್ರಿ ಟ ಖಈಔ ಹಳಿಯಾಳ ಆಡಿ ಅನಿಲಕುಮಾರ ನಾಯ್ಕ್ ದಾಂಡೇಲಿ ಮತ್ತು ಹಳಿಯಾಳ ಮುಖ್ಯವೈದ್ಯಧಿಕಾರಿಗಳು ರಾಮಚಂದ್ರ ಬುರ್ಲಿ ಭಗವತಿ ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷರು ಸುಂದರ ಕಾನಕತ್ರಿ ಹಳಿಯಾಳ ವಕೀಲ ಸಂಘ ಅಧ್ಯಕ್ಷರು ಂ ಖ ಮಲದಾರ್ ಆಡಿಟರ್ ಮತ್ತು ಟ್ಯಾಕ್ಸ್ ಕಾಣ್ಸಟೆಂಟ್ ಮಾಲಾ ಬ್ರಿಗೇನ್ಸಾ ಹಳಿಯಾಳ ಬ್ಲಾಕ್ ಕಾಂಗ್ರೆಸ್ ಮಹಿಳಾ ಅಧ್ಯಕ್ಷರು ಪೌಲ್ ಫಾರ್ನಾಂಡಿಸ ಅಧ್ಯಕ್ಷರು ದಾಂಡೇಲಿ ತಾಲೂಕು ಸಂತೋಷ ಗಾವಡೆ ಉಪಾಧ್ಯಕ್ಷರು ದಾಂಡೇಲಿ ತಾಲೂಕು ಪ್ರಮೀಳಾ ಮಾನೆ ಮಹಿಳಾ ಅಧ್ಯಕ್ಷರು ದಾಂಡೇಲಿ ತಾಲೂಕು ಮಂಗಲಾ ಕಶಿಲ್ಕರ್ ಅಧ್ಯಕ್ಷರು ಹಳಿಯಾಳ ತಾಲೂಕು ಅಫ್ತಾಬ ಶೇಕ್ ಪ್ರಧಾನ ಕಾರ್ಯದರ್ಶಿ ದಾಂಡೇಲಿ ತಾಲೂಕು ಉಪಸ್ಥಿತರಿದ್ದರು.

# ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಿ: ಕುದರೆ



• **ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ**

ಗ್ರಾ.ಪಂ.ಜನಪ್ರತಿನಿಧಿಗಳ ಅಧಿಕಾರವಧಿ ಮುಗಿದ ಮೇಲೆ, ಆಯಾ ಗ್ರಾ.ಪಂ. ಗಳಿಗೆ ನೇಮಕ ಮಾಡಲಾದ ಆಡಳಿತಾಧಿಕಾರಿಗಳಿಗೆ ಜವಬ್ದಾರಿ ನೀಡಲಾಗಿದೆ. ಹೀಗಾಗಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ರೂಪರೇಷಗಳನ್ನು ಸಿದ್ಧಪಡಿಸಿಕೊಳ್ಳುವ ಮೂಲಕ ಮುಂಜಾಗೃತೆ ವಹಿಸಬೇಕು ಎಂದು ಸಹಾಯಕ ಆಯುಕ್ತರಾದ ಪ್ರಕಾಶ ಕುದರೆ ಹೇಳಿದರು.

ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಸೋಮವಾರ ಕುಡಿಯುವ ನೀರಿನ ಸಮಸ್ಯೆ ಕುರಿತು ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿ, ಪ್ರಸಕ್ತ ವರ್ಷದಲ್ಲಿ ಮಳೆ ಹೆಚ್ಚಾದರೂ, ಈ ವರ್ಷ ಬೀಸಿಲು ಹೆಚ್ಚಿಗೆ ಇರುವುದರಿಂದ ನೀರಿನ ಸಮಸ್ಯೆ ಉಲ್ಬಣಗೊಳ್ಳಬಹುದು ಎಂದು ಹವಮಾನ ಇಲಾಖೆ ತಿಳಿಸಿದೆ. ಹೀಗಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು

ಆಡಳಿತಾಧಿಕಾರಿಗಳು ಗ್ರಾಮಗಳಲ್ಲಿ ಗ್ರಾಮಸಭೆ ಮತ್ತು ವಾರ್ಡ್ ಸಭೆಗಳು ಮಾಡುವ ಮೂಲಕ ಮಾಹಿತಿ ಪಡೆದುಕೊಂಡು ಕೆಲಸ ಮಾಡಬೇಕಾಗಿದೆ ಎಂದರು.

ಬೇಸಿಗೆ ಮುಗಿಯುವವರೆಗು ಗ್ರಾಮಸ್ಥರಿಂದ ಕುಡಿಯುವ ನೀರಿನ ಸಮಸ್ಯೆ ಕುರಿತು ದೂರು ಬಂದಲ್ಲಿ ತಕ್ಷಣ ಅದಕ್ಕೆ ಸ್ಪಂದಿಸುವ ಕೆಲಸ ಅಧಿಕಾರಿಗಳು ಮಾಡಬೇಕು ಎಂದು ಹೇಳಿದರು.

ತಹಶೀಲ್ದಾರ ದತ್ತಾತ್ರೆಯ ಗಾದಾ ಅವರು ಮಾತನಾಡಿ, ತಾಲ್ಲೂಕಿನ ಕೆಲವು ಕಡೆ ಮಾತ್ರ ನೀರಿನ ಸಮಸ್ಯೆ ಆಗಬುಹುದು. ಹೀಗಾಗಿ ಅಂಥಹ ಗ್ರಾಮಗಳನ್ನು ಗುರುತಿಸಬೇಕು ಮತ್ತು ಆ ಸಮಸ್ಯೆಯನ್ನು ಯಾವರೀತಿ ಬಗೆಹರಿಸಬೇಕು ಮಾಹತಿ ಸಂಗ್ರಹಿಸಿಕೊಳ್ಳಬೇಕು ಎಂದರು.

ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ರಮೇಶ ಸುಲ್ಫಿ ಅವರು ಮಾತನಾಡಿ, ಇಗಾಗಲೇ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬರುವ ಯಾವ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂಬುವುದರ ಬಗ್ಗೆ ಪಟ್ಟಿ ಮಾಡಿಕೊಳ್ಳಲಾಗಿದೆ ಮತ್ತು ಸಮಸ್ಯೆ ಬಗೆಹರಿಸುವುದಕ್ಕೆ ಬೇಕಾದ ಸಿದ್ಧತೆಯು ಮಾಡಿಕೋಳ್ಳಲು ತಿಳಿಸಲಾಗಿದೆ ಎಂದು ಹೇಳಿದರು.

ಎಇಇ ಶಿವರಾಜ ಪಲ್ಲೇರಿ ಅವರು ಮಾತನಾಡಿ, ಸರ್ಕಾರಿ ಬಾವಿ ಮತ್ತು ಕೊಳವೆ ಬಾವಿಗಳಲ್ಲಿ ನೀರಿನ ಕೊರತೆ ಇದ್ದಲ್ಲಿ ಖಾಸಗಿ ವ್ಯಕ್ತಿಗಳ ಬಾವಿ ಮತ್ತು ಕೊಳವೆ ಬಾವಿಗಳು ಗುರುತಿಸಿ ಅವರಿಂದ ಸರ್ಕಾರದ ನಿಯಮಾವಳಿ ಪ್ರಕಾರ ಖರೀದಿಸಿ ಗ್ರಾಮಸ್ಥರಿಗೆ ನೀರು ಸರಬರಾಜು ಮಾಡಬೇಕು ಎಂದರು. ನಂತರ ವಿವಿಧ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ನೀರಿನ ಸಮಸ್ಯೆ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಹುಲಸೂರ ತಹಶೀಲ್ದಾರ ಶಿವಾನಂದ ಮೇತ್ರೆ ಹುಲಸೂರ ತಾ.ಪಂ.ಕಾ.ನಿ.ಅ.ಮಹಾದೇವ ಜಮ್ಮು , ಸಿಎಂಸಿ ಆಯುಕ್ತ ರಾಜು ಬಣಗಾರ , ಗ್ರೇಡ್ ಟೂ ತಹಶೀಲ್ದಾರ ರಮೇಶ ಹಾಲು ಸೇರಿದಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಂದಾಯ ಇಲಾಖೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಅಂಬೇಡ್ಕರ್ ಅವರ ಚಿಂತನೆ ಗಾನ ನಮನ ಅರ್ಪಿಸುವ ಸಂಗೀತ ಮಹೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**




ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕಲಬುರಗಿ ಜಿಲ್ಲಾಡಳಿತ ಸಂಯುಕ್ತಾಶ್ರಯದಲ್ಲಿ ಇದೇ ಮಾರ್ಚ್ 10 (ಮಂಗಳವಾರ) ರಂದು ಬೆಳಿಗ್ಗೆ 11.30 ಗಂಟೆಗೆ ಕಲಬುರಗಿ ನಗರದ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಸಾಮಾಜಿಕ ಮಹಾನ್ ಚಿಂತನೆಗೆ ಗಾನ ನಮನ ಅರ್ಪಿಸುವ "ಭೀಮ ಗಾಯನ" ಕಾರ್ಯಕ್ರಮ ಆಯೋಜಿಸಲಾಗಿದೆ.

ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಕಾರ್ಯಕ್ರಮವನ್ನು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಉದ್ಘಾಟಿಸುವರು. ಜಿಲ್ಲೆಯ ಎಲ್ಲಾ ಶಾಸಕರು, ಸಂಸದರು, ನಿಗಮ-ಮಂಡಳಿ ಅಧ್ಯಕ್ಷರುಗಳು ಹಾಗೂ ಇತರೆ ಚುನಾಯಿತ ಜನಪ್ರತಿನಿಧಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಜೀವನ ಸಾಧನೆ, ಸಮಾನತೆಯ ಹೋರಾಟ, ಅಸ್ಪೃಶ್ಯತೆ ನಿರ್ಮೂಲನೆ, ಸ್ತ್ರೀ ಸಮಾನತೆ ಕುರಿತ ಗೀತೆಗಳನ್ನೊಳಗೊಂಡ ಸಮಾನತೆಯ ಸ್ವರ ಸಂಭ್ರಮ ಇದಾಗಿದೆ. ಭೀಮನ ಆದರ್ಶಗ 'ಳನ್ನು ಸ್ವರಗಳಲ್ಲಿ ಜೀವಂತಗೊಳಿಸುವ ಜಾಗೃತಿ, ಆತ್ಮಗೌರವ ಮತ್ತು ಸಮಾನತೆಯ ಸಂಗೀತ ಕಾರ್ಯಕ್ರಮವೇ ಭೀಮ ಗಾಯನವಾಗಿದೆ. ಚಿಕ್ಕಬಳ್ಳಾಪುರದ ಸಿದ್ಧಾರ್ಥ ಯುವ ಕ್ರೀಡಾ ಸಾಂಸ್ಕೃತಿಕ ಅಭಿವೃದ್ಧಿ

ಸಂಘವು ಭೀಮ ಗಾಯನವನ್ನು ಪ್ರಸ್ತುತಪಡಿಸಲಿದೆ.

ಸಾಮಾಜಿಕ ನ್ಯಾಯದ ಮಹಾನ್ ಚಿಂತಕ, ಹಕ್ಕುಗಳ ಹೋರಾಟಗಾರ, ದಮನಿತರ ಧ್ವನಿಯಾಗಿರುವ ಅಂಬೇಡ್ಕರ್ ಅವರ ಚಿಂತನೆಗೆ ಗಾನ ನಮನ ಅರ್ಪಿಸುವ ಅಂಬೇಡ್ಕರ್ ಗೀತೆಗಳ ಮಹೋತ್ಸವಕ್ಕೆ ಜಿಲ್ಲೆಯ ದಲಿತಪರ ಹಾಗೂ ಇತರೆ ಎಲ್ಲ ಸಂಘಟನೆಗಳ ಪದಾಧಿಕಾರಿಗಳು,

ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ ಅವರು ಮನವಿ ಮಾಡಿದ್ದಾರೆ.

# ಹೆಲ್ಮೆಟ್ ಕಡ್ಡಾಯ: ಮರುಪರಿಶೀಲನೆಗೆ ಒತ್ತಾಯ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**



ಸುಪ್ರೀಂಕೋರ್ಟ್ ನಿರ್ದೇಶನದಂತೆ ರಾಜ್ಯದಲ್ಲಿ ಹೆಲ್ಮೆಟ್ ಕಡ್ಡಾಯ ಕಾನೂನನ್ನು ಜಾರಿ ಮಾಡಲಾಗಿದೆ. ರಾಜ್ಯದ ಎಲ್ಲಾ ನಗರಗಳಲ್ಲಿ ಕಡ್ಡಾಯವಾಗಿ ರಾಜ್ಯ ಸರಕಾರ ಕಾನೂನು ಜಾರಿ ಮಾಡುವ ಆದೇಶವನ್ನು ಮರು ಪರಿಶಿಲಿಸಬೇಕು ಕರವೇ(ಪ್ರವೀಣ ಶೆಟ್ಟಿ) ಬಣದ ಕಲಬುರಗಿ ತಾಲೂಕಾ ಉಪಾಧ್ಯಕ್ಷರಾದ ಸುನೀಲ ಡಿ ಮಾಲಿಪಾಟೀಲ ಅವರು ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ಈ ಕಾನೂನನ್ನು ಕಡ್ಡಾಯಗೊಳಿಸುವುದರಿಂದ ಅನುಕೂಲಕ್ಕಿಂತ ಅನನುಕೂಲವೇ ಹೆಚ್ಚಾಗಲಿದೆ. ಬಿಸಿಲು ಹೆಚ್ಚಿರುವ ಪ್ರದೇಶದಲ್ಲಿ ಹೆಲ್ಮೆಟ್ ಕಡ್ಡಾಯದಿಂದ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳು ಇವೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಅಷ್ಟೇ ಅಲ್ಲದೇ ಈ ಕಾನೂನು ಹೆಚ್ಚು ಮಹಾನಗರ ಪಾಲಿಕೆಗಳಂತಹ ಪ್ರದೇಶ, ಅತಿಹೆಚ್ಚು ಜನಸಂದಣಿ ಇರುವ, ಹೆಚ್ಚು ಅಪಘಾತವಾಗುವ ಪ್ರದೇಶಗಳಲ್ಲಿ ಮಾಡುವುದು ಸೂಕ್ತವಾಗಿದೆ. ಕೇವಲ ಬೈಕ್ ಸವಾರರು ಮಾತ್ರವಲ್ಲದೇ ಹಿಂದೆ ಕುಳಿತವರು ಹೆಲ್ಮೆಟ ಹಾಕಿಕೊಳ್ಳಲು ಸೂಚಿಸಿರುವುದು ಹೆಚ್ಚಿನ ತ್ರಾಸದಾಯಕವಾಗಿದೆ. ಇದರಿಂದ ಮಹಿಳೆಯರಿಗೆ, ಮಕ್ಕಳಿಗೆ, ಹಿರಿಯರಿಗೆ ಅದು ಕಿರಿಕಿರಿಯಾಗಿದೆ. ಹೆಲ್ಮೆಟ್ ಕಡ್ಡಾಯ ಕಾನೂನನ್ನು ಮರು ಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ಈ ಕಾನೂನು ಜಾರಿ ಮಾಡಬೇಕಾದರೆ ನಗರದ ವಿಸ್ತರಣೆ, ಅದರ ವ್ಯಾಪ್ತಿಗಳು, ಜನಸಂಖ್ಯೆ, ದ್ವಿಚಕ್ರ ವಾಹನಗಳು ರಸ್ತೆಯ ಮೇಲೆ ಓಡಿಸುವಾಗ ಕನಿಷ್ಠ ವೇಗ, ಅಲ್ಲಿಯ ವಾತಾವರಣ, ಆ ಪ್ರದೇಶದ ಆರ್ಥಿಕ ವ್ಯವಹಾರಗಳನ್ನು ಹಾಗೂ ರಸ್ತೆಗಳನ್ನು ಗಮನಿಸಿ ಜಾರಿಮಾಡಲು ಮುಂದಾಗಬೇಕಿದೆ. ರಾಜ್ಯ ಸರಕಾರ ಈ ಕಾನೂನು ಬಗ್ಗೆ ತಜ್ಞರ ಸಮಿತಿಯನ್ನು ರಚಿಸಿ ಅವರ ವರದಿ, ಸಂಘಟನೆಗಳ, ರಾಜಕೀಯ ಪಕ್ಷಗಳ ಮತ್ತು ಜನರ ಅಭಿಪ್ರಾಯವನ್ನು ಪರಿಗಣಿಸಬೇಕು ಎಂದು ಅವರು ಒತ್ತಾಯಿಸಿದರು.

# ವಿದ್ಯಾರ್ಥಿಗಳಿಂದ 150ಕ್ಕೂ ಹೆಚ್ಚು ವಿಜ್ಞಾನ ಮಾದರಿಗಳ ಪ್ರದರ್ಶನ



• **ಮಲ್ಲಮ್ಮ ನುಡಿ ವಾರ್ತೆ ಹುಣಸಗಿ**

ವಿಜ್ಞಾನ ವಿಷಯವನ್ನು ಕೇವಲ ಪಾಠಗಳಲ್ಲಿ ಮಾತ್ರವಲ್ಲದೆ ಪ್ರಯೋಗಗಳ ಮೂಲಕ ತಿಳಿಸಿದಾಗ ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥವಾಗುತ್ತದೆ. ಇಂತಹ ವಿಜ್ಞಾನ ಮೇಳಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಕಲಬುರಗಿಯ ಜ್ಞಾನ ಚಿಗುರು ಫೌಂಡೇಶನ್‌ನ ಮಲ್ಲಿಕಾರ್ಜುನ ಬಂಗರಗಿ ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಎಸ್.ಕೆ. ಸಮೂಹ ಶಿಕ್ಷಣ ಸಂಸ್ಥೆಯ ಪಿಯು ಕಾಲೇಜು ಆವರಣದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ವಿಜ್ಞಾನ ಮೇಳದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ವಿದ್ಯಾರ್ಥಿಗಳು ವಿಜ್ಞಾನ ಚಟುವಟಿಕೆಗಳ ಮೂಲಕ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಅವಕಾಶಗಳನ್ನು ಹೆಚ್ಚು ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ವಿಜ್ಞಾನ ಮೇಳದಲ್ಲಿ ಹಗಲು ರಾತ್ರಿ ಉಂಟಾಗುವ ಪ್ರಕ್ರಿಯೆ, ಸೂರ್ಯಗ್ರಹಣ ಹಾಗೂ ಚಂದ್ರಗ್ರಹಣದ ಮಾದರಿ, ನೀರಿನಿಂದ ವಿದ್ಯುತ್ ಉತ್ಪಾದನೆ, ಗಣಿತದಲ್ಲಿನ ಭಿನ್ನರಾಶಿಗಳ ವಿಧಗಳು, ರೇಖಾಕೃತಿಗಳು ಮತ್ತು ಸಂಕಲನ ವ್ಯವಕಲನದ ಮ್ಯಾಜಿಕ್ ಗಣಿತ ಸೇರಿದಂತೆ ಸುಮಾರು 150ಕ್ಕೂ ಹೆಚ್ಚು ವಿಜ್ಞಾನ ಚಟುವಟಿಕೆಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು. ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮ ಶಾಲೆಗಳ ವಿದ್ಯಾರ್ಥಿಗಳು ತಮ್ಮ ಪ್ರಾಯೋಗಿಕ ಮಾದರಿಗಳನ್ನು ವಿವರಿಸಿ ನೋಡುಗರ ಮೆಚ್ಚುಗೆ ಗಳಿಸಿದರು.

ಈ ಸಂದರ್ಭದಲ್ಲಿ ರಾಜ್ಯಮಟ್ಟದ "ವಿದ್ಯಾರತ್ನ" ಪ್ರಶಸ್ತಿ ಪಡೆದ ಮುಖ್ಯ ಶಿಕ್ಷಕ ವೀರಣ್ಣ ಬೆಳ್ಳುಬ್ಬಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಜಿಪಂ ಮಾಜಿ ಸದಸ್ಯ ನಾಗಣ್ಣ ಸಾಹು ದಂಡಿನ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಂಸ್ಥೆಯ ಅಧ್ಯಕ್ಷ ಮುರಿಗೆಣ್ಣ ದೇಸಾಯಿ ಅಧ್ಯಕ್ಷತೆ ವಹಿಸಿದ್ದರು.

ಡಾ. ಶಂಕರಗೌಡ ಗುಂಡಾಕನಾಳ, ಎಂ.ಎಸ್. ಬಿರಾದಾರ್, ಶ್ರೀಹರಿ ಕುಲಕರ್ಣಿ, ಪಲಾಕ್ಷಯ್ಯ ಹಿರೇಮಠ, ವಿಜಯಕುಮಾರ ದೇಸಾಯಿ, ಪ್ರಾಚಾರ್ಯ ರಾಮಣ್ಣ ಹೂಗಾರ್ ಸೇರಿದಂತೆ ಶಿಕ್ಷಕರು, ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವಿದ್ಯಾರತ್ನ ಪ್ರಶಸ್ತಿ ಪುರಸ್ಕೃತ ವೀರಣ್ಣ ಬೆಳ್ಳುಬ್ಬಿಗೆ ಹುಣಸಗಿಯಲ್ಲಿ ಸನ್ಮಾನ




• **ಮಲ್ಲಮ್ಮ ನುಡಿ ವಾರ್ತೆ ಹುಣಸಗಿ**

ತಾಲೂಕಿನ ಗೆದ್ದಲಮರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ವೀರಣ್ಣ ಬೆಳ್ಳುಬ್ಬಿ ಅವರಿಗೆ ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ವತಿಯಿಂದ ರಾಜ್ಯಮಟ್ಟದ "ವಿದ್ಯಾರತ್ನ" ಪ್ರಶಸ್ತಿ ಲಭಿಸಿದ ಹಿನ್ನೆಲೆಯಲ್ಲಿ, ಹುಣಸಗಿ ತಾಲೂಕಿನ ಸರ್ಕಾರಿ ಹಾಗೂ ಅರೆ ಸರ್ಕಾರಿ ಖಅ & ಖಖಿ ನೌಕರರ ಸಂಘದ ವತಿಯಿಂದ ಪಟ್ಟಣದ ಓಉಔ ಕಾರ್ಯಾಲಯದಲ್ಲಿ ಗೌರವ ಸಮರ್ಪಣೆ ಮಾಡಿ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ನೂತನ ತಾಲೂಕು ಅಹಿಂದ್ ಅಧ್ಯಕ್ಷರಾಗಿ ಆಯ್ಕೆಯಾದ ಸುಭಾನ್ ಡೆಕ್ಕನ್ ಅವರನ್ನೂ ಸಹ ಗೌರವಿಸಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಗುರು ಹುಲಿಕಲ್ ಅವರು, ವೀರಣ್ಣ ಬೆಳ್ಳುಬ್ಬಿ ಅವರ ಶಿಕ್ಷಣ ಸೇವೆ, ಸಮಯ ಪಾಲನೆ ಹಾಗೂ ಶಾಲೆಯ ಅಭಿವೃದ್ಧಿಗೆ ನೀಡಿದ ಕೊಡುಗೆಯನ್ನು ಸ್ಮರಿಸಿ ಪ್ರಶಂಸಿಸಿದರು. ಜೊತೆಗೆ ಸುಭಾನ್ ಡೆಕ್ಕನ್ ಅವರ ಸಾಮಾಜಿಕ ಕಾಳಜಿ ಮತ್ತು ಸೇವೆಯನ್ನು ಮೆಚ್ಚುಗೆ ವ್ಯಕ್ತಪಡಿಸಿದರು.

ಖಅ & ಖಖಿ ನೌಕರರ ಸಂಘದ ತಾಲೂಕು ಅಧ್ಯಕ್ಷರಾದ ವಿಠ್ಠಲ ಚವ್ಹಾಣ ಅವರು ಅಧ್ಯಕ್ಷೀಯ ಭಾಷಣದಲ್ಲಿ, ಬೆಳ್ಳುಬ್ಬಿ ಅವರು ಮಕ್ಕಳ ಬಗ್ಗೆ ಅಪಾರ ಕಾಳಜಿಯುಳ್ಳ ಶಿಕ್ಷಕರಾಗಿದ್ದು ಅವರ ಸೇವೆ ಮಾದರಿಯಾಗಿದೆ ಎಂದು ಹೇಳಿದರು. ಹಾಗೆಯೇ ಸುಭಾನ್ ಡೆಕ್ಕನ್ ಅವರ ಸಾಮಾಜಿಕ ಚಿಂತನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಶರಣಪ್ಪ ಗುಳಬಾಳ, ಹಸಿರು ರೈತ ಸೇನೆ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ್ ಮಾಲಿಪಾಟೀಲ್, ರಂಗನಾಥ್ ದೊರೆ, ಭೀಮಣ್ಣ ವಾಲ್ಮೀಕಿ, ನಿಂಗಣ್ಣ ಚೌಹಾಣ್, ನಿವೃತ್ತ ಮುಖ್ಯೋಪಾಧ್ಯಾಯರಾದ ಗೂಡಲ್ಮನೆ ಪರಶುರಾಮ್, ಚಲವಾದಿ ನಿಂಗನಗೌಡ, ತಮ್ಮಣ್ಣ ಗುಡಿಹಾಳ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಗುರು ರಾಥೋಡ್ ನಿರೂಪಣೆ ಮಾಡಿದರು ಹಾಗೂ ತಮ್ಮಣ್ಣ ಗುಡಿಹಾಳ ಸ್ವಾಗತಿಸಿದರು.

# ಗಡಿನಾಡಿನಲ್ಲಿ ಕನ್ನಡದ ಅಸ್ಮಿತೆ : ವಿಚಾರ ಸಂಕಿರಣ
## ಕನ್ನಡ ಬಾಯಲ್ಲಿರಲಿ, ಬೇರೆ ಭಾಷೆ ಜೇಬಲ್ಲಿರಲಿ: ಖಾಸಮಠ ಶ್ರೀಗಳು



ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಕನ್ನಡ ಕೇವಲ ಭಾಷೆಯಲ್ಲ ಅದು ನಮ್ಮ ಅಸ್ಮಿತೆ, ಸಂಸ್ಕೃತಿ ಮತ್ತು ಜೀವನ ಮೌಲ್ಯಗಳನ್ನು ಪ್ರತಿಬಿಂಬಿಸುವ ಶಕ್ತಿ, ಶತಮಾನಗಳಿಂದ ಸಂಸ್ಕೃತ ಭಾಷೆ ದೇವಭಾಷೆಯಾಗಿತ್ತು, ಬಸವಾದಿ ಶರಣರು 12 ನೇಯ ಶತಮಾನದಲ್ಲಿ ಕನ್ನಡ ಕಲಿತು ಕನ್ನಡದಲ್ಲಿ ವಚನ ರಚಿಸುವ ಮೂಲಕ ಕನ್ನಡವನ್ನು ದೇವ ಭಾಷೆಯಾಗಿ ಪರಿವರ್ತನೆ ಮಾಡಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟರು. ಸದಾ ಕನ್ನಡ ಬಾಯಲ್ಲಿರಲಿ ಬೇರೆ ಭಾಷೆ ಜೇಬಲ್ಲಿರಲಿ, ಕನ್ನಡ ಪರ ಹೋರಾಟಗಾರರು ಕನ್ನಡದ ಕುರಿತು ಶರಣರ ವಿಚಾರ ತಿಳಿಸುವಲ್ಲಿ ವಿಫಲರಾಗಿದ್ದರೆ ಎಂದು ಗುರುಮಠಕಲ್ ಖಾಸಮಠದ ಪೂಜ್ಯ ಶ್ರೀ ಶಾಂತವೀರ ಗುರುಗಳ ರಾಜೇಂದ್ರ ಸ್ವಾಮಿಗಳು ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ಸರ್ಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಮತ್ತು ಶ್ರೀ ಹೊನ್ಕಲ್ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ (ರಿ) ಶಹಾಪುರ ಹಾಗೂ ಸರಕಾರಿ ಪ್ರಥಮ ದರ್ಜೆ ಕಾಲೇಜು ಗುರುಮಠಕಲ್ ಸಂಯುಕ್ತ ಆಶ್ರಯದಲ್ಲಿ "ಗಡಿನಾಡಿನಲ್ಲಿ ಕನ್ನಡದ ಅಸ್ಮಿತೆ" ಕುರಿತ ಒಂದು ದಿನದ ವಿಚಾರ ಸಂಕಿರಣವು ಸೋಮವಾರ ಗುರುಮಠಕಲ್ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಜೆ.ವಿ. ಪುರುಷೋತ್ತಮ ಅವರು ಉದ್ಘಾಟಿಸಿ ಮಾತನಾಡಿ, ಗಡಿನಾಡು ಪ್ರದೇಶಗಳಲ್ಲಿ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಹೊಣೆಗಾರಿಕೆ ಎಂದು ಹೇಳಿದರು.

ಕಾರ್ಯಕ್ರಮದ ಕುರಿತು ಡಾ. ಸಿದ್ದರಾಮ ಹೊನ್ಕಲ್ ರವರು ಆಶಯ ನುಡಿಗಳನ್ನು ಮಾತನಾಡಿ, ಗಡಿನಾಡು ಭಾಗಗಳಲ್ಲಿ ಕನ್ನಡದ ಬಳಕೆ ಹೆಚ್ಚಿಸಲು ಹಾಗೂ ಯುವ ಪೀಳಿಗೆಯಲ್ಲಿ ಕನ್ನಡದ ಬಗ್ಗೆ ಜಾಗೃತಿ ಮೂಡಿಸಲು ಇಂತಹ ವಿಚಾರ ಸಂಕಿರಣಗಳು ಅತ್ಯಂತ ಅಗತ್ಯವೆಂದು ಹೇಳಿದರು. ಕನ್ನಡದ ಇತಿಹಾಸ, ಶಾಸನ ಪರಂಪರೆ ಮತ್ತು ದೇವಾಲಯ ಸಂಸ್ಕೃತಿಯಂತಹ ವಿಷಯಗಳು ನಮ್ಮ ಭಾಷೆಯ ವೈಭವವನ್ನು ತೋರಿಸುತ್ತವೆ, ಸುಮಾರು 3500 ಭಾಷೆಗಳು ಬಳಕೆ ಇಲ್ಲದ ಕಾರಣ ಅವನತಿಯತ್ತ ಸಾಗಿವೆ, ಸ್ವಂತ ಲಿಪಿ ಹೊಂದಿರುವ ಕನ್ನಡಕ್ಕೆ ಸಾವಿಲ್ಲ ಆದರೆ ಅಭಿಮಾನದ ಕೊರತೆ ಇದೆ ಎಂದು ತಿಳಿಸಿದರು.

ಶಾಸನಗಳಲ್ಲಿ ಕನ್ನಡ ವಿಷಯವನ್ನಾದರಿಸಿ ಡಾ. ಎಮ್. ಎಸ್. ಶಿರವಾಳ ವಿಶೇಷ ಉಪನ್ಯಾಸ ನೀಡಿದರು, ಅಳಿಸಲಾಗದ ಬರಹ ಶಾಸನ ರಾಜನ ಆಜ್ಞೆ, ಕಲ್ಲಿನ ಮೇಲೆ, ತಾಮ್ರದ ಪಟಗಳ ಮೇಲೆ, ಮಣ್ಣಿನ ಗಡಿಗೆ, ಹಾಗೂ ಮೂಳೆಗಳ ಮೇಲೆ ಶಾಸನಗಳನ್ನು ಬರೆಯಲಾಗಿದೆ, ಗೋವುಗಳ ಮತ್ತು ಮಹಿಳೆಯರ ಉಳಿವಿಗಾಗಿ ಪ್ರಾಣತೆತ್ತ ವೀರರ ನೆನಪಾರ್ಥ ವೀರಗಲ್ಲುಗಳನ್ನು ಸ್ಥಾಪಿಸಿ ಕೇಡು ಬಯಸುವವರಿಗೆ ಯುದ್ಧದ ಎಚ್ಚರಿಕೆ ನೀಡುತ್ತಿದ್ದರು, ದಾನ ಶಾಸನ ಮತ್ತು ದತ್ತಿ ಶಾಸನಗಳ ಕುರಿತು ವಿವರಣೆ ನೀಡಿ ಶಾಸನಗಳು ಚರಿತ್ರೆ ಬಡಲಾಯಿಸಿವೆ ನಾವು ಅವುಗಳನ್ನು ನೋಡುವ ದೃಷ್ಟಿ ಬದಲಾಗಬೇಕು, ನಮ್ಮ ಯಾದಗಿರಿ ಜಿಲ್ಲೆಯಲ್ಲಿ ಶಾಸನಗಳ ಸಂರಕ್ಷಣೆಗೆ ಹೆಚ್ಚು ಮಹತ್ವ ಸಿಗಲಿ ಎಂದು ಹೇಳಿದರು. ವಿಚಾರ ಸಂಕಿರಣದಲ್ಲಿ ಜನಪದ ಮತ್ತು ದಾಸ ಸಾಹಿತ್ಯದ ವೈಶಿಷ್ಟತೆ ವಿಚಾರವಾಗಿ ಕನ್ನಡದ ಉಪನ್ಯಾಸಕರಾದ ವೆಂಕಟೇಶ್ವರರವರು ಮಾತನಾಡಿದರು. ವಚನ ಚಳುವಳಿ ಮತ್ತು ತತ್ವಪದ ಸಾಹಿತ್ಯ ಕುರಿತಾಗಿ ವಿಶ್ವರಾಧ್ಯ ಸತ್ಯಂಪೇಟೆ ಮಾತನಾಡಿದರು.

ಕನ್ನಡದ ಇತಿಹಾಸ, ಶಾಸನ ಪರಂಪರೆ, ದೇವಾಲಯಗಳ ಸಾಂಸ್ಕೃತಿಕ ಮಹತ್ವ ಹಾಗೂ ಗಡಿನಾಡು ಪ್ರದೇಶಗಳಲ್ಲಿ ಕನ್ನಡ ಭಾಷೆಯ ಸ್ಥಿತಿ ಕುರಿತು ವಿಸ್ತತವಾಗಿ ಅಥಿತಿಗಳು, ವಿದ್ಯಾರ್ಥಿಗಳು, ಉಪನ್ಯಾಸಕರು ಗೋಷ್ಠಿಯಲ್ಲಿ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಉಪನ್ಯಾಸಕ ಬಳಗ ಡಾ. ಬಾಬುರಾಯ ದೊರೆ, ಡಾ. ಮಲ್ಲಪ್ಪ, ಡಾ. ಕೃಷ್ಣಾ ಕೆ, ಡಾ. ಮರೆಪ್ಪ ನಾಟೇಕರ್ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪ.ಪಂಗಡ: ಪಕ್ಕಾ ಮನೆ ನಿರ್ಮಾಣ ಸಹಾಯಧನ ಸೌಲಭ್ಯಕ್ಕೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಶಹಾಪೂರ ನಗರಸಭೆ ವತಿಯಿಂದ 2023-24, 2024-25, 2025-26ನೇ ಸಾಲಿನ ಎಸ್‌ಎಫ್‌ಸಿ ಅನುದಾನದಡಿಯಲ್ಲಿ ಪರಿಶಿಷ್ಟ ಪಂಗಡ ಜನಾಂಗದವರಿಗೆ ಪಕ್ಕಾ ಮನೆ ನಿರ್ಮಾಣ ಸಹಾಯಧನ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಶಹಾಪೂರ ನಗರಸಭೆ ಪೌರಾಯುಕ್ತರು ಜೀವನಕುಮಾರ ಅವರು ತಿಳಿಸಿದ್ದಾರೆ.

ಶೇ.6.95 ರಷ್ಟು ಪರಿಶಿಷ್ಟ ಪಂಗಡ ಜನಾಂಗದವರಿಗೆ ಪಕ್ಕಾ ಮನೆ ನಿರ್ಮಾಣಕ್ಕಾಗಿ ಸಹಾಯಧನ ಪಡೆಯಲು ಈ ಯೋಜನೆಯಡಿಯಲ್ಲಿ ತರಬೇತಿ ಪಡೆಯಲು ದಾಖಲಾತಿಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸಬೇಕು.

ದಾಖಲಾತಿಗಳು ವಿವರ : ನಮೂನೆ-3, ಆಸ್ತಿ ತೆರಿಗೆ ಪಾವತಿಸಿದ ರಸೀದಿ, ಬಡತನ ರೇಖೆ-ಗಿಂತ ಕೆಳಗಿನವರಾಗಿದ್ದು, ಬಿ.ಪಿ.ಎಲ್ ಪಡಿತರ ಚೀಟಿ ಕಡ್ಡಾಯವಾಗಿ ಲಗತ್ತಿಸಬೇಕು, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಬೇಕು, ವಾಸಸ್ಥಳ ಪ್ರಮಾಣ ಪತ್ರ ಲಗತ್ತಿಸಬೇಕು, ಆಧಾರ ಕಾರ್ಡ್ ಮತ್ತು ಚುನಾವಣೆ ಗುರುತಿನ ಚೀಟಿ, ಬ್ಯಾಂಕ್ ಪಾಸ್‌ಬುಕ್ ಪ್ರತಿ, ಎಲ್ಲಾ ದಾಖಲಾತಿಗಳು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ 2026ರ ಮಾರ್ಚ್ 25ರ ಒಳಗೆ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು, ಅದೇ ರೀತಿ ಅಪೂರ್ಣ ದಾಖಲಾತಿಗಳನ್ನು ಹೊಂದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ನಗರಸಭೆ ಕಾರ್ಯಾಲಯದ ವಿಷಯ ನಿರ್ವಾಹಕರಿಗೆ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 7ನೇ ಶತಮಾನದ ಇಮ್ಮಡಿ ಪುಲಕೇಶಿ ಕಾಲದ ಶಾಸನ ಶೋಧ

• ಸುರೇಶ ಕೆ.ವಿ ಮಲ್ಲಮ್ಮ ನುಡಿ ವಾರ್ತೆ ಮುದಗಲ್



ಸಮೀಪದ ಪಿಕಳಿಹಾಳ ಗ್ರಾಮ ಇಷ್ಟು ದಿನಗಳವರೆಗು ಕೇವಲ ಆದಿಮಾನವರ ನೆಲೆ ಎಂದು ಎಲ್ಲರು ತಿಳಿದುಕೊಂಡಿದ್ದರು, ಆದರೆ ಇತಿಹಾಸ ಆಸಕ್ತರಾದ ಅಶೋಕ ನಾಯಕ ದಿದ್ದಿಗಿ ರವರು ಇದೆ ತಿಂಗಳು 7 ರಂದು ಪಿಕಳಿಹಾಳದ ಬೆಟ್ಟದಲ್ಲಿ ಇಮ್ಮಡಿ ಪುಲಕೇಶಿ ಕಾಲದ ಶಾಸನವನ್ನು ಪತ್ತೆ ಮಾಡಿದ್ದಾರೆ.

ಒಂದು ಸಾಲಿನ ಶಾಸನ ಇದಾಗಿದ್ದು, ಅಕ್ಷರಗಳನ್ನು ಗಮನಿಸಿದಾಗ ಕ್ರಿ.ಶ.640 ರಿಂದ ಕ್ರಿ.ಶ 700 ಒಳಗಿನ ಶಾಸನ ಇದಾಗಿರಬಹುದೆಂದು ನಿರ್ದೇಶಕರು, ಪುರಾತತ್ವ, ವಸ್ತುಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಡಾ.ಸ್ಮಿತಾ ರೆಡ್ಡಿ ತಿಳಿಸಿದ್ದಾರೆ. ಶಾಸನವು ದೊಡ್ಡ ದೊಡ್ಡ ಅಕ್ಷರಗಳಿಂದ ಕೂಡಿದ ಶ್ರೀ ರಣಮುದ್ದನ್ ಎಂದು ಬರೆದಿದೆ.

ಇದು ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಅಥವಾ ಬಿರುದು ಇರಬಹುದಾಗಿದೆ ಎಂದು ಸಂಶೋಧಕರಾದ ತುಮಕೂರಿನ ಶಶಿಕುಮಾರ ನಾಯಕ ಅವರು ತಿಳಿಸಿದ್ದಾರೆ ಹಳೆಪಿಕಳಿಹಾಳದಲ್ಲಿ 15-16ನೇ ಶತಮಾನದವರೆಗು ಜನವಸತಿ ಇದ್ದಿರಬಹುದಾಗಿದೆ ಕಾರಣ ಅಲ್ಲಿರುವ ಆಂಜನೇಯನ ದೇವಾಲಯ. ಈ ದೇವಾಲಯದಲ್ಲಿರುವ ಆಂಜನೇಯನ ಕೆತ್ತನೆ 15-16ನೇ ಶತಮಾನದ ಶೈಲಿ ಹೊಂದಿದೆ. ಅದೇ ರೀತಿ ಪಿಕಳಿಹಾಳದಲ್ಲಿ ಆದಿಮಾನವನು ನವಶಿಲಾಯುಗದ ಸಮಯದಲ್ಲಿ ವರ್ಣ ಚಿತ್ರಗಳನ್ನು ಬಿಡಿಸಿದ್ದಾನೆ ಅವುಗಳು ಕೂಡ ಒಂದು ಪುಟ್ಟ ಬೆಟ್ಟದಲ್ಲಿ ಇದ್ದಾವೆ. ಆದರೆ ಆ ಸ್ಥಳದಲ್ಲಿ ಆಧುನಿಕ ಪ್ರೇಮಿಗಳು ತಮ್ಮ ವಿಕೃತಿಯನ್ನು ತೋರಿ ಆದಿಮಾನವನ ವರ್ಣಚಿತ್ರಗಳನ್ನು ಹಾಳುಗೆಡವಿದ್ದಾರೆ. ಆದಿಮಾನವನ ವೃತ್ತಾಕಾರಾದ ಶಿಲಾ ಸಮಾಧಿಗಳು, ಮಡಿಕೆ ಚೂರುಗಳು, ಶಿಲಾಯುಧಗಳು, ಕಬ್ಬಿಣ ತಯಾರು ಮಾಡಿಕೊಂಡಾಗ ಉಳಿದ ಕಬ್ಬಿಣದ ಕಿಟ್, ಮತ್ತು ಆದಿಮಾನವ ಪಶುಸಂಗೋಪನೆ ಮಾಡಿದಾಗ ದನಕರುಗಳಿಗೆ ನೀರು ಕೂಡಿಸಲು ಬಳಸಿದ ಕಲ್ಲುಗಳು ಈಗಲು ಸಹ ಅಲ್ಲಲ್ಲಿ ನೋಡಲು ಕಾಣಸಿಗುತ್ತವೆ.

ಬೆಟ್ಟದ ತುಂಬೆಲ್ಲಾ ಆದಿಮಾನವನು ಕೆತ್ತಿದ ಕುಟ್ಟುಚಿತ್ರಗಳು ಕಾಣಸಿಗುತ್ತವೆ, ವಿಶೇಷವಾಗಿ ಜಿಂಕೆ, ಸಾರಂಗ, ಕಾಡೆಮ್ಮೆ, ಕಾಡುಕೋಣ, ಹುಲಿ ಚಿತ್ರಗಳು ಬೆಟ್ಟ ತುಂಬೆಲ್ಲಾ ಬಂಡೆಗಳ ಮೇಲೆ ಕಾಣಬಹುದಾಗಿದೆ. ಪಿಕಳಿಹಾಳದ ಹತ್ತಿರದವರೆಗೆ ಹಲವಾರು ಕಲ್ಲಿನ ಕ್ವಾರಿಗಳು ಬಂದ ಕಾರಣ ಇನ್ನು ಕೆಲವೆ ದಿನಗಳಲ್ಲಿ ಇವೆಲ್ಲವು ನಾಶ ಆಗಬಹುದೆಂದು ಭಯವು ಇದೆ.

ಕಲ್ಲು ಕ್ವಾರಿಗಳ ಹಾವಳಿಯ ಜೊತೆ ನಿಧಿಗಳ್ಳರ ಹಾವಳಿಯು ಹೆಚ್ಚಾಗಿದೆ ಪಿಕಳಿಹಾಳದ ಪರಿಸರದಲ್ಲಿ ಎಲ್ಲೆಂದರಲ್ಲಿ ನಿಧಿಗಾಗಿ ನೆಲವನ್ನು ಹಗೆದಿದ್ದಾರೆ. ಹಾಗಾಗಿ ಇದಕ್ಕೆ ಸಂವಂಧಪಟ್ಟ ಇಲಾಖೆಗಳು ಪಿಕಳಿಹಾಳವನ್ನು ಸಂರಕ್ಷಣೆ ಮಾಡಿಕೊಳ್ಳುವ ಅಗತ್ಯತೆ ಬಹಳ ಮುಖ್ಯವಾಗಿದೆ ಈ ಕಾರ್ಯದಲ್ಲಿ ಸಿದ್ಧಾರೂಢ ಗುಡದನಾಳ ಮತ್ತು ಸಂತೆಕೆಲ್ಲೂರು ಶಾಲೆಯ ಶಿಕ್ಷಕ ಮಲ್ಲಪ್ಪ ಪಿಕಳಿಹಾಳ ಇದ್ದರು.

# ವಿಶ್ವ ಮಹಿಳಾ ದಿನಾಚರಣೆ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಯಲ್ಲಾಪುರ ಪಟ್ಟಣ ಪಂಚಾಯತ್ ವ್ಯಾಪ್ತಿಯ ಕಾಳಮ್ಮ ನಗರ ಪ್ರದೇಶದಲ್ಲಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಯಲ್ಲಾಪುರ ಇದರ ವತಿಯಿಂದ, ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಭಾನುವಾರ ಆಯೋಜಿಸಲಾಗಿತ್ತು. ಮಾಜಿ ಶಾಸಕ ವಿ.ಎಸ್. ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಿದರು, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ದೇವಿದಾಸ (ಉಲ್ಲಾಸ) ನಾಗೇಶ್ ಶಾನಭಾಗ ಯಲ್ಲಾಪುರ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಗ್ಯಾರಂಟಿ ಸಮಿತಿ ಸದಸ್ಯರು ಹಾಗೂ ಪಟ್ಟಣ ಪಂಚಾಯತ್ ಮಾಜಿ ಅಧ್ಯಕ್ಷೆ ನರ್ಮದಾ ನಾಯ್ಕ, ಯಲ್ಲಾಪುರ ಮಹಿಳಾ ಅಧ್ಯಕ್ಷ ಪೂಜಾ ನೇತ್ರೆಕರ್, ಗ್ಯಾರಂಟಿ ಸಮಿತಿ ಸದಸ್ಯ ಅನಿಲ್ ಮರಾಠೆ, ಯಲ್ಲಾಪುರ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು, ಪ್ರದೇಶದ ಸುತ್ತಮುತ್ತಲಿನ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಲಕ್ಷ್ಮೀ ಮರಾಠೆ ಹಾಗೂ ದೇವಾಡಿಗ ಇವರನ್ನು ಸನ್ಮಾನಿಸಲಾಯಿತು.

# ಎಸ್ಸೆಸ್ಸೆಲ್ಸಿ: ನಾರಾ ಭರತ್ ರೆಡ್ಡಿ ಪತ್ರ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಳ್ಳಾರಿ ನಗರ ಕ್ಷೇತ್ರದ ಶಾಸಕ ನಾರಾ ಭರತ್ ರೆಡ್ಡಿಯವರು ಪರೀಕ್ಷೆಗೆ ಸಜ್ಜಾಗಿರುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪತ್ರ ಬರೆದಿದ್ದಾರೆ.

ನಗರ ಕ್ಷೇತ್ರದ 45ಕ್ಕೂ ಹೆಚ್ಚು ಶಾಲೆಗಳ ಅಂದಾಜು ಮೂರು ಸಾವಿರ ವಿದ್ಯಾರ್ಥಿಗಳಿಗೆ ಪತ್ರ ಬರೆದಿರುವ ಅವರು ಧೈರ್ಯ ಮತ್ತು ಶಾಂತ ಮನಸ್ಸಿನಿಂದ ಪರೀಕ್ಷೆ ಬರೆಯಿರಿ ಎಂದು ಸಲಹೆ ನೀಡಿದ್ದಾರೆ.

ಅವರು ಪ್ರತಿ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಕಳಿಸಿರುವ ಪತ್ರದ ಒಕ್ಕಣೆ ಈ ರೀತಿ ಇದೆ.

ಪ್ರೀತಿಯ ಎಲ್ಸಿ ವಿದ್ಯಾರ್ಥಿಗಳೇ ಮತ್ತು ಗೌರವಾನ್ವಿತ ಪೋಷಕರೇ,

ಬಳ್ಳಾರಿ ಜಿಲ್ಲೆಯ ಭವಿಷ್ಯವಾಗಿರುವ ನನ್ನ ಪ್ರೀತಿಯ ವಿದ್ಯಾರ್ಥಿಗಳೇ, ನಿಮ್ಮ ಶಿಕ್ಷಣ ಯಾತ್ರೆಯ ಮಹತ್ವದ ಘಟ್ಟವೊಂದು ನಿಮ್ಮ ಮುಂದೆ ಬಂದುನಿಂತಿದೆ. ಇದುವರೆಗಿನ ಕಲಿಕೆಯ ಶ್ರಮವು ಸಾರ್ಥಕವಾಗುವುದು ಪರೀಕ್ಷೆಯ ಫಲಿತಾಂಶದಲ್ಲಿ. ಮಾರ್ಚ್ 18 ರಿಂದ ಎಲ್ಸಿ ಪರೀಕ್ಷೆಗಳು ಆರಂಭವಾಗುತ್ತಿರುವ ಈ ಸಂದರ್ಭದಲ್ಲಿ, ನಿಮ್ಮೆಲ್ಲರಿಗೂ ನನ್ನ ಹೃದಯಪೂರ್ವಕ ಶುಭಾಶಯಗಳು.

ಸ್ವಾಮಿ ವಿವೇಕಾನಂದರು ಹೇಳುವಂತೆ ಶಿಕ್ಷಣವು ವ್ಯಕ್ತಿತ್ವ ನಿರ್ಮಾಣಕ್ಕೆ, ಜೀವನವನ್ನು ರೂಪಿಸಲು ಹಾಗೂ ದೇಶದ ಭವಿಷ್ಯವನ್ನು ಕಟ್ಟಲು ಸಹಾಯಕವಾಗಬೇಕು. ಈ ಮಾತನ್ನು ಮನದಲ್ಲಿ ಇಟ್ಟುಕೊಂಡು, ಭಯವಿಲ್ಲದೆ, ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಬೇಕೆಂದು ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ.

ಪ್ರಿಯ ವಿದ್ಯಾರ್ಥಿಗಳೇ, ಪರೀಕ್ಷೆ ನಿಮ್ಮ ಸಾಮರ್ಥ್ಯವನ್ನು ಅಳೆಯುವ ಒಂದು ಹಂತ ಮಾತ್ರ. ಯಶಸ್ಸು ಅಂತಿಮವಲ್ಲ, ವಿಫಲತೆ ಅಂತ್ಯವಲ್ಲ ಮುಂದುವರಿಯುವ ಧೈರ್ಯವೇ ನಿಜವಾದ ವಿಜಯ. ನಿಮ್ಮ ಪರಿಶ್ರಮವೇ ನಿಮ್ಮ ಶಕ್ತಿ. ಶಾಂತ ಮನಸ್ಸಿನಿಂದ, ನಿಯಮಿತ ಅಭ್ಯಾಸದೊಂದಿಗೆ ಉತ್ತರಗಳನ್ನು ಬರೆಯಿರಿ. ನಿಮ್ಮೊಳಗಿನ ಸಾಮರ್ಥ್ಯದ ಮೇಲೆ ನಂಬಿಕೆ ಇಡಿ.

ಗೌರವಾನ್ವಿತ ಪೋಷಕರೇ, ಈ ಸಮಯದಲ್ಲಿ ನಿಮ್ಮ ಪಾತ್ರ ಅತ್ಯಂತ ಮಹತ್ವದ್ದು. ಮಕ್ಕಳಿಗೆ ಒತ್ತಡವಲ್ಲ, ವಿಶ್ವಾಸ ಮತ್ತು ಪ್ರೋತ್ಸಾಹ ಕೊಟ್ಟರೆ ಅವರು ಇತಿಹಾಸವಾಗಿ ಉಳಿಯುತ್ತಾರೆ. ಮಕ್ಕಳನ್ನು ಅಂಕಗಳಿಗಾಗಿ ಅಲ್ಲ, ಅವರ ಪ್ರಯತ್ನಕ್ಕಾಗಿ ಪ್ರಶಂಸಿಸಿ. ನಿಮ್ಮ ಪ್ರೀತಿ ಮತ್ತು ಬೆಂಬಲವೇ ಅವರ ದೊಡ್ಡ ಶಕ್ತಿ.

ನಿಮ್ಮ ಸಾಧನೆಯ ಮೂಲಕ ಜಿಲ್ಲೆಯ ಗೌರವವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಬೇಕೆಂಬುದು ನನ್ನೆದೆಯ ಆಶಯ. "ಒಂದು ಪೀಳಿಗೆಗೆ ಶಿಕ್ಷಣ ಕೊಟ್ಟರೆ, ಅನೇಕ ಪೀಳಿಗೆಗಳು ಬೆಳಗುತ್ತವೆ." ನಿಮ್ಮ ಸಾಧನೆ ನಿಮ್ಮ ಕುಟುಂಬಕ್ಕೆ ಮಾತ್ರವಲ್ಲ, ಸಮಾಜಕ್ಕೂ ದಾರಿ ತೋರಲಿ. ಪರೀಕ್ಷೆಗಳನ್ನು ಆತ್ಮಸ್ಥೈರ್ಯದಿಂದ ಎದುರಿಸಿ, ಯಶಸ್ಸು ನಿಮ್ಮದಾಗಲೆಂದು ಹಾರೈಸುತ್ತೇನೆ ಎಂದು ಅವರು ಪತ್ರದಲ್ಲಿ

# ಗಿರಿ ನಾಡಿನ ಕೀರ್ತಿ ಹೆಚ್ಚಿಸಿದ ನಿವೇದಿತಾ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಪ್ರಸ್ತುತ ದಿನಮಾನಗಳಲ್ಲಿ ಪ್ರತಿಯೊಂದು ಕ್ಷೇತ್ರಗಳಲ್ಲಿ ಹೆಣ್ಣುಮಕ್ಕಳು ಸಾಧನೆಯನ್ನು ಸಾಧಿಸುತ್ತಿರುವುದು ಹೆಣ್ಣು" ಅಬಲೆ ಅಲ್ಲಾ ಸಬಲೆ" ಎಂಬ ಮಾತು ಸತ್ಯವಾಗುತ್ತಿದೆ. ಹೆಣ್ಣು ಮಕ್ಕಳ ಸಾಧನೆ ನಾಡಿಗೆ ಹಾಗೂ ದೇಶಕ್ಕೆ ಹೆಮ್ಮೆಯ ಸಂಗತಿಯಾಗಿದೆ ಎಂದು ನಿವೃತ್ತ ಕೃಷಿ ಅಧಿಕಾರಿ ಯಲ್ಲಪ್ಪ ಮಾಳಿಕೇರಿ ಹೇಳಿದರು. ಇತ್ತೀಚಿಗೆ ಯು ಪಿ ಎಸ್ ಇ (ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ ) ನಡೆಸಿದ 2025 ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆಯಲ್ಲಿ 469 ನೇ ರಾಂಕ್ ಪಡೆದು ತೇರ್ಗಡೆಯಾಗಿರುವ

ಗಿರಿ ನಾಡಿನ ಪ್ರಥಮ ಐ ಎ ಎಸ್ ಅಧಿಕಾರಿಯಾಗಿ ಕುಮಾರಿ ಡಾ.ನಿವೇದಿತಾ ಅವರನ್ನು ಭಾನುವಾರ ಅವರ ನಿವಾಸಕ್ಕೆ ಭೇಟಿ ನೀಡಿ ಸನ್ಮಾನಿಸಿ ಸಿಹಿ ತಿನಿಸಿ ಮಾತನಾಡಿದ ಅವರು,

ಪರೀಕ್ಷೆ ಫಲಿತಾಂಶದಲ್ಲಿ ಯಾದಗಿರಿ ಎಂದರೆ ಸಾಕು ಕೊನೆಯ ಸ್ಥಾನವೆಂದೇ ಪರಿಗಣಿಸಿತ್ತಿದ್ದ ಹಣೆಪಟ್ಟಿಯನ್ನು ಡಾ. ನಿವೇದಿತಾ ಸೇರಿ ಜಿಲ್ಲೆಯ ಮೂರು ಜನ ಐ ಎ ಎಸ್ ಪಾಸಾದ ಯುವಕರು ಕಳಚಿದ್ದಾರೆ ಎಂಬ ಮಾತುಗಳು ಜಿಲ್ಲೆಯ ಜನರಲ್ಲಿ ಬಂದಿದ್ದು ತುಂಬಾ ಹೆಮ್ಮೆಯ ಸಂಗತಿಯಾಗಿದೆ ಅದರಲ್ಲೂ ಒಬ್ಬ ಯುವತಿ ಇಂತಹ ಮಾಹಾನ್ ಸಾಧನೆ ಮಾಡಿದ್ದು ಗಿರಿ ಜಿಲ್ಲೆಗೆ ಕೀರ್ತಿ ತಂದಿದೆ ಎಂದು ಹೇಳಿದರು.

ಈ ಸಂಧರ್ಭದಲ್ಲಿ ನಿವೃತ್ತ ಶಿರೆಸ್ತದಾರ ಭೀಮರಾಯ ಹಬ್ಬಳ್ಳಿ, ಸಲ್ಮಾನ್ ಯಡ್ಡಳ್ಳಿ, ನೀವೇದಿತಾ ಪೋಷಕರಾದ ಚಂದಪ್ಪ ಬಾವಿಮನಿ, ವಿಜಯಲಕ್ಷ್ಮಿ, ದಂಪತಿಗಳು ಇದ್ದರು.

# ಶ್ರೀದೇವಿ ಹಿರೇಮಠಗೆ ಉತ್ತಮ ಸೇವಕಿ ಪ್ರಶಸ್ತಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಪ್ರತಿವರ್ಷದಂತೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬಣಗಾರ ಪೌಂಡೇಷನ್ ವತಿಯಿಂದ ನೀಡಲಾಗುವ ತಾಲೂಕ ಉತ್ತಮ ಸೇವಾ ಪ್ರಶಸ್ತಿಯನ್ನು ಸುರಪುರ ನಗರಸಭೆಯಡೇ-ನಲ್ಮ್ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಶ್ರೀದೇವಿ ಹಿರೇಮಠರವರಿಗೆ ನೀಡಲಾಗಿದೆ ಎಂದು ತಾಲೂಕ ಬಣಗಾರ ಪೌಂಡೇಷನ್ ಅಧ್ಯಕ್ಷರಾದ ವಸಂತಕುಮಾರ ಬಣಗಾರ ತಿಳಿಸಿದ್ದಾರೆ.

ನಗರದ ಹಳೆ ಆರೋಗ್ಯ ಕೇಂದ್ರದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸುಮಾರು 04 ವರ್ಷಗಳಿಂದ ನಗರಸಭೆ ವ್ಯಾಪ್ತಿಯಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳ ರಚನೆ, ಮಹಿಳೆಯರಿಗೆ ಸಾಲ ಸೌಲಭ್ಯ ಹಾಗೂ ನಗರದ ಬೀದಿ ವ್ಯಾಪಾರಿಗಳಿಗೆ ಸಾಲ ಸೌಲಭ್ಯ ಕಲ್ಪಿಸುವಲ್ಲಿ ಅವಿರತವಾಗಿ ಶ್ರುಮಿಸುತ್ತಿರುವುದನ್ನು ಗುರುತಿಸಿ ಸದರಿಯವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ಹೇಳಿದರು.

ಸುರಪುರ ನಗರಸಭೆಯ ಕಚೇರಿ ವ್ಯವಸ್ಥಾಪಕರಾದ ಯಲ್ಲಪ್ಪ ನಾಯಕ, ಸಮುದಾಯ ಸಂಘಟಕರಾದ ದುರುಗಪ್ಪ ನಾಯಕ, ಸಮುದಾಯ ಸಂಪನ್ಮೂಲ ವ್ಯಕ್ತಿ ಕುಮಾರಿಗೀತಾ, ಕಕ್ಕೇರಾ ಪುರಸಭೆಯ ಸಮುದಾಯ ಸಂಘಟಕರಾದ ಶ್ರೀಮತಿ ತಿಪ್ಪಮ್ಮ ಬಿರಾದಾರ ಹಾಗೂ ಕಮೂನಿಟಿ ಮೊಬಿಲೈಜರ್ ಶ್ರೀಮತಿ ವರ್ಷ ಯಾದವ ಅಬಿನಂದನೆಗಳು ತಿಳಿಸಿದರು.

# ಛತ್ರಪತಿ ಶಿವಾಜಿಮಹಾರಾಜ ಜಯಂತಿ




• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಹಿಂದೂ ಸ್ವರಾಜ ವತಿಯಿಂದ ಛತ್ರಪತಿ ಶಿವಾಜಿಮಹಾರಾಜ ಜಯಂತಿ ಆಚರಣೆ ರವಿವಾರ ಸಂಜೆ ಮಾಡಲಾಯಿತು.

ಪಟ್ಟಣದ ಸೋಮವಾರ ಪೇಟೆ ಬನ್ನಿ ಮಹಾಂಕಾಳಿ ದೇವಸ್ಥಾನ ಮುಂಭಾಗದಲ್ಲಿ ದೇಶ ಭಕ್ತ ಛತ್ರಪತಿ ಶಿವಾಜಿ ಮಹಾರಾಜ ಅವರ ಮೂರ್ತಿಗೆ ಸಿದ್ದಯ್ಯ ಸ್ವಾಮಿ ಪೂಜೆ ಸಲ್ಲಿಸಿದರು. ಮೆರವಣಿಗೆಗೆ ಶಶಿಕಲಾ ಬೋವಿ ಚಾಲನೆ ನೀಡಿದರು. ಪುಷ್ಪರ್ಚನೆ ಮಾಡಲಾಯಿತು. ಛತ್ರಪತಿ ಶಿವಾಜಿ ಮಹಾರಾಜರ ಭಾವ ಚಿತ್ರದ ಜೊತೆಗೆ ಪುಷ್ಪಾ ಹಾಗೂ ಹಸಿರು ತೋರಣಗಳಿಂದ ಸಿಂಗರಿಸಲಾದ ಮೆರವಣಿಗೆ ಪ್ರಾರಂಭಿಸಲಾಯಿತು. ವಿವಿಧ ಸಂಗೀತ ವಾದ್ಯ ವೆಭವಗಳಿಂದ ಕೂಡಿದ ಮೆರವಣಿಗೆ ಅಂಬೇಡ್ಕರ ಹಾಯ್ದು ವಿವಿಧ ಬಡಾವಣೆಗಳಲ್ಲಿ ಮರೆವಣಿಗೆ ಮಾಡಿ ಬಸವೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಮೆರವಣಿಗೆ ಸಂಪನ್ನ ಮಾಡಲಾಯಿತು. ಡಾ! ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ವಿವಿಧ ಮುಖಂಡರಿಂದ ಮಾಲಾರ್ಪಣೆ ಮಾಡಿದರು .

ರಾಯಚೂರು ಎಸ್ ಪಿ ಅರುಣಾಂಶಗಿರಿ ನೇತೃತ್ವದಲ್ಲಿ ಪೊಲೀಸ್ ಬಿಗಿಬದ್ಧತೆ ಮಾಡಲಾಗಿತ್ತು. ಅಡಿಷನಲ್ ಎಸ್ ಪಿ ಕುಮಾರಸ್ವಾಮಿ, ಡಿವೈಎಸ್ಪಿ ದತ್ತಾತ್ರೆ ಕಾರ್ನಾಡ್, ಸಿಪಿಐ ರಾಮಣ್ಣ ಜಲಿಗೇರಿ, ಶಿವಾನಂದ ಸಜ್ಜನ್, ಪಿಎ ವೆಂಕಟೇಶ್ ಮಾಡಿಗೇರಿ, ಮಸ್ಕಿ ಪಿಎ ರಂಗಯ್ಯ, ರಾಯಚೂರು ಗ್ರಾಮಾಂತರ ಪಿಎ ಪ್ರಕಾಶ ಡಂಬಳ, ಪಿಎ ಧರ್ಮಪ್ಪ, ಪಿಎ ಭೀಮದಾಸ, ಡಾ! ಗುರುರಾಜ್ ದೇಶಪಾಂಡೆ, ಗುಂಡಪ್ಪ ಗಂಗಾವತಿ, ವಿಎಸ್ ಬ್ಯಾಂಕ್ ಅಧ್ಯಕ್ಷ ಶರಣಬಸವ ವ್ಯಾಕರನಾಳ, ರವಿ ಕಟ್ಟಿಮನಿ, ಪಕೀರಪ್ಪ ಕುರಿ, ನ್ಯಾಮತ್ ಖಾದ್ರಿ, ರಘುವೀರ ಮೇಗಳಮನೆ, ಶಿವರಾಜ ತಳವಾರ, ಕರಿಯಪ್ಪ ಯಾದವ, ಹೇಮಂತ ನಾಗಲಾಪುರ, ಕಾಂತ ಕುಮಾರ ಪತ್ತಾರ, ಸಂತೋಷ, ರಾಘವೇಂದ್ರ ಸುರಪುರ, ಉದಯಕುಮಾರ ಕಮ್ಮಾರ, ವಿಜಯ ಪಾಟೀಲ್ ಹಾಗೂ ಪೊಲೀಸ್ ಸಿಬ್ಬಂದಿಗಳು ಸೇರಿದಂತೆ ಇತರರಿದ್ದರು.

# ಕುಡಿಯುವ ನೀರಿನ ಯೋಜನೆ 125 ಕೋಟಿ ಅನುದಾನ



• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆಯೋಜಿಸಲಾದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಯಂಕಣ್ಣ ಯರಾಶಿ ಮಾತನಾಡುತ್ತಾ ನಮ್ಮ ಕ್ಷೇತ್ರದ ಎರೆಬಾಗದ ಜನರು ಕುಡಿಯುವ ನೀರಿಗಾಗಿ ತೊಂದರೆ ಅನುಭವಿಸುತ್ತಿದ್ದು ಕಂಡು ಮುಖ್ಯಮಂತ್ರಿಗಳಿಗೆ ಮನದಟ್ಟು ಮಾಡಿ ಕ್ಷೇತ್ರದ ಒಟ್ಟು 23 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಅನುಷ್ಠಾನಕ್ಕಾಗಿ ಈ ಬಾರಿ ಬಜೆಟ್ ನಲ್ಲಿ 125 ಕೋಟಿ ಗಳನ್ನು ಮೀಸಲಿರಿಸಿದ್ದು ಇದರಿಂದ ಕ್ಷೇತ್ರದ ಜನತೆ ಅತ್ಯಂತ ಸಂತಸ ಗೊಂಡಿರುತ್ತಾರೆ ಹಾಗೂ ಇದೇ ಮಾರ್ಚ್ 16ನೇ ತಾರೀಕು ಕ್ಷೇತ್ರದ ಮಹಿಳೆಯರು ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಲಿದ್ದಾರೆ ಎಂದು ತಿಳಿಸಿದರು.

ಇಲ್ಲಿಯತನಕ ತುಂಗಭದ್ರಾ ನದಿಯ ಪಾತ್ರದಿಂದ ಸರಬರಾಜು ಆಗುತ್ತಿದ್ದ ಶುದ್ಧ ಕುಡಿಯುವ ನೀರು ಕೇವಲ ಎಂಟು ಏಳು ಗ್ರಾಮಗಳಿಗೆ ಮಾತ್ರ ಸೀಮಿತವಾಗಿತ್ತು ಆದರೆ 125 ಕೋಟಿ ಅನುದಾನದಲ್ಲಿ ಅನುಷ್ಠಾನಗೊಳ್ಳಲಿರುವ ಯೋಜನೆಯು 23 ಹಳ್ಳಿಗಳಿಗೆ ಪ್ರತಿಯೊಬ್ಬರಿಗೆ 80 ಲೀಟರ್ಗೊಳ್ಳಲಿದೆ ಇದಕ್ಕಾಗಿ ನದಿ ಪಾತ್ರದಲ್ಲಿ ಚೆಕ್ ಡ್ಯಾಮ್ ಮಾಡಿ ನೀರು ಸಂಗ್ರಹಿಸಿ ಸರಬರಾಜು ಮಾಡುವುದರೊಂದಿಗೆ ಇನ್ನಿತರ ಯೋಜನೆಯನ್ನು ಸಹ ಒಳಗೊಂಡಿದೆ ಆದ್ದರಿಂದ ಮುಂದಿನ ದಿನಗಳಲ್ಲಿ ಸಂಪೂರ್ಣ ನೀರು ಒದಗುವ ದಾಗಿದೆ ಎಂದು ತಿಳಿಸಿದರು.

ಕ್ಷೇತ್ರದ ಬೇವೂರು ಗ್ರಾಮದಲ್ಲಿ ವಸತಿ ಪದವಿ ಕಾಲೇಜು ಮಂಜೂರು ಮಾಡಿದ್ದು ಕ್ಷೇತ್ರದ ಶಿಕ್ಷಣ ಪ್ರಗತಿಗೆ ಹಿಡಿದ ಕೈಗನ್ನಡಿಯಾಗಿದೆ. ಇವೆಲ್ಲಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಕ್ಷೇತ್ರದ ಪ್ರಗತಿ ರಾಜ್ಯದಲ್ಲೇ ಬೆರಲು ಇಲ್ಲದಂತಹ ಕ್ರಾಂತಿ ಮಾಡಲಾಗುತ್ತದೆ ಎಂದರು. ಹಾಗೂ ಈಗಾಗಲೇ ಕ್ಷೇತ್ರದಲ್ಲಿ ಕೆರೆ ತುಂಬಿಸುವ ಯೋಜನೆ ಜಾರಿಯಲ್ಲಿದ್ದು ಕೆಲ ಕೆರೆಗಳಿಂದ ನೀರು ಹೆಚ್ಚಿಗೆ ಸಂಗ್ರಹಗೊಂಡು ಹೊರಗಡೆ ಹರಿದು ಹೋಗುತ್ತಿದ್ದು. ನೀರು ಹರಿದುಹೋಗುವ ಹಳ್ಳಗಳಲ್ಲಿ ಪ್ರತಿ ಒಂದರಿಂದ ಎರಡು ಕಿಲೋಮೀಟರ್ಗಳಿಗೆ ಚೆಕ್ ಡ್ಯಾಮ್ ನಿರ್ಮಿಸುವಂತೆ ಶಾಸಕರಿಗೆ ಮನವಿ ಮಾಡಲಾಗಿದೆ ಎಂದು ಸಹ ತಿಳಿಸಿದ್ದು ಇದರಿಂದ ಅಂತರ್ಜಲ ಹೆಚ್ಚುವ ಸಾಧ್ಯತೆ ಹೆಚ್ಚಾಗಿದೆ ಎಂದು ಹೇಳಿದರು.

ಕುಕನೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತಪ್ಪ ಚಂಡೂರ ಮಾತನಾಡುತ್ತಾ ಈ ಬಾರಿಯ ಬಜೆಟ್ ನಲ್ಲಿ ತಾಲೂಕಿನ ಕುಕನೂರು ಪಟ್ಟಣಕ್ಕೆ ತಾಲೂಕ ಕ್ರೀಡಾಂಗಣ ನಿರ್ಮಾಣ, ಮಾದರಿ ಕ್ರಾಸಿನಿಂದ ಕಾತ್ರಲ್ ಕ್ರಾಸ್ ವರೆಗೆ ರಸ್ತೆಯ ಅಭಿವೃದ್ಧಿ, ಯಲಬುರ್ಗಾ ಹಾಗೂ ಕುಕುನೂರು ತಾಲೂಕಿನ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸಲು 25 ಕೋಟಿ ರೂಪಾಯಿಗಳ ಅನುದಾನದಲ್ಲಿ ಕೆರೆಗಳ ಅಭಿವೃದ್ಧಿ, ದೇವರು ಗ್ರಾಮದಲ್ಲಿ 18 ಕೋಟಿ ರೂಪಾಯಿ ವೆಚ್ಚದಲ್ಲಿ ವಸತಿ ಇಟ್ಟ ಪ್ರಥಮ ದರ್ಜೆ ಕಾಲೇಜು ಹಾಗೂ ಕಟ್ಟಡ ಮಂಜುನಾಥ, ತಾಲೂಕಿನ ಏಕಸ್ ಆಟಿಕೆ ಕಾರ್ಖಾನೆಯ ಹತ್ತಿರ 30 ಕೋಟಿ ರೂಪಾಯಿ ವೆಚ್ಚದಲ್ಲಿ ಜಿಟಿಟಿಸಿ ಆರಂಭಕ್ಕೆ ಅನುಮೋದನೆ ನೀಡಲಾಗುತ್ತಿದ್ದು ಕ್ಷೇತ್ರದ ಅಭಿವೃದ್ಧಿಗಾಗಿ ಶಾಸಕರ ರೆಡ್ಡಿ ಅವರ ಶ್ರಮ ಅಪಾರವಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕ ಅಧ್ಯಕ್ಷ ಸಂಗಮೇಶ ಗುತ್ತಿ, ಪ್ರಮುಖರಾದ ಸತ್ಯನಾರಾಯಣಪ್ಪ ಹರಪನಹಳ್ಳಿ, ಮಂಜುನಾಥ ಕಡೆಮನಿ, ರೆಹಮಾನ್ ಸಾಬ ಮಕಪ್ಪನವರ, ಶ್ರೀಧರ ದೇಸಾಯಿ, ಮಹೇಂದ್ರ ಗದಗಿನ ,ಹನುಮಂತಪ್ಪ ಉಪ್ಪಾರ, ಸುಭಾಷ್ ಮಾದನೂರು, ಮಂಜುನಾಥ ಸೋಂಪುರ ಅದು ಇನ್ನಿತರರು ಪಾಲ್ಗೊಂಡಿದ್ದರು.

# ಮಹಿಳೆಯರಲ್ಲಿ ಸ್ವಾವಲಂಬಿ ಬದುಕಿನ ಅರಿವು ಮೂಡಲಿ: ಪ್ರಿಯದರ್ಶಿನಿ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ನಗರದ ಬನ್ನಿಕಟ್ಟಿ ಹತ್ತಿರದ ಕೊಪ್ಪಳ ಮಾರ್ಟ್ ನ ಆವರಣದಲ್ಲಿ ಮಹಿಳಾ ಧ್ವನಿ ಸಂಸ್ಥೆಯ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಮಹಿಳಾ ಧ್ವನಿ ಸಂಸ್ಥಾಪಕಿ ಪ್ರಿಯದರ್ಶಿನಿ ಮುಂಡರಗಿಮಠ ಅವರು ಮಹಿಳೆಯರು ಸಮಾಜದಲ್ಲಿ ಮುಖ್ಯ ಪಾತ್ರವಹಿಸುತ್ತಾರೆ, ಎಲ್ಲರಲ್ಲೂ ಕೂಡ ಒಂದೊಂದು ಪ್ರತಿಭೆ ಇರುತ್ತದೆ,

ಛಲದಿಂದ ಬದುಕುವ ಮಹಿಳೆಯರಿಗೆ ಪ್ರೋತ್ಸಾಹದ ಅಗತ್ಯವಿದೆ. ಎಲ್ಲಾ ಮಹಿಳೆಯರಲ್ಲಿ ಸ್ವಯಂ ರಕ್ಷಣೆ ಮತ್ತು ಸ್ವಾವಲಂಬಿ ಬದುಕಿನ ಬಗ್ಗೆ ಅರಿವು ಮೂಡಲಿ ಎಂದರು. ಇದೇ ವೇಳೆ ಮಹಿಳಾ ಕಾರ್ಮಿಕರೊಂದಿಗೆ ಕೇಕ್ ಕತ್ತರಿಸು ಮೂಲಕ ಪರಸ್ಪರ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

ಇದೇ ವೇಳೆ ಮಹಿಳಾ ಕಾರ್ಮಿಕರಿಗೆ ಬಟ್ಟೆ ವಿತರಿಸಿ ನಿರ್ವಹಿಸುವ ಕಾರ್ಯಕ್ಕೆ ಪ್ರೋತ್ಸಾಹಿಸಲಾಯಿತು. ಕಾರ್ಯಕ್ರಮದಲ್ಲಿ ಬಸವರಾಜ ಹೂಗಾರ, ದ್ರಾಕ್ಷಾಯಣಿ ಹಿರೇಮಠ, ಪ್ರತಿಮಾ ಯಲಿಗಾರ, ಮಂಜುನಾಥ, ಫಾರುಖ್, ನವಶಾದ್, ನಾಸೀರ್, ಸಲ್ಮಾಂ, ಮಂಜುಳಾ, ಹಸ್ಮಾ, ಗೀತಾ ಮತ್ತಿರರು ಉಪಸ್ಥಿತಿ ಇದ್ದು ಮಹಿಳಾ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಿದರು.

# ಎಸ್‌ಎಸ್‌ಎಲ್‌ಸಿ ಮಕ್ಕಳು ಪರೀಕ್ಷೆಯನ್ನು ಎದುರಿಸುವುದು ಸುಲಭ



• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ಕಂಪ್ಲಿ ಪಟ್ಟಣದ ನಿವೇದಿತಾ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸೋಮವಾರ ಸಂಜೆ ಗಣಿತ ವಿಷಯದ ಅನುಭವಿ ಶಿಕ್ಷಕರಾದ ಶ್ರೀ ಗೋಪಾಲಕೃಷ್ಣ ಆಚಾರಿ ಅವರಿಂದ ಮಕ್ಕಳಿಗೆ ಪರೀಕ್ಷೆಯನ್ನು ಎದುರಿಸಲು ಮೋಟಿವೇಶನ್ ತರಗತಿಯನ್ನು ಹಮ್ಮಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಕ ಶ್ರೀ ಗೋಪಾಲಕೃಷ್ಣ ಆಚಾರ್ಯ ಮಾತನಾಡಿ ಮಕ್ಕಳಿಗೆ ವಾರ್ಷಿಕ ಪರೀಕ್ಷೆಯ ಭಯ ಆತಂಕವನ್ನು ಹೋಗಲಾಡಿಸಲು ಸಲುವಾಗಿ ನನ್ನ ಪ್ರಾಥಮಿಕ ಶಿಷ್ಯನಾದ ಹಾಗೂ ಕಂಪ್ಲಿಯ ನಿವೇದಿತಾ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಗುರು ಮರಿಯಪ್ಪ ನನ್ನನ್ನು ಕರೆಸಿಕೊಂಡು ಮಕ್ಕಳೊಂದಿಗೆ ಪರೀಕ್ಷೆಯ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಪರೀಕ್ಷೆಯನ್ನು ಎದುರಿಸಲು ಸರಳ ಮಾರ್ಗವನ್ನು ಮಕ್ಕಳಿಗೆ ನೀಡಲಾಯಿತು ಎಂದರು.

ಈ ಸಂದರ್ಭದಲ್ಲಿ ನಿವೇದಿತಾ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮುಖ್ಯ ಶಿಕ್ಷಕ ಹೆಚ್ ಮರಿಯಪ್ಪ ಮಾತನಾಡಿ ನನ್ನ ಹೊಸ ನೆಲ್ಲುಡಿಯ ಪ್ರಾಥಮಿಕ ಶಾಲೆಯ ಗಣಿತ ಶಿಕ್ಷಕರಾದ ಶ್ರೀ ಗೋಪಾಲಕೃಷ್ಣ ಆಚಾರಿ ಸಾರ್ ಅವರು ನನಗೆ ಪ್ರಾಥಮಿಕ ಹಂತದಲ್ಲಿ ತೋರಿದ ಪರೀಕ್ಷೆಗೆ ಅನುಭವಗಳನ್ನು ಮತ್ತು ಸರಳ ಮಾರ್ಗವನ್ನು ಮಕ್ಕಳಿಗೆ ನೀಡಿದ ನನ್ನ ಗುರುಗಳಿಗೆ ಸದಾ ನಾನು ಚಿರಋಣಿಯಾಗಿರುತ್ತೇನೆ. ಗುರುಗಳ ಆಶೀರ್ವಾದ ಸದಾ ನನ್ನ ಮೇಲೆ ಹಾಗೂ ನಮ್ಮ ಮಕ್ಕಳ ಮಕ್ಕಳ ಮೇಲೆ ಇರಲಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಸಾಶಿ ಶಿಕ್ಷಕರಾದ ಶುಭಾಷ್ ಮಹೇಶ್ ಕುಮಾರ್ ಅಫ್ರೋಜ್ ಸೇರಿದಂತೆ ಸಿಬ್ಬಂದಿ ವರ್ಗದವರು ಮಕ್ಕಳು ಉಪಸಿದ್ಧರಿದ್ದರು.

# ವಿದ್ಯಾರ್ಥಿ ಸಾವು: ಎಬಿವಿಪಿ ಪ್ರತಿಭಟನೆ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಗುರುಕುಲ ಶಾಲೆಯ ವಸತಿ ನಿಲಯದಲ್ಲಿ ನಡೆದ ಹಲ್ಲೆ ಪ್ರಕರಣದಲ್ಲಿ ವಿದ್ಯಾರ್ಥಿಯೊಬ್ಬ ಸಾವನ್ನಪ್ಪಿದ ಘಟನೆಗೆ ಸಂಬಂಧಿಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ವತಿಯಿಂದ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಕಳೆದ ಕೆಲ ತಿಂಗಳಿಂದ ಬಳ್ಳಾರಿ ಜಿಲ್ಲೆಯಲ್ಲಿ ಶಾಂತ ವಾತಾವರಣ ಕಣ್ಮರೆಯಾಗುತ್ತಿದ್ದು, ಯುವಕರಲ್ಲಿ ಡ್ರಗ್ಸ್ ಹಾಗೂ ಗಾಂಜಾ ಬಳಕೆ ಹೆಚ್ಚುತ್ತಿರುವುದು ಆತಂಕಕಾರಿ ಎಂದು ಎಬಿವಿಪಿ ಆರೋಪಿಸಿದೆ. ಇತ್ತೀಚೆಗೆ ಗುರುಕುಲ ಶಾಲೆಯ ವಸತಿ ನಿಲಯದಲ್ಲಿ ಸಹಪಾಠಿಯೊಬ್ಬನು ವಿದ್ಯಾರ್ಥಿಗಳ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ ಪರಿಣಾಮ ಏಳು ವಿದ್ಯಾರ್ಥಿಗಳು ಗಾಯಗೊಂಡಿದ್ದು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಈ ಘಟನೆಯಲ್ಲಿ ಒಬ್ಬ ವಿದ್ಯಾರ್ಥಿ ಸಾವನ್ನಪ್ಪಿರುವುದು ಅತ್ಯಂತ ದುಃಖಕರ ಸಂಗತಿ ಎಂದು ತಿಳಿಸಿದೆ.

ವಸತಿ ನಿಲಯದಲ್ಲಿ ನಿಲಯಪಾಲಕರು ಹಾಗೂ ಭದ್ರತಾ ಸಿಬ್ಬಂದಿ ಇಲ್ಲದಿರುವುದು ದೊಡ್ಡ ನಿರ್ಲಕ್ಷ್ಯವಾಗಿದೆ. ವಿದ್ಯಾರ್ಥಿಗಳ ಸುರಕ್ಷತೆ ಕಡೆಗಣಿಸಿ ವಸತಿ ನಿಲಯವನ್ನು ನಡೆಸಿರುವ ಶಾಲೆಯ ಆಡಳಿತ ಮಂಡಳಿಯ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಎಬಿವಿಪಿ ಒತ್ತಾಯಿಸಿದೆ.

ಈ ಕುರಿತು ನಗರದ ಸರಳಾದೇವಿ ಕಾಲೇಜಿನಿಂದ ರಾಯಲ್ ಸರ್ಕಲ್ ವರೆಗೆ ವಿದ್ಯಾರ್ಥಿಗಳು ಪ್ರತಿಭಟನಾ ಮೆರವಣಿಗೆ ನಡೆಸಿ ಕೆಲಕಾಲ ಧರಣಿ ನಡೆಸಿದರು. ಬಳಿಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಪತ್ರ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸರಳಾದೇವಿ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಗ್ರಾಮಸ್ಥರಿಂದ ಪ್ರತಿಭಟನೆ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಗಣಿಬಾಧಿತ ಪರಿಸರ ಮತ್ತು ಜನ ಬದುಕಿನ ಪುನಶ್ಚೇತನ ಹೋರಾಟ ಸಮಿತಿ ನೇತೃತ್ವದಲ್ಲಿ ಹರಗಿನಡೋಣಿ ಗ್ರಾಮದ ನಿವಾಸಿಗಳು ಸೋಮವಾರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬಳ್ಳಾರಿಯಲ್ಲಿ ಪ್ರತಿಭಟನೆ ನಡೆಸಿದರು.

ನಗರದ ನಾರಾಯಣರಾವ್ ಪಾರ್ಕ್‌ನಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ವಿವಿಧ ರಸ್ತೆಗಳನ್ನು ಹಾದು ಸರ್ಕಲ್ ಮುಖಾಂತರ ಜಿಲ್ಲಾಧಿಕಾರಿ ಕಚೇರಿ

ಮುಂಭಾಗಕ್ಕೆ ತಲುಪಿತು. ಬಳಿಕ ಅಲ್ಲಿ ಪ್ರತಿಭಟನಾಕಾರರು ಧರಣಿ ನಡೆಸಿ ಜಿಲ್ಲಾಡಳಿತದ ಗಮನ ಸೆಳೆಯಲು ಪ್ರಯತ್ನಿಸಿದರು.

ಅಕ್ರಮ ಗಣಿಗಾರಿಕೆಯಿಂದ ಪರಿಸರ ಹಾಗೂ ಜನರ ಜೀವನ ಹಾನಿಗೊಂಡಿದ್ದು, ಗಣಿಬಾಧಿತ ಪ್ರದೇಶಗಳ ಅಭಿವೃದ್ಧಿಗಾಗಿ ರಚಿಸಲಾದ ಕೆ–ಎಂಇಆರ್‌ಸಿ ನಿಧಿಯನ್ನು ಬಳಸಿಕೊಂಡು ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ವಿಶೇಷವಾಗಿ ಹರಗಿನಡೋಣಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುವುದರಿಂದ ಕೆಎಂಇಆರ್‌ಸಿ ನಿಧಿಯಿಂದ ಕುಡಿಯುವ ನೀರಿಗಾಗಿ ಕೆರೆ ನಿರ್ಮಾಣ ಮಾಡಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ವಸತಿ ಇಲ್ಲದವರಿಗೆ ಜಾಗ ನೀಡಿ ಮನೆ ನಿರ್ಮಾಣ ಮಾಡಿಸಬೇಕು, ಸರ್ಕಾರಿ ಶಾಲೆಯನ್ನು ಉನ್ನತೀಕರಣ ಮಾಡಬೇಕು, ಒಳಚರಂಡಿ ವ್ಯವಸ್ಥೆ ಹಾಗೂ ಸಾರ್ವಜನಿಕ ಶೌಚಾಲಯ ನಿರ್ಮಿಸಬೇಕು ಎಂದು ಆಗ್ರಹಿಸಿದರು. ಮಹಿಳೆಯರು ಹಾಗೂ ಯುವಕರಿಗೆ ಕೌಶಲ್ಯಾಧಾರಿತ ತರಬೇತಿ ನೀಡಿ ಉದ್ಯೋಗಾವಕಾಶ ಕಲ್ಪಿಸಬೇಕು ಹಾಗೂ ಗಣಿಗಾರಿಕೆಯಿಂದ ಹಾನಿಗೊಂಡ ಪರಿಸರ ಪುನಶ್ಚೇತನಕ್ಕೆ ಅರಣ್ಯಾಭಿವೃದ್ಧಿ ಯೋಜನೆ ಜಾರಿಗೆ ತರಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

# ಕ್ಯಾನ್ಸರ್ ಪ್ರಾರಂಭದಲ್ಲೇ ಗುಣಪಡಿಸಿಕೊಳ್ಳಿ: ನೀರಣಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಇತ್ತೀಚೆಗೆ ಮಹಿಳೆಯರು, ಮಕ್ಕಳು ಸೇರಿ ಎಲ್ಲ ವಯಸ್ಕರಲ್ಲೂ ಕ್ಯಾನ್ಸರ್ ಕಾಯಿಲೆಗಳು ಕಾಣಿಸಿಕೊಳ್ಳುತ್ತಿದ್ದು, ಪ್ರಾರಂಭದಲ್ಲೇ ಪತ್ತೆ ಹಚ್ಚಿದರೆ ಖಂಡಿತ ಗುಣಪಡಿಸಬಹುದು.

ಚಿಕಿತ್ಸೆಗಾಗಿ ಬೆಂಗಳೂರು, ಹೈದ್ರಾಬಾದ್ ಸೇರಿದಂತೆ ನಾನಾ ಕಡೆ ತೆರಳಬೇಕಾಗಿದ್ದು, ಬಳ್ಳಾರಿಯಲ್ಲಿ ನಮ್ಮ ಹೈದ್ರಾಬಾದ್ ಮೂಲದ ಒಮೆಗಾ ಕ್ಯಾನ್ಸರ್ ಆಸ್ಪತ್ರೆಯನ್ನು ಅತಿ ಶೀಘ್ರದಲ್ಲೇ ಪ್ರಾರಂಭಿಸಲಾಗುವುದು, ಈ ಕುರಿತು ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿವೆ ಎಂದು ಹೈದ್ರಾಬಾದ್ ಮೂಲದ ಒಮೆಗಾ ಆಸ್ಪತ್ರೆ ಕ್ಯಾನ್ಸರ್ ತಜ್ಞ ಡಾ.ಎಸ್. ಎಸ್. ನೀರಣಿ ಅವರು ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಕ್ಯಾನ್ಸರ್ ಕಾಯಿಲೆ, ಬದಲಾದ ಆಹಾರ ಶೈಲಿ ಸೇರಿದಂತೆ ನಾನಾ ಕಾರಣಗಳಿಂದ ಇತ್ತೀಚೆಗೆ ಹೆಚ್ಚು ಕಾಣಿಸಿಕೊಳ್ಳುತ್ತಿದೆ. ಅದರಲ್ಲೂ ಮಹಿಳೆಯರಲ್ಲಿ ಸ್ತನ, ಗರ್ಭ ಕ್ಯಾನ್ಸರ್ ಪ್ರಕರಣಗಳು ಹೆಚ್ಚು ಕಾಣಿಸಿಕೊಳ್ಳುತ್ತಿವೆ. ಇದನ್ನು ಪ್ರಾರಂಭದಲ್ಲೇ ಪತ್ತೆ ಹೆಚ್ಚಿದರೆ ಖಂಡಿತ ಗುಣಪಡಿಸಬಹುದು. ನಮ್ಮ ಆಸ್ಪತ್ರೆಯಲ್ಲಿ ಯಶಸ್ವಿನಿ, ಅವಿಷ್ಮಾನ ಭಾರತ ಸೇರಿದಂತೆ ನಾನಾ ಸೌಲಭ್ಯಗಳನ್ನು ಒಳಗೊಂಡಿದೆ. ಬಾಯಿ ಕ್ಯಾನ್ಸರ್, ಹೊಟ್ಟೆ, ಸ್ತನ, ಗರ್ಭ, ಶ್ವಾಸಕೋಶ ಕ್ಯಾನ್ಸರ್ ಕಾಯಿಲೆಗಳು ಜನರನ್ನು ಹೆಚ್ಚು ಕಾಡುತ್ತಿದೆ. ಕೆಲವರಿಗೆ ಬೇಗ ಕಾಣಿಸಬಹುದು, ಕೆಲವರಿಗೆ ತಡವಾಗಿ ಕಾಣಿಸಬಹುದು.

ಇತ್ತೀಚೆಗೆ ತಂತ್ರಜ್ಞಾನ ಸಾಕಷ್ಟು ಮುಂದುವರೆದಿದ್ದು, ಪ್ರಾರಂಭದಲ್ಲೇ ಪತ್ತೆ ಹಚ್ಚಿದರೆ ಖಂಡಿತ ಗುಣಪಡಿಸಬಹುದು, ಯಾವುದೇ ಭಯ ಪಡುವ ಅಗತ್ಯವಿಲ್ಲ. ಕ್ಯಾನ್ಸರ್ ಚಿಕಿತ್ಸೆಯಲ್ಲಿ ಸರ್ಜರಿ, ಕಿಮೋ, ರೇಡಿಯೇಷನ್ ಮೂರು ವಿಧಗಳಿದ್ದು, ನಮ್ಮ ಒಮೆಗಾ ಆಸ್ಪತ್ರೆಯಲ್ಲಿ ಎಲ್ಲ ರೀತಿಯ ಸುಸಜ್ಜಿತ ವ್ಯವಸ್ಥೆಯುಳ್ಳ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ. ತೆಲಂಗಾಣ, ಆಂಧ್ರಪ್ರದೇಶ, ಗುಜರಾತ್, ಹರಿಯಾಣ, ಉತ್ತರ ಪ್ರದೇಶ, ಜಾರ್ಖಂಡ್, ಪಂಜಾಬ್, ಮಧ್ಯಪ್ರದೇಶ, ಛತ್ತೀಸ್ ಘಡ ಸೇರಿದಂತೆ ನಾನಾ ಕಡೆ ಒಟ್ಟು 20 ಆಸ್ಪತ್ರೆಗಳನ್ನು ನಮ್ಮ ಒಮೆಗಾ ಸಂಸ್ಥೆ ಹೊಂದಿದೆ. ಸದ್ಯ ಬಳ್ಳಾರಿಯಲ್ಲಿ 30 ಬೆಡ್ ಆಸ್ಪತ್ರೆ ನಿರ್ಮಿಸಲಾಗುವುದು, ನಂತರ ಅದನ್ನು ಹೆಚ್ಚಿಸಲಾಗುವುದು. ಬಳ್ಳಾರಿಯ ಜನರು ಇದರ ಸೌಲಭ್ಯಗಳನ್ನು ಪಡೆಯಬಹುದು ಎಂದರು.

# ಸಮಾಜದ ಅಂಕು ಡೊಂಕುಗಳನ್ನು ತಿದ್ದುವಲ್ಲಿ ನಾಟಕಗಳಿಂದ ಸಾದ್ಯ



• ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ

ಸಮಾಜದ ಅಂಕು ಡೊಂಕುಗಳನ್ನು ತಿದ್ದುವಲ್ಲಿ ನಾಟಕಗಳಿಂದ ಮಾತ್ರ ಸಾದ್ಯ ಎಂದು ತಾಲುಕಾ ವಿಶ್ವಕರ್ಮ ಸಮಾಜದ ಅದ್ಯಕ್ಷ ಶಂಕ್ರಪ್ಪ ಬಡಿಗೇರ ಅವರು ತುಮ್ಮರಗುದ್ದಿ ಗ್ರಾಮದಲ್ಲಿ ಜಾತ್ರೆಯ ಅಂಗವಾಗಿ ಜರುಗಿದ ಗರ್ಜಿಸಿದ ಹುಲಿ ಎಂಬ ಸಾಮಾಜಿಕ ನಾಟಕದ ಅದ್ಯಕ್ಷತೆ ವಹಿಸಿ ಮಾತನಾಡಿದರು.ಕಲೆ ಉಳಿವಿಗಾಗಿ ಸಹಕಾರ ನಿಡಿದಾಗ ಇಂತಹ ಕಲೆಗಳು ಜೀವಂತವಾಗಿ ಉಳಿಯಲು ಸಾದ್ಯವಾಗುತ್ತದೆ ಎಂದು ತಾಲೂಕು ಪಂಚಾಯತಿ ಮಾಜಿ ಸದಸ್ಯ ಶರಣಪ್ಪ ಈಳಗೇರ ಅವರು ಕಾರ್ಯಕ್ರಮಕ್ಕೆ ಚಾಲನೆ ನಿಡಿ ಮಾತನಾಡಿದರು.ಮುಖಂಡರಾದ ಶೇಷಗೀರಿರಾವ್ ಕುಲಕರ್ಣಿ,ಸುರೇಶಗೌಡ ಪಾಟೀಲ್, ಚೆಂದಲಿಂಗಪ್ಪ ಹಿರೇಮನಿ,ದುರಗಪ್ಪ ನಡುಲಮನಿ,ದೇವಪ್ಪ ಪರಂಗಿ ಕಳಕನಗೌಡ ಪಾಟೀಲ್ ಹಾಗು ಗ್ರಾಮದ ಹಿರಿಯರು ಭಾಗವಹಿಸಿದ್ದರು.

# ಚೆಕ್ ಡ್ಯಾಂ ಕಾಮಗಾರಿ ತರಾತುರಿ ನಿರ್ಮಾಣ ಕಳಪೆ ಗುಣಮಟ್ಟದಿಂದ ಕೂಡಿವೆ : ಮಲ್ಲೇಶ್



ಮಲ್ಲಮ್ಮ ನುಡಿ ವಾರ್ತೆ ಸಿರವಾರ

ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಣ್ಣನೀರಾವರಿ ಮತ್ತು ಅಂತರ್ಜಾಲ ಅಭಿವೃದ್ಧಿ ಇಲಾಖೆಯಲ್ಲಿ ಈಗಾಗಲೇ 2025-26 ನೇ ಸಾಲಿನ ಪ್ರಸ್ತುತ ವರ್ಷದಲ್ಲಿ ಕೈಗೊಂಡಿರುವ ಕಾಮಗಾರಿಗಳು ಅಂದಾಜು ಪತ್ರಿಕೆಯ ಪ್ರಕಾರ ಕಾಮಗಾರಿ ನಿರ್ವಹಿಸದೆ ಕಳಪೆ ಗುಣಮಟ್ಟದ ಹಾಗೂ ಅವೈಜ್ಞಾನಿಕವಾಗಿ ಕಾಮಗಾರಿ ನಿರ್ವಹಣೆ ಮಾಡುತ್ತಿದ್ದಾರೆ. ಇದಕ್ಕೆ ಸಣ್ಣ ನೀರಾವರಿ ಇಲಾಖೆಯ ಉಪ ವಿಭಾಗ ರಾಯಚೂರು ಎಇಇ ಲೋಕೇಶ್ ಹಾಗೂ ಸಂಬಂಧಿಸಿದ ಜೆಇ ಉಪೇಂದ್ರ, ವಿಜಯ್ ಕುಮಾರ್ ಸುರೇಶ್, ಇವರುಗಳು ಗುಣಮಟ್ಟದ ಕಾಮಗಾರಿ ಮಾಡುವಲ್ಲಿ ವಿಫಲರಾಗಿದ್ದಾರೆ. ಸಮಗ್ರ ತನಿಖೆಗೆ ಒಳಪಡಿಸಬೇಕೆಂದು ಬಿಲ್ ತಡೆಹಿಡಿಬೇಕು ಅಧಿಕಾರಿಗಳನ್ನು ಸೇವೆಯಿಂದ ವಜಗೊಳಿಸಬೇಕು. ಎಂದು ಮಲ್ಲೇಶ್ ವಕೀಲರು ಪತ್ರಿಕೆಗೆ ತಿಳಿಸಿದರು.

ಸಿರವಾರ ತಾಲೂಕಿನ ಮಲ್ಲಟ, ಚಿಂಚರಕಿ, ಹೀರಾ, ಕಲ್ಲಂಗೇರ, ಪಾತಾಪುರ, ಕುರುಕುಂದ, ನವಲಕಲ್, ಮುರ್ಕಿಗುಡ್ಡ, ಮರಾಠ, ಲಕ್ಕಮ್ಮದಿನ್ನಿ, ಹುಣಿಚೇಡ, ಅತನೂರು, ಗ್ರಾಮಗಳಲ್ಲಿ ಈಗಾಗಲೇ ಸಣ್ಣ ನೀರಾವರಿ ಮತ್ತು ಅಂತರ್ಜಾಲ ಅಭಿವೃದ್ಧಿ ಇಲಾಖೆ ವತಿಯಿಂದ ಈ ಭಾಗದಲ್ಲಿ ಅಂತರ್ಜಾಲ ಮಟ್ಟವನ್ನು ಹೆಚ್ಚಿಸಲು ಸರಕಾರ ಚೆಕ್ ಡ್ಯಾಂ, ಬ್ರಿಜ್ ಕಮ್ ಬ್ಯಾರೇಜ್, ನಿರ್ಮಾಣ ಮಾಡುವುದರಿಂದ ನೀರು ಸಂಗ್ರಹಣೆ ಜೊತೆಗೆ ಭೂಮಿಯಲ್ಲಿನ ತೇವಾಂಶ ಹೆಚ್ಚಿಸುವ ಉದ್ದೇಶ ಹಾಗೂ ರೈತರ ಕೊಳವೆಬಾವಿಗಳಿಗೆ ಅಂತರ್ಜಲ ಹೆಚ್ಚಿಸುವ ಉದ್ದೇಶದಿಂದ ಸರಕಾರ ಯೋಜನೆಗಳನ್ನ ಕೈಗೊಂಡಿದೆ. ಆದರೆ ಇಲ್ಲಿಯ ಅಧಿಕಾರಿಗಳು ಕಾಮಗಾರಿಯ ಪ್ರಸ್ತಾವನೆಯಲ್ಲಿ ರೈತರಿಗೆ ಅನುಕೂಲತೆ ಇರುವ ಪ್ರದೇಶಗಳಲ್ಲಿ ಚೆಕ್ ಡ್ಯಾಮ್ ನಿರ್ಮಾಣ ಮಾಡಬೇಕಾಗಿತ್ತು. ಆದರೆ ಅಧಿಕಾರಿಗಳು ಸಣ್ಣ ಪುಟ್ಟ ನಾಲಗಳಿಗೆ ಬೃಹತ್ ಪ್ರಮಾಣದ ಒಂದು ಕೋಟಿ ಅಧಿಕ ಮೊತ್ತದ ಹಣವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಜೊತೆಗೆ ಕಾಮಗಾರಿಯ ನಿಗದಿತ ಸ್ಥಳದಲ್ಲಿ ನಿರ್ಮಾಣ ಮಾಡುವುದರ ಬಗ್ಗೆ ಯಾವುದೇ ಸೂಚನಾ ಫಲಕಗಳನ್ನು ಹಾಕದೆ ಕಾಮಗಾರಿ ಪೂರ್ಣಗೊಳಿಸಿದ್ದೇವೆ ಎಂದು ಬಿಲ್ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಕಾಮಗಾರಿ ನಡೆದ ಸ್ಥಳದಲ್ಲಿ ಈಗಾಗಲೇ ಕಾಮಗಾರಿಗಳು ಬಿರುಕು ಬಿಟ್ಟು ನಿಂತಿವೆ. ಇಂತಹ ಅವೈಜ್ಞಾನಿಕ ಕಾಮಗಾರಿಗಳು ಮಾಡುವುದರಿಂದ ರೈತರಿಗೆ ಅನಾನುಕೂಲವಾಗುತ್ತದೆ. ಹಾಗಾಗಿ ಎಇಇ ಉಪವಿಭಾಗ ಅಧಿಕಾರಿ ಲೋಕೇಶ್ ಹಾಗೂ ಅವರ ಜೆಇ ಸಹಾಯಕ ಸಿಬ್ಬಂದಿಗಳ ಸೇವೆಯಿಂದ ವಜಗೊಳಿಸಬೇಕು. ರಾಯಚೂರು ಉಪ ವಿಭಾಗ ಇಲಾಖೆಯಲ್ಲಿ ಕಾಮಗಾರಿಗಳ ಬಗ್ಗೆ ತನಿಖೆ ಮಾಡುವಂತೆ ದೂರು ನೀಡಿದರು ಯಾವುದೇ ಪ್ರಯೋಜನ ಇಲ್ಲ ಮೇಲಾಧಿಕಾರಿಗಳ ಗಮನಕ್ಕೂ ತಂದರು ಅಧಿಕಾರಿಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳದೆ ಇರುವುದು ಸಾರ್ವಜನಿಕವಲಯದಲ್ಲಿ ಇಂತಹ ಅಧಿಕಾರಿಗಳನ್ನು ಸಾರ್ವಜನಿಕ ಸೇವೆಯಲ್ಲಿ ಇರುವುದು ದುರಂತದ ಸಂಗತಿ. ಸಾರ್ವಜನಿಕರು ಭೇಟಿ ನೀಡಿದ ಸಂದರ್ಭದಲ್ಲಿ ಯಾವುದೇ ಒಬ್ಬ ಅಧಿಕಾರಿಗೂ ದೂರವಾಣಿ ಮೂಲಕ ಸಂಪರ್ಕಿಸಿದರು ಸಂಪರ್ಕಕ್ಕೆ ಸಿಗುತ್ತಿಲ್ಲ.

ಹಾಗೂ ಕಚೇರಿಗೆ ಭೇಟಿ ನೀಡಿದರು ಅಧಿಕಾರಿಗಳು ಮಾತ್ರ ಡೋಂಟ್ ಕೇರ್ ಎನ್ನುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಇಂತಹ ಬೇಜವಾಬ್ದಾರಿ, ಕರ್ತವ್ಯಲೋಪವೇ ಸಿಗುತ್ತಿರುವ ಅಧಿಕಾರಿಗಳನ್ನು ಕೂಡಲೇ ಅಮಾನತ್ತುಗೊಳಿಸಬೇಕೆಂದು. ಕಾಮಗಾರಿಗಳ ಸಂಪೂರ್ಣ ತನಿಖೆಗಳ ಪಡಿಸಿ ಬಿಲ್ ತಡೆಹಿಡಿಯಬೇಕು ಎಂದು ಮಲ್ಲೇಶ್ ವಕೀಲರು ಒತ್ತಾಯಿಸಿದರು.

# ಮಾನಸಿಕ ಆರೋಗ್ಯಕ್ಕಾಗಿ ಟೆಲಿಮನಸ್ ಸಹಾಯವಾಣಿ ಸಂಪರ್ಕಿಸಿ: ರಮೇಶ್ ಬಾಬು

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಮಾನಸಿಕ ಆರೋಗ್ಯ ಸಮಸ್ಯೆ, ಒತ್ತಡ ಇದ್ದಲ್ಲಿ ನೆರವು ಪಡೆಯಲು ಟೆಲಿಮನಸ್ ಸಹಾಯವಾಣಿ 14416 ಗೆ ಕರೆಮಾಡಿ ಉಚಿತ ಆಪ್ತಸಮಾಲೋಚನೆ ಪಡೆಯಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಕಾರ್ಯಕ್ರಮ ವಿಭಾಗದ ವತಿಯಿಂದ ನಗರದ ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯದಲ್ಲಿ ವೈದ್ಯಾಧಿಕಾರಿಗಳಿಗೆ, ಕ್ಷೇತ್ರ ಮಟ್ಟದ ಸಿಬ್ಬಂದಿಗೆ ಮಾನಸಿಕ ಆರೋಗ್ಯದ ನಿರ್ವಹಣೆ ಕುರಿತು ಸೋಮವಾರ ಏರ್ಪಡಿಸಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬ ವ್ಯಕ್ತಿಗೂ ಜೀವನದ ಯಾವುದಾದರೂ ಸನ್ನಿವೇಶಗಳಲ್ಲಿ ಮಾನಸಿಕ ಆರೋಗ್ಯ ಸಮಸ್ಯೆ ಕಂಡುಬರುವ ಸಾಧ್ಯತೆ ಇರುತ್ತದೆ. ಅಂತಹ ಸಂದರ್ಭದಲ್ಲಿ ಇನ್ನೊಬ್ಬರೊಂದಿಗೆ ವಿಷಯ ಹಂಚಿಕೊಳ್ಳುವ ಅಥವಾ ಸಮಸ್ಯೆಯ ತೀವ್ರತೆ ಹೆಚ್ಚಾದಾಗ ಮಾನಸಿಕ ತಜ್ಞರೊಂದಿಗೆ ತಪ್ಪದೇ ಸಮಾಲೋಚಿಸಬೇಕು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸರ್ಕಾರವು ರಾಷ್ಟ್ರೀಯ ಟೆಲಿ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಟೆಲಿಮೆನಸ್ ಎಂಬ 14416 ಉಚಿತ ಸಹಾಯವಾಣಿ ಕಾರ್ಯನಿರ್ವಹಿಸುತ್ತಿದ್ದು, ಕರೆ ಮಾಡಿ ಸೂಕ್ತ ನೆರವು ಪಡೆದುಕೊಳ್ಳಬಹುದು ಎಂದರು.

ಕರೆ ಮಾಡಿದವರ ವಿವರ ಗೌಪ್ಯವಾಗಿ ಇಡಲಾಗುವುದು. ಧ್ವನಿಮುದ್ರಣ ಆಗುವುದಿಲ್ಲ. ಪರೀಕ್ಷಾ ಒತ್ತಡಕೊಳ್ಳಗಾದವರು, ಕೌಟುಂಬಿಕ ಸಮಸ್ಯೆಗೊಳಗಾದವರು, ಆತ್ಮಹತ್ಯೆ ಆಲೋಚನೆ ಮಾಡುವರು, ಮಾದಕ ವಸ್ತು ವ್ಯಸನಿಗಳು, ಸಂಬಂಧಗಳ ಸಮಸ್ಯೆಯಲ್ಲಿ ಸಿಲುಕಿರುವವರು, ಜ್ಞಾಪಕ ಶಕ್ತಿ ತೊಂದರೆ ಉಳ್ಳವರು, ಆರ್ಥಿಕ ಒತ್ತಡದಲ್ಲಿ ಇರುವವರು ಅಥವಾ ಇತರೆ ಯಾವುದೇ ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು ಇದ್ದಲ್ಲಿ ಈ ಸಹಾಯವಾಣಿ ಮೂಲಕ ನೆರವು ಪಡೆಯಬಹುದಾಗಿದೆ ಎಂದು ತಿಳಿಸಿದರು.

ಜಿಲ್ಲಾ ಮಾನಸಿಕ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ವಿರೇಂದ್ರ ಕುಮಾರ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಮಾನಸಿಕ ಆರೋಗ್ಯ ಸೇವೆಗಳನ್ನು ನೀಡಲು ಜಿಲ್ಲಾ ಮಟ್ಟದಿಂದ ಮನೋರೋಗ ತಜ್ಞ ಡಾ.ಕಿಶೋರ್ ಅವರ ನೇತೃತ್ವದಲ್ಲಿ ಪ್ರತಿ ಮೊದಲ ಮಂಗಳವಾರ ಸಿರುಗುಪ್ಪ, ಎರಡನೇ ಮಂಗಳವಾರ ಸಂಡೂರು, ಮೂರನೇ ಮಂಗಳವಾರ ಕಂಪ್ಲಿ, ನಾಲ್ಕನೇ ಮಂಗಳವಾರ ಕುರುಗೋಡು ಹಾಗೂ ಪ್ರತಿ ತಿಂಗಳು 16ನೇ ತಾರೀಖು ಮೋಕ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ಆರೋಗ್ಯ ಸೇವೆ ನೀಡಲಾಗುತ್ತಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಮನೋರೋಗ ತಜ್ಞ ಡಾ.ಕಿಶೋರ್ ಅವರು ಮಾನಸಿಕ ಕಾಯಿಲೆಗಳಾದ ಆತಂಕ, ಮಾನಸಿಕ ಖಿನ್ನತೆ, ಗಾಬರಿ, ಮನೋರೋಗ, ಚಿತ್ತವಿಕಲತೆ, ಮೇನಿಯಾ ಕಾಯಿಲೆ ಲಕ್ಷಣಗಳು ಮತ್ತು ಚಿಕಿತ್ಸೆಯ ಬಗ್ಗೆ ವಿವರವಾಗಿ ಮಾಹಿತಿ ಮೂಲಕ ತರಬೇತಿ ನೀಡಿದರು.

ಈ ಸಂದರ್ಭದಲ್ಲಿ ಪ್ರಭಾರಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಖುರ್ಶಿದ್ ಬೇಗಮ್, ಮನೋ ಶಾಸ್ತ್ರಜ್ಞ ಶರ್ಮಸ್ ವಲಿ, ಮನೋ ಸಾಮಾಜಿಕ ಕಾರ್ಯಕರ್ತ ಶಾಂತಕುಮಾರ್, ಮನೋಶುಶ್ರೂಷಣಾಧಿಕಾರಿ ರಂಜೀತಾ ಸೇರಿದಂತೆ ಇತರೆ ಅಧಿಕಾರಿ-ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



ಕಮಲನಗರ: ತಾಲ್ಲೂಕಿನ ಎನ್‌ಹೆಚ್–50 ರಸ್ತೆಯಲ್ಲಿರುವ ಡಿಗ್ಗಿ ಗ್ರಾಮದ ಬಳಿ ನೂತನವಾಗಿ ನಿರ್ಮಿಸಲಾದ 'ಸಿದ್ಧಾಂತ್ ಎನರ್ಜಿ ಸ್ಟೇಷನ್' (ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್) ರವಿವಾರದಂದು ಅತ್ಯಂತ ಸಡಗರ–ಸಂಭ್ರಮದಿಂದ ಲೋಕಾರ್ಪಣೆಗೊಂಡಿತು.

ಮೊದಲ ಗ್ರಾಹಕರಾಗಿ ಸಂತೋಷ ಬಿರಾದಾರ:ಉದ್ಘಾಟನೆಯ ಈ ಶುಭ ಸಂದರ್ಭದಲ್ಲಿ, ಕಮಲನಗರ ಮುಖಂಡರಾದ ಸಂತೋಷ ಬಿರಾದಾರ ಅವರು ತಮ್ಮ ಬೈಕ್‌ಗೆ ಪೆಟ್ರೋಲ್ ಹಾಕಿಸುವ ಮೂಲಕ ಪೆಟ್ರೋಲ್ ಬಂಕ್‌ನ ಚಾಲನೆಗೆ ಮೊದಲ ಬೋಣಿಯಾಗಿ ಸಾಕ್ಷಿಯಾದರು. ಬಂಕ್ ಸಿಬ್ಬಂದಿಗಳು ಅವರನ್ನು ಆತ್ಮೀಯವಾಗಿ ಸ್ವಾಗತಿಸಿ ಇಂಧನ ತುಂಬಿಸಿದರು.

## ಗ್ಯಾರಂಟಿ ಯೋಜನೆಗಳಿಂದ ಜನರ ಬದುಕಿನಲ್ಲಿ ಬದಲಾವಣೆ: ಆನಂದ ಚವ್ಹಾಣ



ಮಲ್ಲಮ್ಮ ನುಡಿ ವಾರ್ತೆ
ಕಮಲನಗರ

ಪಂಚಗ್ಯಾರಂಟಿಯೋಜನೆಗಳಿಂದ ಜನರಬದುಕಿನಲ್ಲಿಬದಲಾವಣೆಯಾಗಿದ್ದು ಅರ್ಹ ಫಲಾನುಭವಿಗಳಿಂದಉತ್ತಮ ಸ್ಪಂದನೆ ಸಿಗುತ್ತಿದೆ ಎಂದು ಪಂಚ ಗ್ಯಾರಂಟಿಯೋಜನೆಗಳಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಆನಂದ ಚವ್ಹಾಣ ಹೇಳಿದರು.

ಕಮಲನಗರಗ್ರಾಮ ಪಂಚಾಯತಿ ಸಭಾಂಗಣದಲ್ಲಿ ಭಾನುವಾರ ತಾಲೂಕು ಪಂಚಾಯತಿ ಹಾಗೂ ಗ್ಯಾರಂಟಿ ಅನುಷ್ಠಾನ ಸಮಿತಿ ಸಹಯೋಗದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಪಂಚ ಗ್ಯಾರಂಟಿ ಯೋಜನೆಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗ್ಯಾರಂಟಿ ಯೋಜನೆಗಳು ಜನರ ಜೀವನಮಟ್ಟ ಸುಧಾರಣೆಗೆ ಸಹಕಾರಿಯಾಗುತ್ತಿದ್ದು, ರಾಜ್ಯದಲ್ಲಿ ಉತ್ತಮಸ್ಪಂದನೆದೊರೆಯುತ್ತಿರುವುದು ಸಂತೋಷದ ಸಂಗತಿ ಎಂದರು.


ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಹಣಮಂತರಾಯ ಕೌಟಗೆ ಮಾತನಾಡಿ, ಮಹಿಳೆಯರು ಶಿಕ್ಷಣ, ಉದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವುದು ಶ್ಲಾಘನೀಯವಾಗಿದ್ದು, ಧೈರ್ಯ, ಸಹನೆ ಮತ್ತು ಪರಿಶ್ರಮದ ಮೂಲಕ ಸಮಾಜದಲ್ಲಿ ಗೌರವಾನ್ವಿತ ಸ್ಥಾನವನ್ನು ಗಳಿಸುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಉತ್ತಮ ಕಾರ್ಯ ನಿರ್ವಹಿಸಿದ ಸಂಜೀವಿನಿ ತಾಲೂಕು ಮಟ್ಟದ ಅಧ್ಯಕ್ಷರಾದ ಶೋಭಾ ಬೂರೆ, ಮುಖ್ಯ ಪುಸ್ತಕ ಬರಹಗಾರರಾದ ಸಪನಾ ಕಲ್ಲೇಶ, ಕಮಲನಗರ ಅಂಗನವಾಡಿ ಶಿಕ್ಷಕಿಯಾದ ಸವಿತಾ, ಡಿಗ್ಗಿ ಅಂಗನವಾಡಿ ಶಿಕ್ಷಕಿಯಾದ ಸವಿತಾ, ಕಸವಿಲೇವಾರಿ ವಾಹನದ ಚಾಲಕಿಯಾದ ಸಂಗೀತಾ ಅವರಿಗೆ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಸದಸ್ಯರಾದ ಪ್ರವೀಣ ಕದಮ, ಇಸ್ಮಾಯಿಲ್ ಜಫರ್, ರಾಜು, ಸೇರಿದಂತೆ ಅಮರ ಕೋಟೆ, ವಿದ್ಯಾಸಾಗರ, ಆದಿತ್ಯ, ಕವಿತಾ, ಹಾಗೂ ಇತರರು ಹಾಜರಿದ್ದರು.

## ಬ್ರಾಹ್ಮಣ ಸಮುದಾಯವನ್ನು ನಿರ್ಲಕ್ಷಿಸಿದ ಕಾಂಗ್ರೆಸ್ ಸರ್ಕಾರ: ಮೋರಖಂಡಿಕರ್

ಮಲ್ಲಮ್ಮ ನುಡಿ ವಾರ್ತೆ
ಬೀದರ್



ಮಾರ್ಚ್ 09: ಸಮಾನತೆ, ಸರ್ವ ಜನಾಂಗದ ಶಾಂತಿಯ ತೋಟ ಎಂಬುವುದೇ ನಮ್ಮ ಸರ್ಕಾರದ ಧ್ಯೇಯ ಹಾಗೂ ಸಿದ್ಧಾಂತ ಎಂದು ಹೇಳುವ ಸಿಎಂ ಸಿದ್ದರಾಮಯ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ಒಂದು ನಯಾ ಪೈಸ ಅನುದಾನ ಕೊಡದೇ ತಾರತಮ್ಯ ನೀತಿ ತೋರಿಸುತ್ತಿರುವುದು ಅವರ ನುಡಿ ಹಾಗೂ ನಡೆಯಲ್ಲಿ ದ್ವಂದ್ವ ನಿಲುವು ಇರುವುದು ಬಹಿರಂಗವಾಗಿದೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಸರ್ಕಾರದಲ್ಲಿ ರಚನೆಗೊಂಡ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಬ್ರಾಹ್ಮಣರ ಅಭಿವೃದ್ಧಿಗಾಗಿ 25 ಕೋಟಿ ರೂಗಳು ಮಂಡಳಿಯ ಯೋಜನೆಗಳಿಗಾಗಿ ನೀಡಿರುತ್ತಾರೆ, ತದನಂತರ ಕಾಲದಲ್ಲಿ ಬಂದಿರುವ ಯಾವುದೇ ಸರ್ಕಾರ ಇಲ್ಲಿಯ ತನಕ ಅಭಿವೃದ್ಧಿಯ ಮಂಡಳಿಗೆ ಬಜೆಟ್‌ನಲ್ಲಿ ಅನುದಾನ ನೀಡಿದೆ ಇರುವುದು ಬ್ರಾಹ್ಮಣ ಸಮುದಾಯವನ್ನು ಬೇಕೆಂದಲೇ ನಿರ್ಲಕ್ಷಿಸಿದ್ದಾರೆ, ಹಿಂದಿನ ಸಾಲಿನ ಅಧ್ಯಕ್ಷರಾದ ಸಚ್ಚಿದಾನಂದ ಮೂರ್ತಿ ಅವರು 10 ಕೋಟಿ ರೂಗಳ ಅನುದಾನವನ್ನು ಪ್ರತಿವರ್ಷ ಕೊಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದರು. ವಿಪರ್ಯಾಸವೆಂದರೆ ಆ 10 ಕೋಟಿ ರೂಗಳು ಸಿಬ್ಬಂದಿಯ ವೇತನ ಜಾಗದ ಬಾಡಿಗೆ ಕೊಡುವುದಕ್ಕೆ ಸರಿಯಾಗುತ್ತದೆ ಇದರಿಂದ ಈ ಜನಾಂಗದ ಅಭಿವೃದ್ಧಿ ಹೇಗೆ ಸಾಧ್ಯ?

ತಿಂಡಿ ತಿನಿಸು ಮಾರಾಟ ಮಾಡುವ ವಾಹನ ನೀಡುವ ಯೋಜನೆ ಎಲ್ಲಾ ನಿಗಮಕ್ಕೂ, ನೀಡಲು ಸರ್ಕಾರ ಇತ್ತೀಚೆಗೆ ಜಾಹೀರಾತು ಪ್ರಕಟಿಸಿತ್ತು, ಆದರೆ ಅದರಲ್ಲೂ ಸಹ ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ಒಂದೇ ಒಂದು ವಾಹನವು ನೀಡುವ ಕೆಲಸ ಸರ್ಕಾರದಿಂದ ಆಗಿಲ್ಲ, 2024–25 ಸಾಲಿನ ವಿದ್ಯಾರ್ಥಿಗಳಿಗೆ ನೀಡುವ ಸಹಾಯಧನ ಇನ್ನೂ ಸಹ ಯಾವುದೇ ವಿದ್ಯಾರ್ಥಿಗಳಿಗೆ ಸಿಕ್ಕಿಲ್ಲ, ಸ್ವಾವಲಂಬಿ ಜೀವನ ನಡೆಸಲು ಸಾಲ ಸೌಲಭ್ಯ ಯೋಜನೆಗೆ ಅರ್ಜಿ ಕರೆಯಲಾಗಿತ್ತು, ಸಾವಿರಾರು ಜನ ಫಲಾನುಭವಿಗಳು ಮಂಜೂರಾತಿ ಪತ್ರ ಸಿಗುವ ನಿರೀಕ್ಷೆಯಲ್ಲಿ ಕುಳಿತಿದ್ದಾರೆ,

ರಾಜ್ಯದಲ್ಲಿ 21 ವಿಧಾನಸಭಾ ಕ್ಷೇತ್ರದಲ್ಲಿ ನಿರ್ಣಾಯಕ ಪಾತ್ರ ಮತದಾರರಾಗಿರುವ, 35ರಿಂದ 40ಲಕ್ಷ ಜನಸಂಖ್ಯೆ ಇರುವ ಬ್ರಾಹ್ಮಣ ಸಮಾಜವನ್ನು ಕಡೆಗೆನಿಸುವ ಕೆಲಸ ಕಾಂಗ್ರೆಸ್ ಸರ್ಕಾರ ಮಾಡುತ್ತಿದ್ದು, ಈ ಕೂಡಲೇ ಕರ್ನಾಟಕ ಸರ್ಕಾರ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಯೋಜನೆಗಳಿಗೆ ಕನಿಷ್ಠ 120 ಕೋಟಿ ರೂಗಳನ್ನು ಅನುದಾನವಾಗಿ ನೀಡಬೇಕಾಗಿ ಕರ್ನಾಟಕದ ಎಲ್ಲಾ ಬ್ರಾಹ್ಮಣ ಸಮುದಾಯದ ಪರವಾಗಿ, ಅಖಿಲ ಕರ್ನಾಟಕ ಬ್ರಾಹ್ಮಣ ರಾಜಕೀಯ ವೇದಿಕೆ ಮತ್ತು ರಾಜ್ಯ ಸಂಘಟನಾ ಮಾಜಿ ಕಾರ್ಯದರ್ಶಿ ಹಾಗೂ ಮಾಜಿ ಬೀದರ್ ಜಿಲ್ಲಾ ಅಧ್ಯಕ್ಷರಾದ ವೆಂಕಟೇಶ್ ಮೋರೆಖಂಡಿಕರ್ ಸರ್ಕಾರಕ್ಕೆ ಪತ್ರಿಕಾ ಹೇಳಿಕೆ ಮೂಲಕ ಆಗ್ರಹಿಸಿದ್ದಾರೆ.

# ಕಡೆಗಣನೆಯ ಕಹಿ ನಡುವೆ ವಿಶ್ವವಿಜೇತನಾಗಿ ಉದಯಿಸಿದ ಸಂಜು

"ಪರಮೇಶ ರಾಂಪುರೆ ಕಮಲನಗರ

ಇತ್ತೀಚಿಗೆ ಮುಗಿದ ವಿಶ್ವ ಕಪ್ ಪಂದ್ಯಾವಳಿ ಯಿಂದ ಸಂಜು ಸ್ಯಾಮ್ಸನ್ ಎಂಬ ಪ್ರತಿಭಾ ಶಾಲಿ ಆಟಗಾರ ಜಗತ್ತಿಗೆ ಒಂದು ಪ್ರೇರಣೆ ದಾಯಕ ಸಂದೇಶ ನೀಡುವಂತೆ ಕಡೆಗಣನೆಯ ಕಹಿ ನಡುವೆ ಅದ್ಭುತ ಪ್ರದರ್ಶನ ನೀಡಿ ಭಾರತ ತಂಡಕ್ಕೆ ವಿಶ್ವ ವಿಜೇತನಾಗಿ ಉದಯಿಸಿದ ಸಂಜು ಸ್ಯಾಮ್ಸನ ಬಗ್ಗೆ ನಾವು ಎಲ್ಲರೂ ತಿಳಿದುಕೊಳ್ಳುವಂತೆ ಮಾಡಿದೆ.

ಸಂಜು ಸ್ಯಾಮ್ಸನ್ ಎಂಬ ಆಟಗಾರ 2026ರ ಟಿ20 ವಿಶ್ವಕಪ್‌ನಲ್ಲಿ ಮೊದಲ 4 ನಾಲ್ಕು ಪಂದ್ಯ ಆಡಲು ಅವಕಾಶ ಸಿಗದೇ ನಿರಾಶೆಯಲ್ಲಿ ಇದ್ದರು, ಅವರ ಛಲ ಮತ್ತು ಧೈರ್ಯದ ಇದ್ದರು ಶಾಂತವಾಗಿದೆ. ವರ್ಷಗಳ ಕಾಲ ಅವರು ಬದಲಿ ಆಟಗಾರ ಎಂದೇ ಗುರುತಿಸಲ್ಪಟ್ಟಿದ್ದರು. ಅಸಾಧಾರಣ ಪ್ರತಿಭೆ ಇದ್ದರೂ, ಅವಕಾಶಗಳ ಕೊರತೆ ಮತ್ತು ಜನರ ನಿರೀಕ್ಷೆಯ ಭಾರ ಅವರ ಮೇಲೆ ಸದಾ ಇರುತ್ತಿತ್ತು.

**ನಂತರ ನಡೆದಿದೆ ಒಂದು ಮಹಾ ಪವಾಡ**
**ಭಾರತದ ಪರ 5 ಪಂದ್ಯಗಳನ್ನು ಆಡಿ,**
**ಪಂದ್ಯಾವಳಿಯ ಶ್ರೇಷ್ಠ ಆಟಗಾರ**
**ಐತಿಹಾಸಿಕ ಪ್ರದರ್ಶನ**

ವಿಶ್ವಕಪ್ ಆರಂಭವಾದಾಗ ಭಾರತ ಕಂಡಿದ್ದು ಒಬ್ಬ ಹೊಸ ಸಂಜು ಸ್ಯಾಮ್ಸನ್ ಅವರನ್ನು. ಶಾಂತ ಸ್ವಭಾವ, ಕರಾರುವಾಕ್ ಹೊಡೆತಗಳು ಮತ್ತು ಭಯವಿಲ್ಲದ ಬ್ಯಾಟಿಂಗ್ ಅವರ ಶಕ್ತಿಯಾಗಿತ್ತು. ಮುಂದೆ ಸಂಜು ಅವರ ಕೈಗೆ ಬ್ಯಾಟ್ ಸಿಕ್ಕ ನಂತರ ಆನೆ ಹೆಜ್ಜೆಯಂತೆ ನಡೆದಿದೆ ದಾರಿ ಎನ್ನುವ ಹಾಗೆ ಅವರ ಬ್ಯಾಟನಿಂದ ಕೇವಲ ರನ್ ಮಾತ್ರವಲ್ಲ




ಅವರು ಅನುಭವಿಸಿದ ನೋವಿನ ಕ್ಷಣಕ್ಕೆ ತಲೆ ಮೇಲೆ ಹೊಡೆದು ಹಾಗೆ ಅವರು ಆಟ ಆಡಿದರು. ಮೊದಲು ಪಂದ್ಯ ನಮಿಬಿಯಾ ತಂಡ ವಿರುದ್ಧ 8(22), ಜಿಮ್ಬಾಂಬೆ ತಂಡ ವಿರುದ್ಧ 24(15), ವೆಸ್ಟ್ ಇಂಡಿಸ್ ವಿರುದ್ಧ ಮಾಡು ಇಲ್ಲವೇ ಮಾಡಿ ಪಂದ್ಯದಲ್ಲಿ

ಅಜೇಯ 97 ರನ್ ಬಾರಿಸುವ ಮೂಲಕ ತಾನೊಬ್ಬ ಶ್ರೇಷ್ಠ ಫಿನಿಶರ್ ಎಂದು ಸಾಬೀತುಪಡಿಸಿದರು. ಸೆಮಿಫೈನಲ್ ಪರಾಕ್ರಮ: ಇಂಗ್ಲೆಂಡ್ ವಿರುದ್ಧ ಕೇವಲ 42 ಎಸೆತಗಳಲ್ಲಿ 89 ರನ್ ಸಿಡಿಸಿ ತಂಡವನ್ನು ಫೈನಲ್‌ಗೆ ಮುನ್ನಡೆಸಿದರು.

**ಅಹಮದಾಬಾದ್ ಫೈನಲ್:** ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನ್ಯೂಜಿಲೆಂಡ್ ವಿರುದ್ಧ ಮತ್ತೆ 89 ರನ್ ಸಿಡಿಸಿದರು. ಅವರ ಈ ಬ್ಯಾಟ ನಿಂದ 199.37 ಸ್ಟ್ರೈಕ್ ರೇಟನಿಂದ ಬಂದ ಭರ್ಜರಿ 321 ರನ್ ಅವರಿಗೆ 'ಸರಣಿ ಶ್ರೇಷ್ಠ' (Player of the Tournament) ಪ್ರಶಸ್ತಿಯನ್ನು ತಮ್ಮದಾಗಿಸಿತ.

**ಸ್ಫೂರ್ತಿದಾಯಕ ವ್ಯಕ್ತಿತ್ವ**

ಸಂಜು ಕೇವಲ 321 ರನ್ ಅಥವಾ 24 ಸಿಕ್ಸರ್‌ಗಳನ್ನು ಬಾರಿಸಿದ್ದಕ್ಕಾಗಿ ಸ್ಫೂರ್ತಿಯಲ್ಲ; ಅವರ ವಿನಮ್ರತೆಗಾಗಿ ಅವರು ಎಲ್ಲರಿಗೂ ಮಾದರಿ. ಸೆಮಿಫೈನಲ್‌ನಲ್ಲಿ ತಮಗೆ ಬಂದ ಪ್ರಶಸ್ತಿಯನ್ನು ಜಸ್ಪ್ರೀತ್ ಬುಮ್ರಾ ಅವರಿಗೆ ಅರ್ಪಿಸುವ ಮೂಲಕ ಅವರು ತಮ್ಮ ದೊಡ್ಡ ಗುಣವನ್ನು ಮೆರೆದರು.

ಗೆಲುವಿನ ನಂತರ ಅವರು ಹೇಳಿದ "ದೇವರ ಯೋಜನೆಗಳೇ ಬೇರೆ ಇರುತ್ತವೆ" ಎಂಬ ಮಾತು ಇಂದು ಕೋಟ್ಯಂತರ ಯುವ ಕ್ರೀಡಾಪಟುಗಳಿಗೆ ಮಂತ್ರವಾಗಿದೆ. ಸಂಜು ಸ್ಯಾಮ್ಸನ್ ಅವರ ಈ ಸಾಧನೆ, "ಸೋಲು ಎಂಬುದು ದೊಡ್ಡ ಗೆಲುವಿನ ಮುನ್ನುಡಿ" ಎಂಬುದನ್ನು ನೆನಪಿಸುತ್ತದೆ.

ಒಟ್ಟಾರೆಯಾಗಿ ನೋಡುವುದ್ದಾರೆ, ನಮ್ಮ ಜೀವನದಲ್ಲಿ ಅನೇಕ ನಿರಾಶೆ, ಅವಮಾನ, ಹಿನ್ನಡೆ ಬಂದೆ ಬರುತ್ತವೆ ಅಂತ ಸಂದರ್ಭದಲ್ಲಿ ದೃತಿಗೆಡದೆ ಛಲ ಮತ್ತು ಧೈರ್ಯದ ಮುನ್ನಡೆಯಬೇಕು. ಸಣ್ಣ ಸೊಲು, ಅವಮಾನ ದಿಂದ ಕೆಟ್ಟ ನಿರ್ಧಾರ ತೆಗೆದುಕೊಳ್ಳುವಂತ ವ್ಯಕ್ತಿಗಳೆ ಸಂಜು ಸ್ಯಾಮ್ಸನ್ ಅವರ ಈ ವಿಶ್ವ ಕಪ ಆಟವನ್ನು ಆದರ್ಶವಾಗಿ ಇಟ್ಟಿಕೊಳ್ಳಬೇಕು. ಸಂಜು ಜೊತೆಗೆ ತಂಡ ಎಲ್ಲಾ ಆಟಗರು ಉತ್ತಮ ಪ್ರದರ್ಶನ ನೀಡಿ ಭಾರತ ತಂಡವನ್ನು ಟಿ–20 ವಿಶ್ವ ಕಪನಲ್ಲಿ ಅತಿ ಹೆಚ್ಚು ಬಾರಿ (3 ಸಲ) ಚಾಂಪಿಯನ ಆಗುವಂತೆ ಮಾಡಿದ್ದರೆ ಅವರಿಗೆಲ್ಲರಿಗೂ ಅಭಿನಂದನೆಗಳು.

## ಮಹಿಳೆ ಸಬಲತೆಯಿಂದ ಕುಟುಂಬ, ಸಮಾಜ ಸಬಲ: ತಿಮ್ಮಾಪೂರ

• ಮಲ್ಲಮ್ಮ ನುಡಿ ವಾರ್ತೆ
ಬಾಗಲಕೋಟೆ



**ಜಿಲ್ಲಾ ಮಟ್ಟದ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಪಡೆದ ಸಂಗಮೇಶ ತೋಳಮಟ್ಟಿ, ನಂದಿನಿ ಲಮಾಣಿ (ಕ್ರೀಡೆ–ಸ್ಕೈಕ್ಲಿಂಗ್) ಅನಘಾ ಪಾಟೀಲ (ಕಲೆ–ಸಂಗೀತ), ಚಿದಾನಂದ ಜವಳಗಿ (ನಾವಿನ್ಯತೆ) ಅವರನ್ನು ಸನ್ಮಾನಿಸಲಾಯಿತು.**

ಮಹಿಳೆಯರು ಸಬಲರಾದಾಗ ಮಾತ್ರ ಕುಟುಂಬ ಮತ್ತು ಸಮಾಜ ಸಹ ಸಬಲವಾಗುತ್ತದೆ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು. ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ರವಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಹಾಗೂ ಸಹಭಾಗಿತ್ವ ಇಲಾಖೆಗಳ ಸಹಯೋಗದಲ್ಲಿ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯಡಿ ಹಮ್ಮಿಕೊಂಡ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆ ಮಾನಸಿಕವಾಗಿ ಕುಗ್ಗದೇ ದೃಢಸಂಕಲ್ಪ ಹೊಂದಿ, ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಮುಂದಾಗಬೇಕು ಎಂದರು. ಮಹಿಳಾ ಸಬಲೀಕರಣಕ್ಕಾಗಿ ಸರಕಾರ ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದೆ. ಗ್ಯಾರಂಟಿ ಯೋಜನೆಗಳ ಮೂಲಕ ಉಚಿತ ಬಸ್ ಪ್ರಯಾಣ, ಗೃಹಲಕ್ಷ್ಮೀ ಯೋಜನೆಯಡಿ ತಿಂಗಳಿಗೆ 2 ಸಾವಿರ ರೂ. ಹಾಗೂ ಸ್ವಾವಲಂಭಿ ಜೀವನಕ್ಕೆ ಅಕ್ಕಪಡೆ ಸೇರಿದಂತೆ ಅನೇಕ ಯೋಜನೆಗಳು ಮಹಿಳೆಯರ ಸ್ವಾವಲಂಭಿ ಬದುಕಿಗೆ ಅನುಕೂಲವಾಗಿವೆ. ಒಂದು ಕಾಲದಲ್ಲಿ ಮಹಿಳೆ ತನ್ನ ತವರು ಮನೆಗೆ ಹೋಗಬೇಕೆಂದರೆ ದುಡ್ಡು ಇರುತ್ತಿರಲಿಲ್ಲ. ಉಚಿತ ಬಸ್ ಪ್ರಯಾಣದಿಂದ ಸಾಧ್ಯವಾಗಿದೆ ಎಂದು ತಿಳಿಸಿದರು.

ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಮಾತನಾಡಿ, ಗಂಡು ಮತ್ತು ಹೆಣ್ಣು ಒಂದು ನಾಣ್ಯದ ಎರಡು ಮುಖಗಳಿದ್ದಂತೆ, ಇವರಿಬ್ಬರೂ ಸಮಾನರಾಗಿದ್ದಾಗ ಮಾತ್ರ ಬದುಕು ಸಾಗಿಸಲು ಸಾಧ್ಯವಾಗುತ್ತದೆ. ಹೆಣ್ಣು ಗೌರವದ ಪ್ರತೀಕವಾಗಿದ್ದು, ಹೆಣ್ಣನ್ನು ಭಾರತ ಮಾತೆಗೆ ಹೋಲಿಸುತ್ತಾರೆ. ಎಲ್ಲಿ ಮಹಿಳೆಯರಿಗೆ ಸ್ಥಾನಮಾನ ಇಲ್ಲವೋ ಅಲ್ಲಿ ಅಭಿವೃದ್ಧಿ ಕುಂಟಿತಗೊಂಡಿರುತ್ತದೆ. ಮಹಿಳೆಯರಿಗೆ ಸಮಾನ ಅವಕಾಶ, ಶಿಕ್ಷಣ, ಆರೋಗ್ಯ ಮತ್ತು ಸುರಕ್ಷತೆ ಒದಗಿಸಿದಾಗ ಮಾತ್ರ ನಿಜವಾದ ಅಭಿವೃದ್ದಿ ಸಾಧ್ಯವೆಂದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಮಹಿಳೆ ಒಂದು ವ್ಯಕ್ತಿ ಮಾತ್ರವಲ್ಲ, ಅವಳು ತಾಯಿ, ಸಹೋದರಿ, ಪತ್ನಿ, ಶಿಕ್ಷಕಿ ಮತ್ತು ಸಮಾಜದ ಮಾರ್ಗದರ್ಶಕಿ ಕೂಡಾ ಆಗಿದ್ದಾಳೆ, ಕುಟುಂಬದ ಬೆಳವಣಿಗೆಗೂ, ಸಮಾಜದ ಅಭಿವೃದ್ದಿಗೂ ಮಹಿಳೆಯರ ಪಾತ್ರ ಅತೀ ಮಹತ್ವರವಾಗಿದೆ. ಇಂದು ಮಹಿಳೆ ಪ್ರತಿಯೊಂದು ಕ್ಷೇತ್ರದಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಮಕ್ಕಳಿಗೆ ಶಿಕ್ಷಣ ಮುಖ್ಯವಾಗಿರಬೇಕು ಅಂದಾಗ ಮಾತ್ರ ಅಭಿವೃದ್ದಿ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ, ಮಹಿಳೆಯರಿಗೆ ಸಮಾನವಾದ ಅವಕಾಶ, ಶಿಕ್ಷಣ, ಆರೋಗ್ಯ ಮತ್ತು ಸುರಕ್ಷತೆ ಒದಗಿಸಿದಾಗ ಮಾತ್ರ ನಿಜವಾದ ಅಭಿವೃದ್ಧಿ ಸಾಧ್ಯ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿದ್ದ ನವನಗರದ ಮಹಿಳಾ ಪೊಲೀಸ್ ಠಾಣೆಯ ಡಿಎಸ್‌ಪಿ ಗಿರೀಶ ಭೋಜನ್ನವರ ಮಹಿಳೆಯರಿಗಾಗಿ ಸೈಬರ್ ಸುರಕ್ಷತೆ, ಕೃಷಿ ವಿಜ್ಞಾನ ಕೇಂದ್ರದ ತಜ್ಞೆ ಡಾ.ರಮೀತ ಬಿ.ಈ ಮಹಿಳೆಯರಲ್ಲಿ ಮಾನಸಿಕ ಒತ್ತಡ ನಿರ್ವಹಣೆ ಹಾಗೂ ಪೌಷ್ಠಿಕ ಆಹಾರ ಕುರಿತು ಉಪನ್ಯಾಸ ನೀಡಿದರು. ಪ್ರಾರಂಭದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ ಬೇಟಿ ಬಚಾವೋ, ಬೇಟಿ ಪಡಾವೋ ಯೋಜನೆಯ ಪ್ರತಿಜ್ಞಾವಿಧಿ ಬೋಧಿಸಿದರು.

ಈ ಸಂದರ್ಭದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಉಪನಿರ್ದೇಶಕ ಕೆ.ಪ್ರಭಾಕರ, ಯೋಜನಾ ನಿರ್ದೇಶಕ ಮಂಜುನಾಥ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಡಾ.ವೀಣಾ, ಸೇರಿದಂತೆ ಆಯಾ ತಾಲೂಕಿನ ಶಿಶು ಅಭಿವೃದ್ದಿ ಯೋಜನಾಧಿಕಾರಿಗಳು ಉಪಸ್ಥಿತರಿದ್ದರು.

## ಶ್ರೀಶೈಲಂಗೆ ವಿಶೇಷ ಸಾರಿಗೆ ಸೌಲಭ್ಯ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಳ್ಳಾರಿ ವಿಭಾಗದಿಂದ ಶ್ರೀಶೈಲಂಗೆ ಹೋಗಲು ಮಾ.10 ರಿಂದ 20 ರ ವರೆಗೆ ವಿಶೇಷ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಇನಾಯತ್ ಬಾಗ್‌ಬಾನ್ ಅವರು ತಿಳಿಸಿದ್ದಾರೆ.

ಬಳ್ಳಾರಿ, ಮೋಕಾ, ಕುರುಗೋಡು, ಕಂಪ್ಲಿ, ಎಮ್ಮಿಗನೂರು, ಸಿರುಗುಪ್ಪ, ತೆಕ್ಕಲಕೋಟೆ, ಹಳೇಕೋಟೆ, ತೋರಣಗಲ್ಲು, ಸಂಡೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಯುಗಾದಿ ಹಬ್ಬದ ಪ್ರಯುಕ್ತ ಶ್ರೀ ಭ್ರಮರಾಂಬಾ ಮಲ್ಲಿಕಾರ್ಜುನ ಸ್ವಾಮಿಯ ವಿಶೇಷ ದರ್ಶನಕ್ಕಾಗಿ ಶ್ರೀಶೈಲಂಗೆ ಹೋಗುತ್ತಿದ್ದು, ಭಕ್ತಾಧಿಗಳ ಅನುಕೂಲಕ್ಕಾಗಿ ಈ ವಿಶೇಷ ಸಾರಿಗೆ ಸೌಲಭ್ಯ ಒದಗಿಸಲಾಗಿದೆ. ಮಾಹಿತಿಗಾಗಿ ಬಳ್ಳಾರಿ–1ನೇ ಘಟಕದ ವ್ಯವಸ್ಥಾಪಕರು–7760992163, ಬಳ್ಳಾರಿ–2ನೇ ಘಟಕ ವ್ಯವಸ್ಥಾಪಕರು–7760992164, ಸಿರುಗುಪ್ಪ ಘಟಕ ವ್ಯವಸ್ಥಾಪಕರು–7760992165, ಕುರುಗೋಡು ಘಟಕ ವ್ಯವಸ್ಥಾಪಕರು–9606483671, ಸಂಡೂರು ಘಟಕ ವ್ಯವಸ್ಥಾಪಕರು–7760992309 ಗೆ ಸಂಪರ್ಕಿಸಬಹುದು.

ಈ ಸಾರಿಗೆ ಸೇವೆಯನ್ನು ಭಕ್ತಾಧಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಸರಕಾರಿ ವೈದ್ಯಕೀಯ ಕಾಲೇಜಿಗೆ ಶಂಕುಸ್ಥಾಪನೆ



ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಜಿಲ್ಲೆಯಲ್ಲಿ ಮಾರ್ಚ 14 ರಂದು ನಡೆಯಲಿರುವ ಸರಕಾರಿ ವೈದ್ಯಕೀಯ ಕಾಲೇಜು ಶಂಕುಸ್ಥಾಪನೆ ಹಾಗೂ ವಿವಿಧ ಅಭಿವೃದ್ದಿ ಕಾಮಗಾರಿಗಳ ಉದ್ಘಾಟನೆಯನ್ನು ನೆರವೇರಿಸಲು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಆಗಮಿಸುತ್ತಿದ್ದು, ಈ ಹಿನ್ನಲೆಯಲ್ಲಿ ಕಾರ್ಯಕ್ರಮ ಯಶಸ್ವಿಗೆ ಅಗತ್ಯ ಸಿದ್ದತೆಗಳನ್ನು ಕೈಗೊಳ್ಳುವಂತೆ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸೋಮವಾರ ಜರುಗಿದ ಕಾರ್ಯಕ್ರಮದ ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕಾರ್ಯಕ್ರಮ ಅಚ್ಚುಕಟ್ಟಾಗಿ, ಯಶಸ್ವಿಯಾಗಿ ನಡೆಸುವ ನಿಟ್ಟಿನಲ್ಲಿ ಶಿಷ್ಠಾಚಾರ, ಆಹಾರ, ವೇದಿಕೆ, ವಸತಿ ಸೇರಿದಂತೆ ಇತರೆ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯಲ್ಲಿ ತಮಗೆ ವಹಿಸಿಕೊಟ್ಟ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಕಾರ್ಯಕ್ರಮಕ್ಕೆ ಅಂದಾಜು 25 ಸಾವಿರ ಜನ ಸೇರುವ ನಿರೀಕ್ಷೆ ಇದ್ದು, ಕಾರ್ಯಕ್ರಮ ವೀಕ್ಷಣೆಗೆ ಎಲ್ಲ ರೀತಿಯ ಸಿದ್ದತೆಗಳನ್ನು ಮಾಡಿಕೊಳ್ಳಲು ಸಂಬಂಧಿಸಿದ ಸಮಿತಿಗಳಿಗೆ ಸೂಚನೆ ನೀಡಿದರು.


ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರು ಹಾಗೂ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದ–ರೆಯಾಗದಂತೆ ವೇದಿಕೆ ವ್ಯವಸ್ಥೆ, ಕುಡಿಯುವ ನೀರು, ವಾಹನ ನಿಲುಗಡೆ, ಭದ್ರತಾ ವ್ಯವಸ್ಥೆ, ಸಂಚಾರಿ ನಿಯಂತ್ರಣ ಹಾಗೂ ವೈದ್ಯಕೀಯ ಸೌಲಭ್ಯ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವ ಕೆಲಸವಾಗಬೇಕು. ಬೃಹತ್ ವೇದಿಕೆ ನಿರ್ಮಾಣ ಮಾಡಲಾಗುತ್ತಿದ್ದು, ಎಲ್‌ಇಡಿ ಪರದೆಗಳನ್ನು ಸಹ ಹಾಕಲು ತಿಳಿಸಿದರು. ಸರಕಾರದ ವಿವಿಧ ಯೋಜನೆಗಳ ಫಲಾನುಭವಿಗಳನ್ನು ಕರೆತರಲು ಬಸ್‌ಗಳ ವ್ಯವಸ್ಥೆ ಸಹ ಮಾಡಲು ತಿಳಿಸಿದರು.

ಕಾರ್ಯಕ್ರಮದ ಸ್ಥಳದಲ್ಲಿ ಸ್ವಚ್ಛತೆ ಕಾಪಾಡುವುದು ಹಾಗೂ ಎಲ್ಲ ವ್ಯವಸ್ಥೆಗಳನ್ನು ಮುಂಚಿತವಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸಚಿವರು ನಿರ್ದೇಶನ ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಯ ಯೋಜನೆ ಫಲಾನುಭವಿಗಳಿಗೆ ಸಾಂಕೇತಿಕವಾಗಿ ಸೌಭ್ಯಗಳನ್ನು ಸಹ ವಿತರಣೆ ಮಾಡಲಾಗುತ್ತಿದೆ. ಕಾರ್ಯಕ್ರಮವು ಮಹತ್ವದ್ದಾಗಿರುವದರಿಂದ ಪ್ರತಿಯೊಂದು ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಸಮಾರಂಭವನ್ನು ಯಶಸ್ವಿಯಾಗಿ ನೆರವೇರಿಸಬೇಕು ಎಂದರು. ಸಭೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಯುಕೆಪಿ ಮಹಾವ್ಯವಸ್ಥಾಪಕ ಗಜಾನನ ಬಾಲೆ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಮಾ.11 ರಂದು ಹುಣಸಗಿ ಬಂದ್‌ಗೆ ಕರೆ: ಮಾದಿಗ ಮೀಸಲಾತಿ ಸಮನ್ವಯ ಸಮಿತಿ

ಮಲ್ಲಮ್ಮನುಡಿ ವಾರ್ತೆ ಹುಣಸಗಿ

ಮಾದಿಗಸಮುದಾಯಕ್ಕೆಸಂಪೂರ್ಣ ಒಳಮೀಸಲಾತಿ ಜಾರಿ ಹಾಗೂ 56 ಸಾವಿರ ಹುದ್ದೆಗಳ ಭರ್ತಿಯಲ್ಲಿ ಒಳಮೀಸಲಾತಿ ಅನ್ವಯಕ್ಕೆ ಒತ್ತಾಯಿಸಿ ಮಾರ್ಚ್ 11ರಂದು ಹುಣಸಗಿ ಬಂದ್‌ಗೆ ಮಾದಿಗ ಮೀಸಲಾತಿ ಸಮನ್ವಯ ಸಮಿತಿ ಕರೆ ನೀಡಿದೆ. ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.



ಸಮಿತಿಯ ಮುಖಂಡರಾದ ಸಿದ್ದಣ್ಣ ಮೇಲಿನಮನಿ ಮತ್ತು ಮಲ್ಲಪ್ಪ ಮಾಸ್ತರ ದೊಡ್ಡಮನಿ ವಜ್ಜಲ್ ಮಾತನಾಡಿ, ಇದು ಮಾದಿಗ ಸಮುದಾಯದ ನ್ಯಾಯಯುತ ಬೇಡಿಕೆ ಆಗಿದ್ದು ಬಂದ್‌ಗೆ ಸಾರ್ವಜನಿಕರು ಹಾಗೂ ವ್ಯಾಪಾರಸ್ಥರು ಸಹಕರಿಸಬೇಕು ಎಂದು ಮನವಿ ಮಾಡಿದರು. ಯಾರನ್ನೂ ಬಲವಂತ ಮಾಡುವುದಿಲ್ಲ ಎಂದೂ ತಿಳಿಸಿದರು.

ಈ ವೇಳೆ ಬಸವರಾಜ ಕಟ್ಟಿಮನಿ, ಶಾಂತಪ್ಪ ಹಗರಟಗಿ ಮಾನಪ್ಪ ಕಟ್ಟಿಮನಿ, ಮಹಾಂತೇಶ ದೊಡ್ಡಮನಿ, ಅಮಲಪ್ಪ ಹಳ್ಳಿ, ಬಸವರಾಜ ಕೊಡೇಕಲ್ಲ, ಮಲ್ಲಿಕಾರ್ಜುನ ದೊಡ್ಡಮನಿ, ಮಲ್ಲು ಮಾಸ್ತರ ವಜ್ಜಲ್, ಪವಾಡೆಪ್ಪ ಕಕ್ಕೇರಾ, ದೇವಪ್ಪ ಮಂಜಲಾಪೂರ, ನಾಗರಾಜ ದೊಡ್ಡಮನಿ, ಕಾಶಿನಾಥ ಹಾದಿಮನಿ, ಗೋಪಾಲ ಕಟ್ಟಿಮನಿ, ಭೀಮು ಚೌನಿ, ಸಿದ್ದು ಗ್ಯಾಂಗಮ್ಯಾನ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.




ಸ್ಫೂರ್ತಿ ನರ್ಸಿಂಗ್ ಕಾಲೇಜ್ ವಿದ್ಯಾರ್ಥಿನಿ ದಾಸರು ಮೀನಾಕ್ಷಿ ಮಲ್ಲಮ್ಮ ನುಡಿ ಪತ್ರಿಕೆ ಶುಭ ಹಾರೈಸಿದ್ದಾಳೆ.

# ಉಪಮುಖ್ಯಮಂತ್ರಿ ಆಗ್ತಾರಾ ಪ್ರಿಯಾಂಕ್ ಖರ್ಗೆ?

• **ಮಲ್ಲಮ್ಮ ನುಡಿ ವಾರ್ತೆ ಚಿತ್ತಾಪುರ**

ಪ್ರಸ್ತುತ ಕರ್ನಾಟಕ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಐಟಿಬಿಟಿ ಸಚಿವರು, ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಸಮ ಕುಲಾಧಿಪತಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಿಯಾಂಕ್ ಖರ್ಗೆ ಅವರಿಗೆ ಶೀಘ್ರದಲ್ಲಿಯೇ ಡಿಸಿಎಂ ಸ್ಥಾನ ಒಲಿದು ಬರಲಿದೆ ಎನ್ನುವ ಮಾತುಗಳು ರಾಜ್ಯದಾದ್ಯಂತ ಕೇಳಿಬರುತ್ತಿವೆ.

ಕಾಂಗ್ರೆಸ್ ದಲಿತರಿಗೆ ಕಡೆಗಣಿಸುತ್ತಿದೆ ಎನ್ನುವ ಆರೋಪಗಳು ರಾಜ್ಯದಲ್ಲಿ ಜೋರಾಗಿ ಕೇಳಿಬರುತ್ತಿವೆ. ದಲಿತರ ಹಣ ಅನ್ಯ ಉದ್ದೇಶಕ್ಕೆ ಬಳಕೆ ಮಾಡಿದ ಮೇಲಂತು ಸಮುದಾಯಕ್ಕೆ ನಿರಾಸೆಯಾಗಿದೆ. ದಲಿತರನ್ನು ತನ್ನ ಜೊತೆ ಉಳಿಸಿಕೊಳ್ಳಲು ಹೈಕಮಾಂಡ್ ಡಿಸಿಎಂ ಮೊರೆ ಹೋಗುವ ಲಕ್ಷಣಗಳು ಕಾಣಿಸುತ್ತಿವೆ.

ಮುಖ್ಯಮಂತ್ರಿ ಹುದ್ದೆ ಡಿ.ಕೆ. ಶಿವಕುಮಾರ್ ಅವರಿಗೆ ಒಲಿದರೆ ಪ್ರಿಯಾಂಕ್ ಖರ್ಗೆ ಡಿಸಿಎಂ



ಪ್ರಕ್ರಿಯೆ ಇನ್ನೂ ಸುಗಮವಾಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿ. ಕೆ. ಶಿವಕುಮಾರ ಇವರಿಬ್ಬರ ಜೊತೆಗೂ ಉತ್ತಮ ಒಡನಾಟ ಹೊಂದಿರುವ ಪ್ರಿಯಾಂಕ್ ಖರ್ಗೆ ಉತ್ತಮ ಆಡಳಿತಗಾರ ಎನಿಸಿಕೊಂಡಿದ್ದಾರೆ. ಕಲಬುರಗಿ ಜಿಲ್ಲೆಯ ಚಿತ್ತಾಪುರ ಕ್ಷೇತ್ರದಿಂದ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು ಸಿದ್ದರಾಮಯ್ಯ ಸಂಪುಟದಲ್ಲಿ ಅತ್ಯಂತ ಕ್ರಿಯಾಶೀಲ ಸಚಿವರಾಗಿದ್ದಾರೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನದಲ್ಲಿ ಹಲವು ದಾಖಲೆಗಳನ್ನು ನಿರ್ಮಿಸಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಪಾರದರ್ಶಕ ಆಡಳಿತ ನೀಡಿ ಸೈ ಎನಿಸಿಕೊಂಡಿದ್ದಾರೆ. ಗದಗದ ಒಉಖಆಕಖ ವಿಶ್ವವಿದ್ಯಾಲಯದ ಸಮ ಕುಲಾಧಿಪತಿಗಳು ಆಗಿ ಸಾವಿರಾರು ವಿದ್ಯಾರ್ಥಿಗಳು ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಬಗ್ಗೆ ತಿಳಿದುಕೊಳ್ಳಲು ಹೊಸಕೋರ್ಸ್ ಗಳನ್ನು ತೆರೆದಿದ್ದಾರೆ. ಅಲ್ಲದೆ ಗ್ರಂಥಾಲಯಕ್ಕೆ ಬೇಕಾದ ಸಾಮಾನ್ಯ ಜ್ಞಾನವನ್ನು ನೀಡಲು ಗ್ರಂಥಾಲಯದ ವಿಷಯವನ್ನು ಕೂಡ ಈ ವಿಶ್ವವಿದ್ಯಾಲಯದಲ್ಲಿ ಬೋಧನೆ ಮಾಡಲಾಗುತ್ತಿದೆ.

1998 ರಲ್ಲಿ ಭಾರತದ ರಾಷ್ಟ್ರೀಯ ವಿದ್ಯಾರ್ಥಿ ಸಂಘದೊಂದಿಗೆ ತಮ್ಮ ರಾಜಕೀಯ ಪ್ರಯಾಣವನ್ನು ಪ್ರಾರಂಭಿಸಿದ ಪ್ರಿಯಾಂಕ್ ಖರ್ಗೆ ಕಡಿಮೆ ಸಮಯದಲ್ಲಿ ಹೈಕಮಾಂಡ್ ಪ್ರೀತಿಗೆ ಪಾತ್ರರು ಕೂಡ ಆಗಿದ್ದಾರೆ.

ಕಾಂಗ್ರೆಸ್ ಪಕ್ಷದೊಳಗೆ ವಿವಿಧ ನಾಯಕತ್ವ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಬಿಜೆಪಿಗೆ ಬಿಸಿ ತುಪ್ಪವಾಗಿರುವ, ವಿರೋಧ ಪಕ್ಷಗಳಿಗೆ ದಾಖಲೆ ಸಮೇತ ಉತ್ತರ ನೀಡುವ ಧೈರ್ಯ ಪ್ರಿಯಾಂಕ್ ಅವರಲ್ಲಿದೆ. ಹೈಕಮಾಂಡ್ ನ ಎಲ್ಲ ನಾಯಕರು ಪ್ರಿಯಾಂಕ್ ಅವರ ನಾಯಕತ್ವ ಗುಣ ಹಿಡಿಸಿದೆ. ದೆಹಲಿ ನಾಯಕರ ಸಂಪೂರ್ಣ ಬೆಂಬಲ ತಂದೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಆಶೀರ್ವಾದ ಇದ್ದರೆ ಯಾವ ಹುದ್ದೆಯೂ ದೊಡ್ಡದೇನಲ್ಲ.

ಪ್ರಸ್ತುತ ಕರ್ನಾಟಕದಲ್ಲಿ ಮುಖ್ಯಮಂತ್ರಿ ಬದಲಾವಣೆ ಆದರೆ ಪ್ರಿಯಾಂಕ್ ಖರ್ಗೆ ಉಪಮುಖ್ಯಮಂತ್ರಿ ಆಗ್ತಾರೆ ಎನ್ನುವ ಮಾತುಗಳು ಕೂಡ ರಾಜಕೀಯ ಪದಸಾಲೆಯಲ್ಲಿ ಕೇಳಿ ಬರುತ್ತಿವೆ. ರಾಜಕೀಯದಲ್ಲಿ ರಾತ್ರೋ ರಾತ್ರಿ ಏನೇ ಆದರೂ ಯಾರೂ ಆಶ್ಚರ್ಯಪಡಬೇಕಿಲ್ಲ.

## ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕರಾಗಿ ಪ್ರಭಾರ ವಹಿಸಿಕೊಂಡ ಡಾ.ಜಿ.ಸುರೇಶ



**ಬೀದರ:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾಗಿ ಪ್ರಭಾರ ವಹಿಸಿಕೊಂಡ ಹಾಗೂ ಹಿರಿಯ ಸಹಾಯಕ ನಿರ್ದೇಶಕರಾಗಿ ಪದೋನ್ನತಿ ಹೊಂದಿದ ಹಿನ್ನೆಲೆಯಲ್ಲಿ ಸೋಮವಾರ ಡಾ. ಸುರೇಶ .ಜಿ ರವರಿಗೆ ಬೀದರ ವಾರ್ತಾ ಇಲಾಖೆಯ ಸಿಬ್ಬಂದಿ ವರ್ಗದವರಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಸರ್ವ ಸಿಬ್ಬಂದಿಗಳು ಸೇರಿ ಸುರೇಶ ರವರಿಗೆ ಪೇಟ ತೊಡಿಸಿ, ಶಾಲು ಹೊದಿಸಿ, ಹೂವಿನ ಮಾಲೆ ಹಾಕಿ ಸಿಹಿ ತಿನಿಸಿ "ಹೊಸ ಜವಾಬ್ದಾರಿಯೊಂದಿಗೆ ಅವರ ವೃತ್ತಿಜೀವನ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ" ಎಂದು ಶುಭಕೋರಿದರು.

ಈ ಸಂದರ್ಭದಲ್ಲಿ ವಾರ್ತಾ ಇಲಾಖೆಯ ಪ್ರಥಮ ದರ್ಜೆ ಸಹಾಯಕ ನರೇಶಕುಮಾರ್, ಗ್ರಂಥಪಾಲಕ ತನ್ವಿರ ಇಕ್ಬಾಲ್, ಬೆರಳಚ್ಚುಗಾರ ವಿಶ್ವನಾಥ ಸೇಡಂಕರ್, ಸಿನಿ ಚಾಲಕ ವಿಜಯಕೃಷ್ಣ ಸೋಲಪುರ, ಆಶೀಷ್ ಹಜಾರೆ, ನಾಗಶೆಟ್ಟಿ ತಾದಲಾಪುರ, ಬಿಂದುಸಾರ ಪನಶೆಟ್ಟಿ ಧನ್ನೂರ್, ವಾಹನ ಚೊಕ್ಕಟಗಾರ್ತಿ ಗೀತಾಬಾಯಿ, ಅವಿನಾಶ್ ಸೇರಿದಂತೆ ಪತ್ರಿಕೆಯ ಸಂಪಾದಕರು ಹಾಗೂ ಪತ್ರಕರ್ತರು ಉಪಸ್ಥಿತರಿದ್ದರು.

## ಹೊಲೆಯ ಮಾದಿಗರ ಮದ್ಯೆ ಜಗಳ ಹಚ್ಚುವ ಕೆಲಸ

• **ಮಲ್ಲಮ್ಮ ನುಡಿ ವಾರ್ತೆ ವಿಜಯಪುರ**

ಒಳ ಮೀಸಲಾತಿ ವಿಚಾರದಲ್ಲಿ ಕೆಲವು ನಾಯಕರು ಕಾಂಗ್ರೆಸ್ ನ ದಲಿತ ನಾಯಕರಾದ ಪ್ರಿಯಾಂಕ ಖರ್ಗೆ, ಹೆಚ್ ಸಿ ಮಹದೇವಪ್ಪ ಹಾಗೂ ಜಿ ಪರಮೇಶ್ವರ್ ಅವರ ಬಗ್ಗೆ ಹಗುರವಾಗಿ ಮಾತನಾಡುತ್ತಿರುವುದು ಸರಿಯಲ್ಲ ಎಂದು ವಿಜಯಪುರದ ಹಳೆ ಪ್ರವಾಸಿ ಮಂದಿರದಲ್ಲಿ ಜಿಲ್ಲೆಯ ದಲಿತ ಮುಖಂಡರು ಕಿಡಿ–ಕಾರಿದರು. ಒಳ ಮೀಸಲಾತಿ ಪ್ರಕ್ರಿಯೆ ಈಗಾಗಲೇ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಬಗೆಹರಿಸಿದ್ದಾರೆ. ಆದರೆ ದಲಿತ ಎಡಗೈ ಸಮುದಾಯ ಇದನ್ನು ಒಪ್ಪುತ್ತಿಲ್ಲ ಎಂದು ಆರೋಪಿಸಿದರು.

ವಿಜಯಪುರ ನಗರದಲ್ಲಿ ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡಿದ ದಲಿತ ಮುಖಂಡರಾದ ಅಭಿಷೇಕ ಚಕ್ರವರ್ತಿ ಮಾತನಾಡಿ, ಸಂವಿಧಾನದ ಪ್ರಕಾರ ಪರಿಶಿಷ್ಟಜಾತಿ, ಪರಿಶಿಷ್ಟಪಂಗಡಗಳ ಜನರಿಗೆ ಮೀಸಲಾತಿ ನೀಡಲು ಡಾ.ಅಂಬೇಡ್ಕರರವರು ಅವಕಾಶ ಕೊಟ್ಟಿದ್ದಾರೆ. 1979 ರಲ್ಲಿ ಹಾವನೂರ ಆಯೋಗ ಮಾಡಿದ ಬಳಿಕ ಭೋವಿ, ಲಂಬಾಣಿ, ಕೊರಮ, ಕೊರಚ, ಅಲೆಮಾರಿ ಎಂದು ಅವರನ್ನು ವಿಭಜಿಸಿದರು. ಅದಕ್ಕೂ ಮೊದಲು ಮಾದಿಗ, ಹೊಲೆಯ ಸೇರಿದಂತೆ ಮೂಲ ಅಸ್ಪೃಶ್ಯರಿಗೆ ಮಾತ್ರ ಮೀಸಲಾತಿ ಇತ್ತು. ಮೀಸಲಾತಿ ಎಂಬ ಹೆಸರಿನಲ್ಲಿ ಹೊಲೆಯ– ಮಾದಿಗ ಮದ್ಯೆ ಜಗಳ ಹಚ್ಚುವ ಕೆಲಸ



ಆಗುತ್ತಿದೆ. 100 ರೋಸ್ಟರ್ ಬಿಂದುಗಳನ್ನು ಮಾಡಿ 17 ರೋಸ್ಟರ್ ಬಿಂದುಗಳನ್ನು ತಿದ್ದಪಡೆ ಮಾಡಲಾಯಿತು. ಬಳಿಕ ಸುಪ್ರೀಂ ಕೋರ್ಟ್ ಆದೇಶದಂತೆ ಹೆಚ್.ಎನ್ ನಾಗಮೋಹನದಾಸ ಅವರ ವರದಿಯನ್ನು ಸರ್ಕಾರ ಸ್ವೀಕರಿಸಿದೆ. ಮಾದಿಗ 6 ಹೊಲೆಯ 5 ಇನ್ನುಳಿದವರಿಗೆ 3 ಮಾಡಿ ವರದಿ ಒಪ್ಪಿಸಲಾಯಿತು. ಬಳಿಕ ನಮ್ಮ ನಾಯಕರು ಹೋರಾಡಿ ಅದನ್ನು 6 ಪರ್ಸೆಂಟ್ ಮಾಡಲು ಯಶಸ್ವಿಯಾದರು. ಆರ್ ಎಸ್ ಎಸ್ ಚಡ್ಡಿ ಹಾಕಿಕೊಂಡಿರುವ ಭಾಸ್ಕರ ಪ್ರಸಾದ ಹಾಗೂ ವಕೀಲ ಅರುಣಕುಮಾರ ರವರು ಅಸಂವಿಧಾನಿಕ ಪದಗಳನ್ನು ನಮ್ಮ ಸಮುದಾಯದ ಸಚಿವ ರನ್ನು ಅವಮಾನಿಸುತ್ತಿದ್ದಾರೆ. ನವ್ಹೆಂಬರ್ ನಲ್ಲಿ ಹೈಕೋರ್ಟ್ ನಲ್ಲಿ ನಾಲ್ಕು ರಿಟ್ ಅರ್ಜಿಗಳು ಹೋಗಿವೆ. ಅವು ಅಭ್ಯರ್ಥಿಗಳ ಅವರ ಪದವಿ, ಅನುಭವದ ಅರ್ಹತೆ ಆಧಾರದ ಮೇಲೆ ಸೇರಿಸಿಕೊಳ್ಳಲಾಗಿದೆ. ಮಾದಿಗ ಸಮಾಜ ಬಾಂಧವರು ಇಲ್ಲ ಸಲ್ಲದ ವಿಚಾರಗಳನ್ನು ಜನರಲ್ಲಿ ತುಂಬಬಾರದು ಎಂದರು.

## ನೌಕರರ ಬೇಡಿಕೆಗಳನ್ನು ಈಡೇರಿಸುವಲ್ಲಿ ವಿಫಲ

• **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**

2025ರಲ್ಲಿ ಪೌರಾಡಳಿತ ಸಚಿವರು ನಮ್ಮ ಸುಮಾರು 19 ಬೇಡಿಕೆಗಳನ್ನು ಈಡೇರಿಸಲು ಮಾತುಕೊಟ್ಟಿದ್ದರು. ಪೌರಾಡಳಿತ ನೌಕರರು ಉತ್ತಮ ಸೇವೆಯನ್ನು ಸಲ್ಲಿಸುತ್ತಿದ್ದು, ಪಟ್ಟಣ, ನಗರಗಳ ಆಡಳಿತ ಸುಗಮವಾಗಿ ನಡೆಯಲು ಅವರ ಕಾರಣೀಭೂತರಾಗಿದ್ದಾರೆ ಎಂದು ಹೇಳಿದ್ದ ಸಚಿವರು ಮೊನ್ನೆಯ ಬಜೆಟ್ ಅಧಿವೇಶನದಲ್ಲಿ ನಮ್ಮಗಳ ಬಗ್ಗೆ ಕಿಂಚಿತ್ತೂ ಯೋಚಿಸದೇ ನಮಗೆಲ್ಲ ನಿರಾಶೆ ತಂದಿದ್ದಾರೆ ಎಂದು ರಾಜ್ಯ ಪೌರ ನೌಕರರ ಸಂಘದ ಅಧ್ಯಕ್ಷರಾದ ಪ್ರಭಾಕರ ತಿಳಿಸಿದರು.

ಮುಂದುವರಿದು ಮಾತನಾಡಿದ ಅವರು, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೀರು ಸರಬರಾಜು ಸಹಾಯಕರು, ವಾಹನ ಚಾಲಕರು, ಬೀದಿ ದೀಪ ಸಹಾಯಕರು, ಲೋಡರ್ಸ ಮತ್ತು ಸ್ಯಾನಿಟರಿ ಸೂಪರ್ ವೈಸರ್ ಸೇರಿದಂತೆ ಕಾರ್ಯನಿರ್ವಹಿಸುವ ನೌಕರರನ್ನು ನೇರ ಪಾವತಿ ಯೋಜನೆಗೆ ಒಳಪಡಿಸುವುದು, ಸೇರಿದಂತೆ ಇತರ ಬೇಡಿಕೆಗಳನ್ನು ಸರಕಾರ ಕೂಡಲೇ ಜಾರಿಗೊಳಿಸಬೇಕು. ಇಲ್ಲವಾದಲ್ಲಿ ಮುಂದೊಂದು ದಿನ ರಾಜ್ಯದಾದ್ಯಂತ ಹೋರಾಟ ಕೈಗೊಳದಳಲಾಗುವುದು ಎಂದು ಸರಕಾರಕ್ಕೆ ಎಚ್ಚರಿಸಿದರು.

ಈ ಸಂದರ್ಭದಲ್ಲಿ, ತಾಲ್ಲೂಕು ಪೌರಾಡಳಿತ ಸಂಘದ ಅಧ್ಯಕ್ಷರಾದ ಬೆಳ್ಳಕ್ಕಿ ಮಾರುತಿ, ಕಾರ್ಯದರ್ಶಿ ಚಂದ್ರು, ವೀರೇಶ್ ಮತ್ತಿತರರು ಉಪಸ್ಥಿತರಿದ್ದರು.




# ದಿಟ್ಟತನದ ಅಪರೂಪದ ವ್ಯಕ್ತಿ ಸಂಗನಗೌಡ್ರು

• **ಎಸ್.ಎಸ್.ಹಳ್ಳೂರ, ಸಾಹಿತಿಗಳು**

ಮನುಷ್ಯ ಶ್ರೇಷ್ಠವಾದುದನ್ನು ಮೆಚ್ಚುವುದರಿಂದ, ಪ್ರಶಂಸೆ ಮಾಡುವುದರಿಂದ ಜೀವನ ಉದಾತ್ತವೆನಿಸುವುದು. ಆಗ ಮನುಷ್ಯ ಉನ್ನತಿಯ ಪಥದಲ್ಲಿ ಹೆಜ್ಜೆ ಇರಿಸುತ್ತಾನೆ. ಇದೇ ಜೀವನದ ಯಶಸ್ವಿಗೆ ಕಾರಣವಾಗುತ್ತದೆ.

ಹುನಗುಂದ ತಾಲೂಕಿನ ತಿಮ್ಮಾಪೂರದ ಸಂಗನಗೌಡ ರಂಗನಗೌಡರು ಒಳ್ಳೆಯದಾದುದನ್ನು, ಶ್ರೇಷ್ಠವಾದುದನ್ನು ಮೆಚ್ಚಿದರು, ಪ್ರಶಂಸೆ ಮಾಡಿದರು. ಹೀಗಾಗಿ ಅವರ ಜೀವನ ಉನ್ನತಿಯ ಪಥದಲ್ಲಿ ಸಾಗಿ ಬಂದಿತು. ಅವರು ಜೀವನದಲ್ಲಿ ಎಂಥ ಕಠಿಣ ಪ್ರಸಂಗ ಬಂದರೂ ಧೈರ್ಯದಿಂದ ಎದುರಿಸಿ ಯಶಸ್ವಿಯಾದರು. ಸಂಗನಗೌಡರು ಜೀವನದಲ್ಲಿ ಪ್ರಕಾಶಮಾನವಾದ ಭಾಗದ ಕಡೆಗೆ ತಮ್ಮ ದೃಷ್ಟಿಯನ್ನು ಹರಿಸಿದರು. ಅವರ ಜೀವನ ಪಥ ಇತರರಿಗೆ ಮಾದರಿಯಾಗಿತ್ತು.

ಸಂಗನಗೌಡರು ಗ್ರಾಮದ ದಳಪತಿಯಾಗಿ ಸೇವೆಸಲ್ಲಿಸಿದ್ದಾರೆ. ಪೋಲಿಸ್‌ಸ್ಟೇಶನ್ನಿನ ವ್ಯಾಜ್ಯಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಅವರ ಪ್ರಯತ್ನ ನಿರಂತರವಾಗಿತ್ತು. ಯಾರಿಗೂ ಅನ್ಯಾಯವಾಗದಂತೆ ನೋಡಿಕೊಳ್ಳುವ ವಿಶಾಲ ಗುಣವನ್ನು ಅವರು ಬೆಳೆಸಿಕೊಂಡಿದ್ದರು. ಬೀಳಗಿ ಪಟ್ಟಣ ಅಭಿವೃದ್ಧಿ ಸಹಕಾರಿ ಬ್ಯಾಂಕಿನ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಗ್ರಾಮದ ಹಿರಿಯರಲ್ಲಿ ಇವರೂ ಒಬ್ಬರು.

ಸಂಗನಗೌಡರು ಅತ್ಯುತ್ತಮ ನಟರಾಗಿದ್ದರು. ಗ್ರಾಮದಲ್ಲಿ ಆಡುವ ನಾಟಕದಲ್ಲಿ ಅವರಿಗೆ ಪ್ರಮುಖ ಪಾತ್ರ ಇರುತ್ತಿತ್ತು. ಸೌಭಾಗ್ಯ ಲಕ್ಷ್ಮೀ ನಾಟಕದ ಜಾಗಿರದಾರನ ಪಾತ್ರ ಎಂದೂ ಮರೆಯುವಂತದ್ದಲ್ಲ. ಹಿಂದಿನ ತಲೆಮಾರಿನವರು ಅವರಿಗೆ ಜಾಗಿರದಾರ್ ಎಂದೇ ಕರೆಯುತ್ತಿದ್ದರು. ಅವರ ಅಳಿಯ(ಅಕ್ಕನ ಮಗ) ಬಸವರಾಜ ಹಳ್ಳೂರ ಇವರಿಗೆ ಜಾಗಿರದಾರ ಎಂದೇ ಈಗಲೂ ಕರೆಯುತ್ತಾರೆ. ಬಸವರಾಜ ಸಣ್ಣವನಿದ್ದಾಗ ಜಾಗಿರದಾರನ ಪಾತ್ರದಂತೆ ಹಾವಭಾವ ತೋರಿಸುತ್ತಿದ್ದನಂತೆ ಅದಕ್ಕಾಗಿಯೇ ಅವರಿಗೆ ಈಗಲೂ ಜಾಗಿರದಾರ ಎಂದು ಕರೆಯುತ್ತಾರೆ. ಬಸವರಾಜ ಎನ್ನುವ ಅವರ ಮೂಲ ಹೆಸರು ಬಹಳ ಜನರಿಗೆ ಗೊತ್ತಿಲ್ಲ. ಜಾಗಿರದಾರನ ಪಾತ್ರದ ಅಭಿನಯವನ್ನು ಈಗಲೂ ಹಿರಿಯರು ಜ್ಞಾಪಿಸಿಕೊಳ್ಳುತ್ತಾರೆ. ಒಂದು ಪಾತ್ರ 60 ವರ್ಷದ ನಂತರವೂ ಪ್ರತಿಧ್ವನಿಸುತ್ತದೆ ಎಂದರೆ ಅವರ ನಟನೆಯ ಶ್ರೇಷ್ಠತೆ ಹೇಗಿರಬಹುದೆಂದು ಊಹಿಸಬಹುದು.

ಬಂಜೆತೊಟ್ಟಿಲು ನಾಟಕದಲ್ಲಿ ಛಲವಂತಪ್ಪನ ಪಾತ್ರದಲ್ಲಿ ಅಭಿನಹಿಸಿದ ರೀತಿ ಅಮೋಘವಾದುದು. ಇದರಿಂದ ಅವರಲ್ಲಿ ಒಬ್ಬ ಉತ್ತಮ ಕಲಾಕಾರ ಅಡಗಿದ್ದಾನೆ ಎಂದು ಅನಿಸದೇ ಇರದು. ಇನ್ನೂ ಹಲವಾರು ನಾಟಕಗಳಲ್ಲಿ ಪಾತ್ರವಹಿಸಿ ಜನರಿಂದ ಸೈ ಎನಿಸಿಕೊಂಡಿದ್ದಾರೆ. ಅವರು ನಾಟಕದಲ್ಲಿ ಹೀರೋ ಆಗಿಯೂ ವಿಲನ್ ಆಗಿಯೂ ನಟಿಸಿದ್ದಾರೆ. ಆದರೆ ಜೀವನ ಎಂಬ ನಾಟಕದಲ್ಲಿ ಹೀರೋ ಮಾತ್ರ ಆಗಿದ್ದರು. ಅವರು ನಾಟಕಗಳ ಪಾತ್ರದಲ್ಲಿ ಯಶಸ್ವಿಯಾದಂತೆ



ಜೀವನ ಎನ್ನುವ ನಾಟಕದಲ್ಲಿಯೂ ಯಶಸ್ವಿಯಾಗಿದ್ದಾರೆ. ಪರಿಶುದ್ಧವಾದ ಹೃದಯದಲ್ಲಿ ದೇವರಿದ್ದಾನೆ ಎಂದು ಹೇಳುತ್ತಾರೆ. ಪರಿಶುದ್ಧವಾದ ಹೃದಯವಿರಿಸಿಕೊಂಡಿದ್ದ ಅವರು ದೇವರಂತ ಮನುಷ್ಯ ಎಂದೆನಿಸಿದ್ದರು. ಅವರು ತೊಡುವ ಶುಭ್ರವಾದ ಬಟ್ಟೆಯಲ್ಲಿ ಎಲ್ಲಿಯಾದರು ಕಲೆ ಇರಬಹುದು, ಆದರೆ ಅವರ ಮನಸ್ಸು ಅವರು ತೊಡುವ ಶುಭ್ರವಾದ ಬಟ್ಟೆಗಿಂತ ಶುಭ್ರವಾದುದು. ಅವರು ಹಿಡಿದ ಕಾರ್ಯದಲ್ಲಿ ಸೋತಿದ್ದೇ ಅಪರೂಪ. ಅವರು ಅಲ್ಲವಾದುದನ್ನು ಎಂದೂ ಆಡಿದವರಲ್ಲ. ಹೀಗಾಗಿ ಬಹಳ ಜನ ಅವರನ್ನು ಪ್ರೀತಿಸುತ್ತಿದ್ದರು. ಪ್ರೇಮ ಎಂಬ ಎರಡೂವರೆ ಅಕ್ಷರವನ್ನು ತಮ್ಮಲ್ಲಿ ಇರಿಸಿಕೊಂಡು ಬದುಕಿದ್ದರು. ಹಣದ ಶ್ರೀಮಂತಿಕೆಯ ಅಹಂಭಾವ ಅವರಲ್ಲಿ ಎಳ್ಳಷ್ಟು ಇದ್ದಿಲ್ಲ. ಆದರೆ ಹೃದಯ ಶ್ರೀಮಂತಿಕೆಯನ್ನು ಅವರು ಬದುಕಿನುದ್ದಕ್ಕೂ ಪಾಲನೆ ಮಾಡಿಕೊಂಡು ಬಂದರು. ಸ್ವರ್ಗ ಎಲ್ಲಿಯಾದರೂ ಇದ್ದರೆ ಅದು ಸುಖದಿಂದ ಇರುವ ಕುಟುಂಬದಲ್ಲಿಯೆ ಇದೆ ಎಂದು ಹೇಳುತ್ತಾರೆ. ಅದನ್ನು ದೇವರು ನಿರ್ಮಿಸಿದ ಸಹಜ ಸಂತೋಷದ ಸಹಕಾರಿ ವ್ಯವಸ್ಥೆ ಎಂದು ಬಲ್ಲವರು ಹೇಳಿದ್ದಾರೆ. ಸಂಗನಗೌಡ ರಂಗನಗೌಡರ ಕುಟುಂಬದಲ್ಲಿ ಬರುವ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಕ್ಕ ತಂಗಿಯರು, ಅಳಿಯಂದಿರೆಲ್ಲರನ್ನು ವಾತ್ಸಲ್ಯದಿಂದ ಕಾಣುವುದರಲ್ಲಿಯೇ ಸಂತಷ ಪಡುತ್ತಿದ್ದರು. ಮನೆಯಲ್ಲಿ ಸಂತಸದ ವಾತಾವರಣವಿತ್ತು. ಕುಟುಂಬವನ್ನು ಸ್ವರ್ಗವನ್ನಾಗಿ ಮಾಡಿಕೊಳ್ಳುವ ಕಲೆಯನ್ನು ಸಂಗನಗೌಡರು ಕರಗತ ಮಾಡಿಕೊಂಡಿದ್ದರು. ಅವರ ಅಗಲಿಕೆ ಕುಟುಂಬದಲ್ಲಿ, ಅವರ ಅಪಾರ ಬಂಧು ಬಳಗದಲ್ಲಿ ತೀವ್ರ ದು:ಖವನ್ನು ತಂದಿದೆ.

ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ, ಬದುಕು ನಿರಂತರ ಎಂದು ಹೇಳುತ್ತಾರೆ. ಹುಟ್ಟಿಗೆ ಬೆಲೆಯಿಲ್ಲ, ಸಾವಿಗೆ ಬೆಲೆ ಇಲ್ಲ, ಬದುಕಿಗೆ ಮಾತ್ರ ಬಹಳ ಬೆಲೆ ಇದೆ. ಬದುಕು ಮಾತ್ರ ನಮ್ಮ ಕೈಯಲ್ಲಿದೆ. ಆ ಬದುಕನ್ನು ಸುಂದರವಾಗಿ ಮಾಡಿಕೊಂಡವರು ಸಂಗನಗೌಡರು. ಅವರಿಗೆ ಕಷ್ಟಗಳು ಬಂದಿಲ್ಲ ಎಂದಲ್ಲ ಸಾಕಷ್ಟು ಬಂದಿವೆ. ಅವುಗಳನ್ನು ಧೈರ್ಯದಿಂದ ಎದುರಿಸಿ ಜೀವನದಲ್ಲಿ ಯಶಸ್ವಿಯಾದರು. ಸಂಗನಗೌಡರಿಗೆ ಕಷ್ಟಗಳು ಪಾಠವನ್ನು ಕಲಿಸಿದವು. ಕಲಿತ ಆ ಪಾಠಗಳು ಬದುಕಿಗೆ ಸರಿಯಾದ ದಾರಿಯನ್ನು ತೋರಿಸಿದವು. ಅವರು ಆ ದಾರಿಯಲ್ಲಿ ನಡೆದು ಯಶಸ್ವಿಯಾದರು. ಇತರರಿಗೆ ಮಾದರಿ ಎನಿಸಿದರು.

ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎಂದು ಹೇಳುತ್ತಾರೆ. ಈ ಮಾತು ಎಲ್ಲರ ಜೀವನಕ್ಕೆ ಅನ್ವಯ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಸಂಗನಗೌಡರ ಜೀವನಕ್ಕೆ ನೂರ–ಕ್ಕೆ ನೂರರಷ್ಟು ಅನ್ವಯವಾಗುತ್ತದೆ. ಅವರ ಧರ್ಮ ಪತ್ನಿ ಮಂಗಲಾ ಅವರು ಸಂಗನಗೌಡರ ಯಶಸ್ವಿಗೆ ಹೆಚ್ಚು ಕಾರಣರಾಗಿದ್ದಾರೆ. ಜೀವನದ ಬಹಳಷ್ಟು ಸಮಸ್ಯೆಗಳಿಗೆ ಅವರು ಕೈಜೋಡಿಸಿದರು. ಇದರಿಂದ ಸಂಗನಗೌಡರು ಯಶಸ್ವಿಯಾದರು. ಮಂಗಲಾ ಅವರು ಮಾಜಿ ಸಚಿವ ಎಸ್.ಆರ್.ಪಾಟೀಲರ ತಂಗಿ. ಅವರು ದೊಡ್ಡ ಮನೆತನದಿಂದ ಬಂದವರು. ದೊಡ್ಡ ಗುಣ ಅವರನ್ನು ಸಹಜವಾಗಿಯೇ ಆವರಿಸಿತ್ತು. ರಂಗನಗೌಡರ ಮನೆತನವನ್ನು ಸಹ ದೊಡ್ಡದಾಗಿ ಬೆಳೆಸಲು ಮಂಗಲಾ ಅವರು ಪ್ರಮುಖ ಪಾತ್ರ ವಹಿಸಿದರು, ಸಂಗನಗೌಡರಿಗೆ ಸಹಕರಿಸಿದರು. ಮನೆತನ ಹಿರಿದಾಗಿ ಬೆಳೆಯಿತು.

ಅವರಿಗೆ ನಾಲ್ಕು ಜನ ಮಕ್ಕಳು ಶಿವನಗೌಡ ಹಿರಿಯ ಮಗ ಬಾಪೂಜಿ ಸಹಕಾರಿ ಕ್ರೆಡಿಟ್ಸ ಸೊಸಾಟಿಯ ನಿರ್ದೇಶಕರಾಗಿದ್ದಾರೆ, ಜಾನ್ ಡೀಯರ್ ಟ್ಯಾಕ್ಟರಿಯ ಜಿಲ್ಲಾ ಡೀಲರ್ ಆಗಿದ್ದಾರೆ. ಅವರಿಗೆ ಕೃಷಿಯಲ್ಲಿಯೂ ಹೆಚ್ಚು ಆಸಕ್ತಿ ಇದೆ. ಎರಡನೇಯ ಮಗ ಗೌರಿಶಂಕರ ಅಮೇರಿಕದಲ್ಲಿ ಇಂಜನೀಯರ ಆಗಿದ್ದಾರೆ. ಹಿರಿಯ ಮಗಳು ಬನು ಗೃಹಿಣಿಯಾಗಿದ್ದಾರೆ. ಶೈಲಾ ಪ್ರೌಢ ಶಾಲಾ ಶಿಕ್ಷಕಿಯಾಗಿ ಸೇವೆಸಲ್ಲಿಸುತ್ತಿದ್ದಾರೆ. ಹೀಗೆ ಅವರ ಎಲ್ಲ ಮಕ್ಕಳು ಸುಖಿ ಜೀವನ ಸಾಗಿಸುತ್ತಿದ್ದಾರೆ. ಇದು ಅವರ ಪ್ರಾಮಾಣಿಕ ಹಾಗೂ ನಿಸ್ವಾರ್ಥ ಜೀವನಕ್ಕೆ ಸಿಕ್ಕ ಫಲವಾಗಿದೆ.

ಒಂದು ಕುಟುಂಬವೆಂದರೆ ನಾಲ್ಕು ಗೋಡೆಗಳ ಮೇಲೆ ಒಂದು ಚಾವಣಿಯ ಮನೆಯಲ್ಲ. ಪ್ರೀತಿ ಸಂತೋಷಗಳು ತುಂಬಿಕೊಂಡಿರುವ ಒಂದು ದೇವತಾ ಗೃಹ. ಅಲ್ಲಿ ಎಲ್ಲರೂ ಸುಖದಲ್ಲಿ ಬೆರೆತುಕೊಂಡು ಒಂದೇ ಮನೆಯವರಾಗಿರುತ್ತಾರೆ. ಸಂಗನಗೌಡರು ಮನೆಯ ಎಲ್ಲ ಸದಸ್ಯರ, ಬಂಧು ಬಳಗದವರ ಜೊತೆಗೆ ವಾತ್ಸಲ್ಯಮಯ ಸಂಬಂಧವನ್ನು ಇರಿಸಿಕೊಂಡು ಮನೆಯನ್ನು ಸಂತಸದ ತಾಣದಂತೆ ವಾತಾವಣವನ್ನು ನಿರ್ಮಿಸಿದ್ದಾರೆ. ಅವರ ಮನೆ ನಂದಗೋಕುಲದಂತೆ ಕಂಗೊಳಿಸುತ್ತಿದೆ.

ತಿಮ್ಮಾಪೂರಿನ ಶಿವನಗೌಡ ಹಾಗೂ ಮುದಕಮ್ಮ ಇವರ ಪುಣ್ಯ ಉದರದಲ್ಲಿ ದಿನಾಂಕ 05–01–1943 ರಲ್ಲಿ ಜನಿಸಿದ ಸಂಗನಗೌಡರು ದಿನಾಂಕ 05–03–2026 ರಂದು ನಮ್ಮನ್ನು ಅಗಲಿದರು. ಮರಣ ಕಾಲಕ್ಕೆ ಅವರಿಗೆ 84 ವರ್ಷ ವಯಸ್ಸಾಗಿತ್ತು. ಅವರಿಗೆ ಹುರುಪು ಹುಮ್ಮಸ್ಸು ಎಂದೂ ಕಡಿಮೆಯಾಗಲಿಲ್ಲ ಅವರು ಮನೆಯವರೊಡನೆ ಮಾತನಾಡುತ್ತಲೇ ನಮ್ಮನ್ನು ಅಗಲಿದ್ದಾರೆ. ಅವರಿಗೆ ಐದು ಜನ ಸಹೋದರಿಯರು. ಅವರೆಲ್ಲ ಮೊದಲೇ ಅಗಲಿದ್ದಾರೆ. ಆ ನೋವು ಅವರಿಗಿತ್ತು. ಅವರಿಗೆ ನಾಲ್ಕು ಜನ ಮಕ್ಕಳು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅವರ ಜೀವನ ಓದಿಸಿಕೊಂಡು ಹೋಗುವ ಒಂದು ರೋಚಕ ಕಾದಂಬರಿಯಂತಿದೆ. ಸುಂದರವಾದ ಕಥೆಯಂತಿದೆ. ಅವರು ಬರೆಯುವಂತ ಬದುಕನ್ನು ಬದುಕಿದರು. ಅವರು ಜೀವನದ ಹೋರಾಟದಲ್ಲಿ ಗೆದ್ದರು. ಮನೆತವಿದ್ದರೆ ಹೀಗಿರಬೇಕು ಎನ್ನುವಂತೆ ಅವರು ತಮ್ಮ ಮನೆತನವನ್ನು ನಿರ್ಮಿಸಿದರು, ಅದಕ್ಕೆ ಧರ್ಮ ಪತ್ನಿ ಮಂಗಲಾ ಅವರ ಶ್ರಮವನ್ನು ಯಾರೂ ಅಲ್ಲಗಳೆಯಲಾರರು.


## ಶಿವಗಣಾರಾಧನೆ



**ದಿ|| ಶ್ರೀ ಸಂಗನಗೌಡ ಶಿವನಗೌಡ ರಂಗನಗೌಡ್ರ**

ಇವರು ದಿನಾಂಕ 05-03-2026 ಗುರುವಾರ ಶಿವಾಧೀನರಾಗಿರುವುದನ್ನು ವಿಷಾದಪೂರ್ವಕವಾಗಿ ತಿಳಿಸುತ್ತೇವೆ.

ಮೃತರ ಶಿವಗಣಾರಾಧನೆಯನ್ನು

ಮಂಗಳವಾರ ದಿನಾಂಕ 10-03-2026 ರಂದು ಮಧ್ಯಾಹ್ನ 1.00 ಗಂಟೆಗೆ ಬಾಗಲಕೋಟ ಜಿಲ್ಲೆಯ ಹುನಗುಂದ ತಾಲ್ಲೂಕಿನ ತಿಮ್ಮಾಪೂರ ಗ್ರಾಮದ ಸ್ವಗೃಹದಲ್ಲಿ ನೆರವೇರಿಸಲಾಗುವುದು.

ಕಾರಣ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

**ದುಃಖತಪ್ತರು**

ಪತ್ನಿ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ರಂಗನಗೌಡ್ರ ಅಪಾರ ಬಂಧು ಬಳಗದವರು ಮತ್ತು ತಿಮ್ಮಾಪೂರ ಗ್ರಾಮದ ಸಮಸ್ತ ಗುರು-ಹಿರಿಯರು.

**ಮೋ : 9900022909**

ಪ್ರಕಟಣೆ :

ಶ್ರೀ ಶಂಕರಗೌಡ ಸಿದ್ದನಗೌಡ ಹಳ್ಳೂರ ಸಾಹಿತಿಗಳು ಅಳಿಯಂದಿರು ತಿಮ್ಮಾಪೂರ ಹಾಗೂ ಕುಟುಂಬ ವರ್ಗದವರು


Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)